ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್
ಪದವಿಗಾಗಿ ಸಂಪ್ರಬಂಧ

" ಕನಕದಾಸರ ರಾಮಧಾನ್ಯ ಚರಿತ್ರೆ: ಒಂದು ಸಂಘರ್ಷ ಸ್ವರೂಪ ಮತ್ತು ಚಿಂತನೆ"

ಸಂಶೋಧನಾ ವಿದ್ಯಾರ್ಥಿ

ವಜ್ರೇಶ್ವರಿ.ಎಸ್.ಮೂರ್ತಿ ಡಿ.ಸಿ.

ಮಾರ್ಗದರ್ಶಕರು

ಡಾ|| ಕೆ.ವಿ.ಶ್ರೀನಿವಾಸ ಮೂರ್ತಿ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶೀ ಸ್ಮಾರಕ ಪ್ರತಿಷ್ಠಾನ (ರಿ.)
೩ನೇ ಮುಖ್ಯರಸ್ತೆ, ನ.ರಾ.ಕಾಲೋನಿ
ಬೆಂಗಳೂರು

ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಎಂ.ಫಿಲ್
ಪದವಿಗಾಗಿ ಸಂಪ್ರಬಂಧ

" ಕನಕದಾಸರ ರಾಮಧಾನ್ಯ ಚರಿತ್ರೆ: ಒಂದು ಸಂಘರ್ಷ ಸ್ವರೂಪ ಮತ್ತು ಚಿಂತನೆ"

ಸಂಶೋಧನಾ ವಿದ್ಯಾರ್ಥಿ

ವಜ್ರೇಶ್ವರಿ.ಎಸ್.ಮೂರ್ತಿ ಡಿ.ಸಿ.

ಮಾರ್ಗದರ್ಶಕರು

ಡಾ|| ಕೆ.ವಿ.ಶ್ರೀನಿವಾಸ ಮೂರ್ತಿ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ (ರಿ.)
೩ನೇ ಮುಖ್ಯರಸ್ತೆ, ನ.ರಾ.ಕಾಲೋನಿ
ಬೆಂಗಳೂರು

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭-೦೮ನೇ ಸಾಲಿನ ಎಂ.ಫಿಲ್ ಪದವಿಗಾಗಿ, " ಕನಕದಾಸರ ರಾಮಧಾನ್ಯ ಚರಿತ್ರೆ: ಒಂದು ಸಂಘರ್ಷ ಸ್ವರೂಪ ಮತ್ತು ಚಿಂತನೆ " ಎಂಬ ಸಂಪ್ರಬಂಧವನ್ನು ಡಾ॥ ಕೆ.ವಿ.ಶ್ರೀನಿವಾಸಮೂರ್ತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ,

Vajreshwari

(ವಜ್ರೇಶ್ವರಿ ಎಸ್.ಮೂರ್ತಿ ಡಿ.ಸಿ)

ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ,

ಎಂ.ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ,

ಬಿ.ಎಂ.ಶ್ರೀ. ಪ್ರತಿಷ್ಠಾನ, (ರಿ)

ಬೆಂಗಳೂರು.

ದಿನಾಂಕ : 7·10·2008
ಸ್ಥಳ : ಬೆಂಗಳೂರು.

<u>ಮಾರ್ಗದರ್ಶಕರ ಪ್ರಮಾಣ ಪತ್ರ</u>

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೭-೦೮ನೇ ಸಾಲಿನ ಎಂ.ಫಿಲ್ ಪದವಿಗಾಗಿ ವಜ್ರೇಶ್ವರಿ.ಎಸ್ ಮೂರ್ತಿ.ಡಿ.ಸಿ ಎಂಬ ಸಂಶೋಧನ ವಿದ್ಯಾರ್ಥಿಯು, " ಕನಕದಾಸರ ರಾಮಧಾನ್ಯ ಚರಿತ್ರೆ : ಒಂದು ಸಂಘರ್ಷ ಸ್ವರೂಪ ಮತ್ತು ಚಿಂತನೆ " ಎಂಬ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಇವರ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಇಂತಿ ತಮ್ಮ ವಿಶ್ವಾಸಿ,

(ಡಾ॥ ಕೆ.ವಿ.ಶ್ರೀನಿವಾಸ ಮೂರ್ತಿ)

ಮಾರ್ಗದರ್ಶಕರು,

ಎಂ.ವಿ. ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ,

ಬಿ.ಎಂ.ಶ್ರೀ. ಪ್ರತಿಷ್ಠಾನ, (ರಿ)

ಬೆಂಗಳೂರು.

ದಿನಾಂಕ : 7/10/08

ಸ್ಥಳ : ಬೆಂಗಳೂರು.

<u>ಕನಕದಾಸರ ರಾಮಧಾನ್ಯ ಚರಿತ್ರೆ : ಒಂದು ಸಂಘರ್ಷ ಸ್ವರೂಪ ಮತ್ತು ಚಿಂತನೆ</u>

<u>ಪರಿವಿಡಿ</u>

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಸರ್ವರಿಗೂ ಹಿತವನ್ನು ಉಂಟು ಮಾಡುವುದೇ ಸಾಹಿತ್ಯ . ಸಾಹಿತ್ಯ ಜನತೆಯ ಬದುಕಿನ ಪ್ರತಿಬಿಂಬವಾಗಿದೆ. ಇದು ಶಬ್ದಾರ್ಥಗಳನ್ನು ಬಳಸಿ ಹೊರಹೊಮ್ಮಿಸಿದ ಬದುಕಿನ ಅಭಿವ್ಯಕ್ತಿಯೇ ಆಗಿದೆ. ಭಾರತೀಯರ ಬದುಕು, ಸಾಹಿತ್ಯ ಮೊದಲಿನಿಂದ ಧಾರ್ಮಿಕ ಪ್ರಧಾನವಾದದ್ದೇ ಹೌದು. ಧರ್ಮದ ನೆಲೆ ಸಾಹಿತ್ಯವನ್ನು ಹಿತವಾಗಿಸಿದ್ದು ಮಾತ್ರವಲ್ಲದೆ, ತತ್ಕಾಲೀನ ಜೀವನದ ಸಾಕ್ಷ್ಯವನ್ನಾಗಿಸಿತು ಕೂಡ. ಸಾಹಿತ್ಯ ಲಲಿತ ಕಲೆಗಳಲ್ಲಿ ಒಂದು. ಈ ಸಾಹಿತ್ಯವು ಶಾಸನ, ಕಾವ್ಯ, ಗ್ರಂಥ ಇವುಗಳಲ್ಲಿ ಒಡಮೂಡಿರುವಂಥದು. "ವಿಶ್ವಕವಿ ರವೀಂದ್ರನಾಥ ಠಾಕೂರರ ಮಾತಿನಲ್ಲಿ ಹೇಳುವುದಾದರೆ, ಮಾನಸಿಕ ವಸ್ತುವನ್ನು ಹೊರಗಿನದನ್ನಾಗಿ, ಭಾವದ ವಸ್ತುವನ್ನು ಭಾಷೆಯದನ್ನಾಗಿ, ತನ್ನದಾದ ವಸ್ತುವನ್ನು ವಿಶ್ವಮಾನವದನ್ನಾಗಿ, ಕ್ಷಣಕಾಲದ ವಸ್ತುವನ್ನು ಚಿರಕಾಲದನ್ನಾಗಿ ಮಾಡುವುದೇ ಸಾಹಿತ್ಯ ".[೧] ಸಾಹಿತ್ಯದಲ್ಲಿ ಆಯಾಯ ಕಾಲದ ಬದುಕಿನ ಮೌಲ್ಯಗಳು ಪ್ರತಿಬಿಂಬಿತವಾಗಿವೆಯಾದರೂ ಎಲ್ಲಾದಕ್ಕೂ ಧಾರ್ಮಿಕತೆಯ ಕವಚವಿದ್ದೇ ಇದೆ. ಯಾವುದೇ ಮತಧರ್ಮದ ಪ್ರಸಾರ, ಪ್ರಚಲಿತಗೊಳಿಸುವ, ಜನತೆಯ ಸಂಪರ್ಕವಿರಿಸಿಕೊಳ್ಳುವ ಸಾಧನ ಭಾಷೆ. ಸಾಹಿತ್ಯವನ್ನು ಹಿಡಿದಿಡುವ ಸಾಧನವೂ ಭಾಷೆ.

ಸಾಹಿತಿಯಾದವ ಜೀವನವನ್ನು ತೆರೆದ ಕಣ್ಣಿನಿಂದ ನೋಡಿ, ಅಲ್ಲಿ ತಾನು ಕಂಡ ಕಾಣ್ಕೆಯನ್ನು ಹೃದಯದೆರೆದು ಸ್ವಾಗತಿಸಿ ಸಂಗ್ರಹಿಸುತ್ತಾನೆ. ಅನಂತರ ತನ್ನ ಸಂಸ್ಕಾರ ಬಲದಿಂದ ಅವನ್ನು ಪರಿಷ್ಕರಿಸಿ, ಯೋಗ್ಯವಾದುದನ್ನು ಸ್ಥಿತಗೊಳಿಸಿ, ಪ್ರಸಾರ ಮಾಡುತ್ತಾನೆ. ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ದೀರ್ಘ ಪರಂಪರೆ ಇದೆ. ಹತ್ತನೇ ಶತಮಾನದ ಅವಧಿಯಲ್ಲಿ ಸಂಸ್ಕೃತ ಭಾಷೆಯ ಪ್ರಭಾವ ಮತ್ತು ಜೈನಧರ್ಮದ ಪ್ರೇರಣೆಯಿಂದ ಪಂಪಾದಿಗಳು ಧಾರ್ಮಿಕ ಮತ್ತು ಲೌಕಿಕವೆಂಬ ಕಾವ್ಯ ಧೋರಣೆಗಳನ್ನಿಟ್ಟುಕೊಂಡು ಚಂಪು ಸಾಹಿತ್ಯ ಪ್ರಕಾರದಲ್ಲಿ ಕಾವ್ಯ ರಚನೆಗೈದರು. ಚಂಪೂ ಸಾಹಿತ್ಯವನ್ನು ಮಾರ್ಗ ಸಾಹಿತ್ಯ ಎಂದು ಕರೆಯಲಾಗುತ್ತದೆ. ಚಂಪೂ ಕಾವ್ಯ ರಚನೆ ಮತ್ತು ಆಸ್ವಾದನೆ ಆ ಕಾಲದಲ್ಲಿ ವಿದ್ವಾಂಸರಿಗೆ ಮಾತ್ರ ಮೀಸಲಾಗಿತ್ತು. ಕನ್ನಡ

ಸಾಹಿತ್ಯ ತನ್ನ ಬಿಗಿಯಾದ ಮಾರ್ಗದ ಹಾದಿಯಿಂದ ಕವಲೊಡೆದು ನಡುಗನ್ನಡದ ದೇಸಿರೂಪದಲ್ಲಿ ವಚನಕಾರರು ರಚಿಸಿದ ವಚನಗಳ ಮೂಲಕ ಜನತೆಯ ಮನವೊಲಿಸಿದುದು ಗಮನಾರ್ಹ.

ಕನ್ನಡ ಸಾಹಿತ್ಯದಲ್ಲಿ ವಚನಗಳು ಭಕ್ತಿ ಸಾಹಿತ್ಯ ಪರಂಪರೆಯ ಒಂದು ಘಟ್ಟವಾದರೆ, ಕೀರ್ತನೆಗಳು ಮತ್ತೊಂದು ಘಟ್ಟವಾಗಿದೆ. ಹದಿನೈದನೇ ಶತಮಾನದಲ್ಲಿ ಹರಿದಾಸರು ರಚಿಸಿದ ಒಂದು ಪ್ರಕಾರವನ್ನು ಕೀರ್ತನೆಗಳು ಎಂದು ಕರೆಯುವುದು ರೂಢಿ. " ಕೀರ್ತನೆ " ಎಂಬ ಮಾತಿಗೆ ಸ್ತುತಿ, ಸ್ತೋತ್ರ ಎಂಬ ಅರ್ಥಗಳಿವೆ. ಸಮಾಜದ ದುಷ್ಪರೀತಿನೀತಿಗಳನ್ನು ಖಂಡಿಸುತ್ತಾ, ಭಕ್ತಿಗೆ ವಿಮುಖವಾದ ಸ್ವಭಾವನ್ನು ವಿರೋಧಿಸುತ್ತಾ ಸಮಾಜದಲ್ಲಿ ಸತ್ಯ, ಧರ್ಮ, ಭಕ್ತಿ, ಸಜ್ಜನಿಕೆ, ಜಾತ್ಯಾತೀತ ಭಾವನೆ ಮತ್ತು ಸಾಮಾಜಿಕ ಮೌಲ್ಯಗಳನ್ನು ಕೀರ್ತನಕಾರರು ತಮ್ಮ ಸಾಹಿತ್ಯದಲ್ಲಿ ಪ್ರತಿಪಾದಿಸಿದ್ದಾರೆ. ಪುರಂದರದಾಸರ ಸಮಕಾಲೀನರಾದ ಕನಕದಾಸರು ಹರಿದಾಸ ಪರಂಪರೆಯ ಪ್ರಮುಖ ಕವಿಗಳು.

ಪ್ರಸ್ತುತ ಅಧ್ಯಯನ ಕನಕದಾಸರ " ರಾಮಧಾನ್ಯ ಚರಿತ್ರೆ " ಬಹಳ ಸಣ್ಣ ಕಾವ್ಯ. ಇದು ಸಾಂಕೇತಿಕವಾಗಿ ' ರಾಗಿ–ಭತ್ತ ' ಗಳ ನಡುವಿನ ಸಂಘರ್ಷದ ಕಥೆಯಾಗಿದೆ. ಭಾಮಿನಿ ಷಟ್ಪದಿಯ ಈ ಕಾವ್ಯವು ಸಂಭಾಷಣೆಯನ್ನು ಪ್ರಧಾನವಾಗುಳ್ಳ ರೂಪಕ ಕಥೆ. ಈ ಕಥೆಯು ಕನಕದಾಸರು ಅನುಭವಿಸಿರುವ ಮಾನಸಿಕ ತೊಳಲಾಟಗಳು ಹಾಗೂ ಸಮಾಜದ ಪರಿಸ್ಥಿತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಕೃತಿಯಲ್ಲಿ ಅನುಸರಿಸಿರುವ ತಂತ್ರ ವಿನೂತನವಾಗಿದೆ. ಸಾಹಿತ್ಯದ ಗುಣಗಳ ದೃಷ್ಟಿಯಿಂದಲೂ ಈ ಕೃತಿಗೆ ಮಹೋನ್ನತ ಸ್ಥಾನವಿದೆ. ಜಾತಿ–ಮತಗಳ ಬಗ್ಗೆ ಸಂಕುಚಿತ ಭಾವನೆಯನ್ನು ಹೊಂದಿರದ ಕನಕದಾಸರ ಹೃದಯ ವೈಶಾಲ್ಯ ಈ ಕೃತಿಯಲ್ಲಿ ವ್ಯಕ್ತವಾಗಿದೆ. ಹಾಗೂ ಅಧ್ಯಯನಯೋಗ್ಯವಾಗಿದೆ.

ಈ ಕೃತಿಯಲ್ಲಿ ಬರುವ ವ್ರೀಹಿ (ಭತ್ತ) ಮತ್ತು ನರೆದಲೆಗ (ರಾಗಿ) ರ ಸಂವಾದ, ಪ್ರೊ। ದೇಜಗೌ ರವರಿಗೆ ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಣ ವರ್ಗ ಹೋರಾಟವಾಗಿ ಕಂಡಿದ್ದರೆ, ಡಾ। ಹಿ.ಶಿ.ರಾಮಚಂದ್ರೇಗೌಡರಿಗೆ ಅದು ಬಂಡಾಯದ ಧನಿಯಾಗಿ ಕೇಳಿಸಿದೆ. ಅದೇ ಪ್ರಸಂಗ ಡಾ। ಎಂ. ಚಿದಾನಂದ ಮೂರ್ತಿಯವರಿಗೆ ಶ್ರೀಮಂತ ಮತ್ತು ಬಡವರ ಕುರಿತ ಒಂದು ಅಲಿಗರಿ (Allegory) ಯಾಗಿ ಗೋಚರಿಸಿದ್ದರೆ, ಡಾ॥ ಸಾ.ಶಿ.ಮರುಳಯ್ಯ ರವರಿಗೆ ಅದು ಸಂಸ್ಕೃತ ಮತ್ತ ಕನ್ನಡ ನಡುವಣ ಭಾಷಾವಾದವಾಗಿ ಕಂಡಿದೆ.[3] ಈ ಹಿನ್ನಲೆಯಲ್ಲಿ ಈ ಅಧ್ಯಯನವು 'ವರ್ಣ-ವರ್ಗ-ಜಾತಿ-ಭಾಷೆ' ಯ ಸಾಮಾಜಿಕ ಸಂಘರ್ಷ ಸ್ವರೂಪವನ್ನು ಚಿಂತಿಸುತ್ತಾ, ಅದರಲ್ಲಿನ 'ಬಂಡಾಯ ಧ್ವನಿ' ಯನ್ನು ಗುರುತಿಸಿದೆ. ಅಷ್ಟೇ ಅಲ್ಲದೆ ಪೌರಾಣಿಕ ದೃಷ್ಟಿಕೋನ ಮತ್ತು ಜನಪದೀಯ ಸೊಗಡಿನ ಮೇಲೂ ಬೆಳಕು ಚೆಲ್ಲುವಂತಿದೆ.

ಕನಕದಾಸರು ರಾಮಧಾನ್ಯ ಚರಿತ್ರೆಯ ಮೂಲಕ ಸಮಾಜದ ನೀತಿನೆಲೆಗಟ್ಟನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಕುಲ ಮತ್ತು ವರ್ಣಾಶ್ರಮ ಧರ್ಮಗಳನ್ನು ಪ್ರೀತಿಸಿ, ಕೆಳಗಿನವರನ್ನು ಕೀಳಾಗಿ ಕಂಡು, ದುರಭಿಮಾನ ತೋರಿಸುವುದನ್ನು ಕನಕದಾಸರು ಕಟುವಾಗಿ ಟೀಕಿಸಿದ್ದಾರೆ. ಮಾನವನ ಅಭಿವೃದ್ಧಿಗೆ ಕಂಟಕವಾಗಿರುವ ಯಾವ ಕಟ್ಟುಪಾಡು ಭಗವಂತನ ಇಚ್ಛೆಗೆ ವಿರುದ್ಧವಾದುದು. ಅದನ್ನು ಅನುಸರಿಸಿ ನಾವು ಸಮಾಜದಲ್ಲಿ ಯಾವುದೇ ವ್ಯಕ್ತಿಯನ್ನಾಗಲಿ, ಸಮಾಜದ ಯಾವ ಒಂದು ಅಂಶವನ್ನಾಗಲಿ ಶೋಷಣೆಗೆ ಒಡ್ಡಬಾರದು ಎಂಬುದು ಕನಕದಾಸರ ಕಟು ವಿಮರ್ಶೆಯ ಅಂತರಂಗವೆಂದು ಈ ಮೂಲಕ ನಮಗೆ ತಿಳಿಯುತ್ತದೆ.

ಅಂದಿನ ಆ ಸಮಾಜದಲ್ಲಿ ಅವಕಾಶಗಳಿಂದ ವಂಚಿತರಾದ ಕೆಳವರ್ಗದವರು ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕವಾಗಿ ಮತ್ತು ಆರ್ಥಿಕ ಅಸಮಾನತೆಯ ಶೋಷಣೆಗೆ ಒಳಗಾದ ಪರಿಣಾಮ ಮಾನಸಿಕ ಸ್ಥೈರ್ಯ ಕಳೆದುಕೊಂಡು ನೋವು-ಹಿಂಸೆ-ಅವಮಾನಗಳಿಂದ ಮೇಲ್ವರ್ಗದವರ ಪಾದಗಳಡಿಯಲ್ಲಿ ನಲುಗಿ ಹೋಗಿದ್ದರು. ಮೂಲತಃ ಕನಕದಾಸರು ಸಾಮಾನ್ಯ ವರ್ಗದಿಂದ ಬಂದವರಲ್ಲದೆ, ಕೆಳಕುಲಕ್ಕೆ

ಸೇರಿದವರಾದ್ದರಿಂದ ಮೇಲ್ಜಾತಿಯವರಿಂದ ಅವಮಾನ ಶೋಷಣೆಯನ್ನು ಖುದ್ದಾಗಿ ಅನುಭವಿಸಿದ್ದರು. ಮೌನದಿಂದ ಮೂಕರಂತೆ ಶೋಷಣೆಯನ್ನು ಅನುಭವಿಸಿದ ಎಂಥವರಿಗಾದರೂ ತಾಳ್ಮೆಯ ಕಟ್ಟೆ ಒಡೆದಾಗ ಪ್ರತಿಭಟನೆ – ಬಂಡಾಯದ ಮೂಲಕ ವ್ಯಕ್ತವಾಗುತ್ತದೆ. ಅದು (ಅ) ಕ್ರಾಂತಿ – ಚಳುವಳಿಯ ಸ್ವರೂಪದಲ್ಲಾದರೂ ಇರಬಹುದು. ಇಲ್ಲವೆ (ಆ) ಮೊನಚಾದ ಬರವಣಿಗೆಯ ಮೂಲಕವಾದರೂ ನಡೆಯಬಹುದು. ಇಲ್ಲಿ ಕನಕದಾಸರು ಎರಡನೆಯ ಮಾರ್ಗದ ಮುಖೇನ ತಮ್ಮ ಕಟು ನಿಲವುಗಳನ್ನು ವ್ಯಕ್ತಪಡಿಸಿದ್ದಾರೆ. " ಹೂವಿನಿಂದ ನಾರು ಸ್ವರ್ಗ ಸೇರಿತು " ಎಂಬ ಮಾತಿನಂತೆ ರಾಮನ ನಾಮ ಪಡೆದು ಬಡವರ ಆಹಾರವಾದ ರಾಗಿ ರಾಮತ್ವದ ಸಿದ್ಧಿಗೇರಿದೆ ಎಂದು ಹೇಳಬಹುದು.

ಪ್ರಸ್ತುತ ಅಧ್ಯಯನದಲ್ಲಿ ರಾಗಿಯು ಕೀಳು ಜಾತಿ, ಕೆಳ ವರ್ಗ, ಭಾಷೆಯ ಹಿನ್ನಲೆಯಿಂದ ಕನ್ನಡ ಇವುಗಳಿಗೆ ಸಂಕೇತವಾಗಿ ನಿಂತಿದ್ದು, ಯಾವಾಗ ರಾಗಿಯು ರಾಮಧಾನ್ಯವಾಯಿತೋ ಆಗಲೇ ಈ ಕೆಳವರ್ಗದವರನ್ನು ರಾಮನು ತುಂಬು ಹೃದಯದಿಂದ ಮೆಚ್ಚಿದವನಾಗಿ, ಸಮಾಜದಲ್ಲಿ ಅವರಿಗೂ ಮಾನ್ಯತೆ ದೊರೆತಂತಾಯಿತು.

ನರೆದಲೆಗ, ನೆಲ್ಲು, ಹಾರಕ, ಬರಗು, ಜೋಳ, ಕಂಬು, ಉರುತರದ ರವೆ, ಎವೆ ಮತ್ತು ನವಣೆ – ಎಂಬ ನವಧಾನ್ಯಗಳಲ್ಲಿ ರಾಗಿಯೇ ಮೇಲು ಎಂಬ ಮಾತು ಗೌತಮರ ಮೂಲಕ ಹೊರಬಿದ್ದೊಡನೆ ಸಹಿಸದ ಭತ್ತ 'ಕುಲವ ನಾಲಗೆಯಾಡಿಸಿತು' ಎಂಬಂತೆ ಅಕ್ಕಿಯನ್ನು ತಿಂಬುವರ ಸೊಕ್ಕಿನ ನಾಲಗೆ ರಾಗಿಯನ್ನು ತಿಂಬುವರನ್ನು ಶೂದ್ರರು ಎಂದು ಕರೆದದುಲ್ಲದೆ, ರಾಗಿಯನ್ನು ಶೂದ್ರಧಾನ್ಯವೆಂದು ಹೀಯಾಳಿಸಿಬಿಟ್ಟಿತು. ಭತ್ತ ಮತ್ತು ರಾಗಿಗೆ ತುಂಬಿದ ಸಭೆಯಲ್ಲಿ ವಾಗ್ಯುದ್ಧ ಪ್ರಾರಂಭವಾಯಿತು.[೨] ಈ ಭಾಗದಲ್ಲಿ ನಮ್ಮ ಅಧ್ಯಯನ ಕೇಂದ್ರಭಾಗವಾದ ಸಾಮಾಜಿಕ ಸಂಘರ್ಷ ಸ್ವರೂಪವನ್ನು ತಿಳಿಸುತ್ತಾ ಕನಕದಾಸರು ವರ್ಣ–ವರ್ಗ ವ್ಯವಸ್ಥೆಯಡಿಯಲ್ಲಿ ಸಿಲುಕಿದವರಾದ್ದರಿಂದ ಅವರು ತಮ್ಮ ಸಾಹಿತ್ಯದಲ್ಲಿ ಸಮಾಜದ ಏಳಿಗೆಗೆ ಅಗತ್ಯವೆನಿಸುವ ಚಿಂತನೆಗಳನ್ನು ಹರಿಸಿದ್ದಾರೆ.

ಪಂಚತಂತ್ರದ ಕಥೆಗಳಲ್ಲಿ ಕವಿಯು ಮಾನವನ ಪ್ರತಿನಿಧಿಯಾಗಿ ಪ್ರಾಣಿಗಳನ್ನು ನಿಲ್ಲಿಸಿದಂತೆ, ಕನಕದಾಸರು ಈ ಕಾವ್ಯದಲ್ಲಿ ಮಾನವ ಪ್ರತಿನಿದಿ ಇಲ್ಲವೆ, ಸಮಾಜದ ವರ್ಗಗಳ ಪ್ರತಿನಿಧಿಗಳಾಗಿ ಧಾನ್ಯಗಳನ್ನು ನಿಲ್ಲಿಸಿದ್ದಾರೆ. ಈ ಕಾವ್ಯದಲ್ಲಿ ಅತಿಥಿ ಸತ್ಕಾರ, ನವಧಾನ್ಯಗಳ ಪರಿಚಯ, ಧಾನ್ಯಗಳ ಮೂಲಕ ಮಾತನಾಡಿಸುವ ಕಲೆಗಾರಿಕೆ, ಸಾಮಾನ್ಯ ಜನರ ಬದುಕು – ಬವಣೆ, ಧಾನ್ಯಗಳ ನಡುವಿನ ತಾರತಮ್ಯ, ರಾಗಿ ಬೆಳೆಯ ಮಹತ್ವ, ಸಾಮರಸ್ಯದ ಅಗತ್ಯತೆ – ಹೀಗೆ ಅನೇಕ ಸಾಮಾಜಿಕ ಸ್ಥಿತಿಗತಿ ಮೇಲೆ ಬೆಳಕು ಚೆಲ್ಲುವ ಕಾವ್ಯ ಇದಾಗಿರುವುದರಿಂದ ಜಾನಪದೀಯ ತಂತ್ರ – ಕೌಶಲ್ಯ – ರಚನೆಗಳ ಪ್ರಭಾವ ದಟ್ಟವಾಗಿ ಮೈಗೂಡಿದೆ.

ಆಧುನಿಕ ಸಾಹಿತ್ಯ ಸಂದರ್ಭಗಳಲ್ಲಿ ಬಂಡಾಯ ನೆಲೆಯ ಚಿಂತನೆಗಳು ಇಂದು ಹೆಚ್ಚು ಮಾನ್ಯತೆಯನ್ನು ಗಳಿಸಿದೆ. ಯಾವುದೇ ಸಾಹಿತಿಯ ಬರಹಗಳಲ್ಲಿ ಗುಪ್ತವಾಗಿರುವ ಚಿಂತನೆಗಳ ಸ್ವರೂಪವನ್ನು ಗುರುತಿಸಿ, ಪ್ರಸ್ತುತ ಪಡಿಸುವುದು ' ಬಂಡಾಯದ ಧ್ವನಿ ' ಎನ್ನಿಸಿಕೊಳ್ಳುವುದು. ಈ ಬಗೆಯ ಧೋರಣೆ ಅವರ ಕೀರ್ತನೆಗಳಲ್ಲಿ ಮತ್ತು 'ರಾಮಧಾನ್ಯ ಚರಿತ್ರೆ' ಯಲ್ಲಿ ಸ್ಪಷ್ಟವಾಗಿ ಮೂಡಿದೆ.

ಕನಕದಾಸರ ಈ ಬಗೆಯ ಸಾಮಾಜಿಕ ಚಿಂತನೆಯು ಪ್ರಸ್ತುತ ಸಮಾಜಕ್ಕೆ ಅಗತ್ಯವೂ ಹೌದು. ಮೇಲು– ಕೀಳುಗಳೆಂಬ ಸಮಸ್ಯೆಗಳಿಂದ ತತ್ತರಿಸುತ್ತಿರುವ ಸಮಾಜಕ್ಕೆ ಸಮಾನತೆ, ಮಾನವೀಯತೆ ಮತ್ತು ಮೈತ್ರಿಯಂತಹ ಭಾವಗಳು ಅಗತ್ಯವೆನಿಸಿವೆ. ಈ ಹಿನ್ನಲೆಯಲ್ಲಿ ಕನಕದಾಸರು ತಮ್ಮ ಸಮಕಾಲೀನ ಸಮಾಜದ ಒಟ್ಟು ನೆಲೆಗಳನ್ನು ಪ್ರಾಮಾಣಿಕವಾಗಿ ಗಮನಿಸಿ ಅದರೊಂದಿಗೆ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಅವರ ಸಾಹಿತ್ಯ ದರ್ಶನ ನಮಗೆ ಇಂದಿಗೆ ಅವಶ್ಯವೆನಿಸಿದೆ. ಅಧ್ಯಯನದ ವ್ಯಾಪ್ತಿಯು ಮಿತಿಬದ್ಧವಾಗಿರುವುದರಿಂದ ಕನಕದಾಸರ 'ರಾಮಧಾನ್ಯ ಚರಿತ್ರೆ' (ಸಂ.–ದೇಜಗೌ) ಯನ್ನು ಅಭ್ಯಸಿಸಿದ್ದು, ಕನಕದಾಸರ ಶೋಷಣೆ, ಸಮಾನತೆಯ ಮೇಲೆ ಬೆಳಕು ಚೆಲ್ಲುವ ಕೆಲವು ಕೀರ್ತನೆಗಳನ್ನು ಔಚಿತ್ಯಪೂರ್ಣವಾಗಿ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ.

ಹರಿದಾಸ ಸಾಹಿತ್ಯ, ವಚನಸಾಹಿತ್ಯಗಳನ್ನು ಕನ್ನಡ ಸಾಹಿತ್ಯ ಸರಸ್ವತಿಯ ಎರಡು ಕಣ್ಣುಗಳು, ಜನವೊಲಿಸುವ ಸಾಹಿತ್ಯ, ಸಾಹಿತ್ಯ ತವನಿಧಿ .. ಎಂದೆಲ್ಲ ವಿದ್ವಾಂಸರು ಕರೆದಿದ್ದಾರೆ. ಈ ಸಂದರ್ಭಗಳಲ್ಲಿನ ಸಮಾಜದ ಸಾಮಾಜಿಕ – ಧಾರ್ಮಿಕ ಸ್ಥಿತಿಗತಿಗಳು, ಸುಧಾರಕರ ಮೇಲೂ ನಮ್ಮ ಅಧ್ಯಯನ ಸಂಕ್ಷಿಪ್ತವಾಗಿ ಬೆಳಕು ಚೆಲ್ಲಿದೆ.

ಕವಿ ಕನಕದಾಸರು ತಮ್ಮ ಈ ಕಾವ್ಯದಲ್ಲಿ ಶ್ರೀರಾಮನ ಮಹಿಮೆಯನ್ನು ಮತ್ತು ರಾಗಿಯ ಸಾಮಾಜಿಕ ಸೇವೆಗಳೆರಡನ್ನೂ ಸಾಧಿಸಿದ್ದಾರೆ. ಈ ಮೂಲಕ ಅವರ ಪೌರಾಣಿಕ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆ ಅದಮ್ಯವಾದದ್ದು. ಈ ವಿಷಯಗಳನ್ನು ಜನಸಾಮಾನ್ಯರಿಗೆ ಮನಮುಟ್ಟುವಂತೆ, ಸರಳ ಸುಲಭವಾದ ಭಾಷೆಯಲ್ಲಿ ಕವಿ ರಚಿಸಿದ್ದಾರೆ. ಆದ್ದರಿಂದ ಇದು ಭೂಮಿಗೆ ಅಚ್ಚರಿಯಾಗುವಂತಹ ಅಪೂರ್ವ ಕಾವ್ಯವೆನ್ನಬಹುದು. ಈ ಕೃತಿಯ ಸಾಮಾಜಿಕ ಒಳನೋಟಗಳು, ಇಲ್ಲಿನ ಬಂಡಾಯ ಧ್ವನಿಯ ಕಡೆ ನಮ್ಮ ಅಧ್ಯಯನ ಗಮನ ಹರಿಸಿದೆ.

ಅಡಿ ಟಿಪ್ಪಣಿಗಳು

೧. (ಅ) **ಹರಿದಾಸ ಆಂದೋಲನ ಒಂದು ಅಧ್ಯಯನ:** – ಡಾ॥ ಎನ್. ಕೆ. ರಾಮಶೇಷನ್, ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರ, ಮೈಸೂರು–೦೮, ೧೯೯೧. (ಪು.ಸಂ.೩).

(ಆ) **ಶರಣ ಸೌರಭ:** – ಟಿ.ಆರ್.ಮಹಾದೇವಯ್ಯ, ಭಾಗ್ಯರವಿ ಪ್ರಕಾಶನ, ಬೆಂಗಳೂರು–೪೦, ೧೯೮೮. (ಪುಟ ಸಂಖ್ಯೆ ೦೧)

೨. **ಕನಕ ಸಾಹಿತ್ಯ ದರ್ಶನ ಸಂಪುಟ–೨ :–** **ಸಂ.**– ಡಾ॥ಸಾ.ಶಿ.ಮರುಳಯ್ಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, (ಪ್ರಸ್ತಾವನೆ, ಪುಟ–X).

೩. **ಮಹಾತ್ಮ ಕನಕದಾಸ ಪ್ರಶಸ್ತಿ:** – ಪ್ರಕಾಶಕರು, ರಾಜ್ಯ ಸಮಿತಿ ಕನಕದಾಸರ ನಾಲ್ಕನೆಯ ಶತಮಾನೋತ್ಸವ ರವೀಂದ್ರ ಕಲಾಕ್ಷೇತ್ರ, ಬೆಂಗಳೂರು–೨, (ಪು.ಸಂ.೧೬೮).

ಅಧ್ಯಾಯ -೨

ಕವಿ ಚರಿತ್ರೆ

ಕನಕದಾಸರ ಜೀವನ:-

ಕರ್ನಾಟಕದ ಧಾರವಾಡ ಜಿಲ್ಲೆಯ ಬಾಡ ಗ್ರಾಮದಲ್ಲಿ ಪಾಳೆಯಗಾರ ವಂಶದಲ್ಲಿ ಹುಟ್ಟಿದ ಕನಕದಾಸನ ಬದುಕು ರೋಮಾಂಚಕ ಘಟನೆಗಳಿಂದ ಕೂಡಿದೆ. ಕನಕನ ತಂದೆ ವಿಜಯನಗರ ದೊರೆಗಳ ದಂಡನಾಯಕರಲೊಬ್ಬನಾದ ಭೀರಪ್ಪ, ತಾಯಿ ಬಚ್ಚಮ್ಮ ಇವರ ಮಗ ತಿಮ್ಮಪ್ಪ . ಈ ತಿಮ್ಮಪ್ಪನೇ ಮುಂದೆ ಕನಕದಾಸನಾದದ್ದು. ಈ ಹೆಸರಿಗೆ ಭೂಶೋಧನ ಕಾರ್ಯದಲ್ಲಿ ವಶವಾದ ಧನರಾಶಿ ಕಾರಣವೆಂಬ ನಂಬಿಕೆ ಇದೆ. ಆಗ ದೊರೆತ ಕೊಪ್ಪರಿಗೆ ಹಣದಿಂದ ಆತ ಕಾಗಿನೆಲೆಯಲ್ಲಿ ಭವ್ಯ ದೇವಾಲಯ ಕಟ್ಟಿಸಿದನೆಂಬ ಪ್ರತೀತಿಯಿದೆ.[(ಚಿತ್ರ-೧)] ಚಿಕ್ಕವಯಸ್ಸಿನಲ್ಲಿಯೆ ಆತನ ತಂದೆ, ತಾಯಿ ತೀರಿಹೋದ ಪರಿಣಾಮವಾಗಿ ಸಂಬಂಧಿಗಳ ಮನೆಯಲ್ಲೇ ಬೆಳೆದ ಇವನು ಮದುವೆಯಾದ ಮೇಲೆ ತನ್ನ ಹೆಂಡತಿಯನ್ನು ಸ್ವಲ್ಪಕಾಲದಲ್ಲಿಯೇ ಕಳೆದುಕೊಂಡನು. ಹೀಗೆ ಕ್ರಮವಾಗಿ ಸಂಭವಿಸಿದ ಸಾವಿನ ನೋವಿನಿಂದ ತಿಮ್ಮಪ್ಪನ ಜೀವನ, ಶೃಂಖಲೆಗಳಿಂದ ಬಿಡಿಸಿಕೊಂಡು ದೇವರ ಸೇವೆಗೆ ಮುಡಿಪಾಯಿತೆನ್ನುತ್ತಾರೆ. ಮೊಟ್ಟಮೊದಲು ಶ್ರೀ ವೈಷ್ಣವ ಗುರುಗಳಾದ ರಾಮಾನುಜ ಮತದ ಶ್ರೀ ತಾತಾಚಾರ್ಯರನ್ನು ಭೇಟಿಯಾಗಿ, ಅವರ ಉಪದೇಶದಿಂದ ನೆಮ್ಮದಿ ಪಡೆದ ಕನಕನಾಯಕ ತನ್ನನ್ನು ಶ್ರೀಹರಿಗೆ ಅರ್ಪಿಸಿಕೊಂಡು ದಾಸನಾಗುವುದಾಗಿ ನಿರ್ಧರಿಸಿದನು. ಹೀಗೆ ಕನಕನಾಯಕ 'ಕನಕದಾಸ'ರಾದರು. ಕಾಲಕ್ರಮೇಣ ಶ್ರೀ ವ್ಯಾಸರಾಯರ ಪ್ರಿಯಶಿಷ್ಯರಾದರು. ಕನಕದಾಸರು ಕೃಷ್ಣದೇವರಾಯನ ಕಾಲದವನೂ, ಕ್ರಿ.ಶ.ಹದಿನಾರನೆಯ ಶತಮಾನದವನೆಂದು ಖಚಿತವಾಗಿ ಹೇಳಬಹುದು. ಈತ ಒಂದು ನೂರು ವರ್ಷ ಶತಾಯುವಾಗಿ ಬಾಳಿದನೆಂದು ಪ್ರತೀತಿಯೂ ಇದೆ. ಕನಕದಾಸ ಜಾತಿಯಲ್ಲಿ ಬೇಡ (ನಾಯಕ) ನೆಂದೂ, ಕುರುಬನೆಂದೂ ಸೂಚನೆಗಳಿವೆ. ೧ (ಆಧಾರ).

ಆಧ್ಯಾತ್ಮ ಹಾಗೂ ಸಾಮಾಜಿಕ ಮುಖಿಗಳಾಗಿ ಮಧ್ಯಯುಗೀನ ಸಾಹಿತ್ಯ ಪರಂಪರೆಯನ್ನು ಶಿಖರಕ್ಕೇರಿಸಿದ ಕವಿ ಕನಕದಾಸರು. ವರಕವಿಗಳೂ, ಕೀರ್ತನಕಾರರು, ಸಂತರೂ ಎನ್ನಿಸಿಕೊಂಡ ಕನಕದಾಸರು ಕರ್ನಾಟಕ ಹರಿದಾಸ ಸಾಹಿತ್ಯದ ಅಶ್ವಿನಿದೇವತೆಗಳಲ್ಲೊಬ್ಬರು – ಎಂದು ದೇಜಗೌ ರವರು ತಮ್ಮ ಕನಕದರ್ಶನ ಕೃತಿಯ ಮೊದಲಲ್ಲೇ ನುಡಿದಿದ್ದಾರೆ.

ಕನಕದಾಸರು ಒಟ್ಟು ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಅವು, ಸಾಂಗತ್ಯ ಛಂದದಲ್ಲಿ ರಚನೆಯಾದ ಶೃಂಗಾರ ಕಾವ್ಯ ಹಾಗೂ ಪೌರಾಣಿಕ ವಸ್ತುವನ್ನು ಸಮಕಾಲೀನದಲ್ಲಿಟ್ಟು ನೋಡುವ ಒಂದು ಮೌಲಿಕ ಕೃತಿ – **'ಮೋಹನ ತರಂಗಿಣಿ'**. ನಳ–ದಮಯಂತಿಯರ ಅತ್ಯಂತ ಸುಂದರ ಪ್ರೇಮ, ವಿರಹ, ಪುನಸ್ಸಮಾಗಮದ ಶೃಂಗಾರ ಕಾವ್ಯ – **'ನಳಚರಿತ್ರೆ'**. ಹರಿನಾಮ ಸಂಕೀರ್ತನೆ ಮತ್ತು ಕನಕದಾಸರ ಭಕ್ತಿಯ ದ್ಯೋತಕವೆನಿಸಿದ ಅವರ **'ಹರಿಭಕ್ತ ಸಾರ'** ಮತ್ತು ವರ್ಗ ಸಂಘರ್ಷ ಪ್ರಧಾನವಾಗುಳ್ಳ ಕೃತಿ – **'ರಾಮಧಾನ್ಯ ಚರಿತ್ರೆ'** ಮತ್ತು ಕನಕದಾಸರದೆ ಎನ್ನುವ **'ನೃಸಿಂಹಸ್ತವ'** ಎಂಬ ಕೃತಿ ಅಲಭ್ಯವಾಗಿದೆ.

ಕನಕದಾಸರು ದಾಸಶ್ರೇಷ್ಠರು. ಅವರು ಅಪರೂಪದ ಕೀರ್ತನೆಗಳನ್ನು ರಚನೆ ಮಾಡಿದ್ದಾರೆ. ಉಳಿದ ಹರಿದಾಸರಿಗಿಂತಲೂ ಕನಕದಾಸರ ಕೀರ್ತನೆಗಳು ಭಿನ್ನವಾಗಿವೆ. ಇವುಗಳಲ್ಲಿ ಸಾಮಾಜಿಕ ಚಿಂತನೆಯಿದೆ. ವರ್ಗ, ವರ್ಣ, ಅಸ್ಪೃಶ್ಯತೆ, ಅಸಮಾನತೆ, ಅಸಂಗತತೆಗಳ ಬಡವ–ಬಲ್ಲಿದ, ಮೇಲು–ಕೀಳುಗಳ ತಾರತಮ್ಯ, ಮೌಢ್ಯ – ಕಂದಾಚಾರಗಳ ನಿಷ್ಠುರ ಪ್ರತಿಕ್ರಿಯೆಗಳನ್ನು ದಟ್ಟವಾಗಿ ಕಾಣಬಹುದು. ಕೀರ್ತನೆಗಳಲ್ಲಿ ಸಾಮಾನ್ಯರ ಬದುಕು, ನೋವು – ನಲಿವು, ಸಮಾಜದ ಒಳಿತು – ಕೆಡುಕು, ಸಮಾನತೆ, ಮೌಢ್ಯ – ಕಂದಾಚಾರಗಳ ನಾಶ, ನೀತಿಬೋಧೆ, ಕೃಷ್ಣಭಕ್ತಿ, ಮೌಲ್ಯ ಆದರ್ಶಗಳು ಇತ್ಯಾದಿ ಅಂಶಗಳಿವೆ. ಕೆಲ ಕೀರ್ತನೆಗಳಲ್ಲಿ ಸುಳ್ಳು, ಕಳವು, ಪರಸ್ತ್ರೀ, ಪರಧನಗಳು ಬೇಡ ಇತ್ಯಾದಿ ಅನೇಕ ಸಾಮಾಜಿಕ ಚಿಂತನೆಗಳು ನೆಲೆಗೊಂಡಿವೆ. ಕನಕದಾಸರು

ಸಾಮಾನ್ಯ ವರ್ಗದಿಂದ ಬಂದವರು, ಜನರ ಕಲೆಯನ್ನು, ಹಾಡುಗಳನ್ನು ಹತ್ತಿರದಿಂದ ಕಂಡವರು, ಕೇಳಿ ನಲಿದವರು. ಡೊಳ್ಳಿನ ಪದಗಳು, ಕೋಲಾಟದ ಪದಗಳು, ತತ್ವಪದಗಳು ಅವರನ್ನು ವಿಶೇಷವಾಗಿ ಆಕರ್ಷಿಸಿವೆ. ಅವುಗಳ ಅರ್ಥ, ಗೇಯ ಲಯಗಳಿಗೆ ಮಾರುಹೋಗಿದ್ದಾರೆ. ಸ್ವತ; ಹಾಡಿದ್ದಾರೆ, ಕುಣಿದಿದ್ದಾರೆ, ಸವಿದಿದ್ದಾರೆ. ಆದ್ದರಿಂದ ಅವರ ಎಲ್ಲಾ ಕೀರ್ತನೆಗಳಲ್ಲೂ ಇಂಥ ಜಾನಪದೀಯ ರಚನೆಗಳ ಪ್ರಭಾವ ದಟ್ಟವಾಗಿ ಮೈಗೂಡಿಕೊಂಡಿದೆ.

<u>ರಾಮಧಾನ್ಯ ಚರಿತೆಯ ಕಥಾಸಾರ:-</u>

ಕನಕದಾಸರ ಸ್ವೋಪಜ್ಞತಾ ಪ್ರತಿಭೆಯಿಂದ ರಚಿತವಾದ 'ರಾಮಧಾನ್ಯ ಚರಿತ್ರೆ' ಎಂಬ ಭಾಮಿನಿ ಷಟ್ಪದಿಯ ಕಾವ್ಯದಲ್ಲಿ ರಾಗಿಯು ಶ್ರೀರಾಮನ ಕೃಪೆಯಿಂದ ರಾಮಧಾನ್ಯವಾಯಿತು. ಈ ಕಾವ್ಯದಲ್ಲಿ ಭತ್ತವು ಮೇಲ್ಜಾತಿ, ಶ್ರೀಮಂತ ವರ್ಗ ಮತ್ತು ಸಂಸ್ಕೃತ ಭಾಷೆಯನ್ನು ಪ್ರತಿನಿಧಿಸುವುದಾದರೆ, ರಾಗಿಯು ಕೆಳಜಾತಿ, ಬಡವ ವರ್ಗ ಮತ್ತು ಕನ್ನಡ ಭಾಷೆಯನ್ನು ಪ್ರತಿನಿಧಿಸುತ್ತದೆ. ಶೋಷಣೆಗೆ ಒಳಗಾದ ಶೂದ್ರರನ್ನು - ಕೆಳವರ್ಗವನ್ನು ಮೇಲೆತ್ತಬೇಕೆಂಬ ಸಂದೇಶವೇ ಈ ಕೃತಿರಚನೆಯ ಉದ್ದೇಶವಾಗಿದೆ.

ಈ ಕೃತಿಯಲ್ಲಿ ರಾಗಿ-ಭತ್ತಗಳ ಪರಸ್ಪರ ವಿಡಂಬನೆಯುಂಟು. ಇದು ನಮ್ಮ ಸಮಾಜದ ಮೇಲ್ವರ್ಗ ಹಾಗೂ ಕೆಳವರ್ಗಗಳ ಜನರು ಪರಸ್ಪರವಾಗಿ ಬೈಯುವ ಪರಿಯ ಚಿತ್ರಣವೇ ಆಗಿದೆ ಎನ್ನಬಹುದು. ರಾಮನ ಮುಂದೆ ಗೌತಮ ಮುನಿಯು ನಾನಾ ಭಕ್ಷ್ಯಗಳನ್ನು ತಯಾರಿಸಲು ಉಪಯೋಗಿಸಿದ ಧಾನ್ಯಗಳನ್ನು ಪರೀಕ್ಷಿಸಲು ಅಪೇಕ್ಷಿಸಿದಾಗ ಮುನಿಯು ಎಲ್ಲಾ ಧಾನ್ಯಗಳನ್ನು ತರಿಸಿದನು. ಗೌತಮರು ರಾಗಿಯನ್ನು ಶ್ರೇಷ್ಠ ಧಾನ್ಯವೆಂದಾಗ, ಭತ್ತಕ್ಕೆ ದು:ಖ-ಕೋಪಗಳೆರಡೂ ಉಂಟಾದವು. ಆಗ ಭತ್ತವು ರಾಗಿಯನ್ನು ಕುಲಹೀನ, ಬಡವರ ಮನೆಯಲ್ಲಿ ಬಾಳುವವನು, ಅರಮನೆ-ಗುರುಮನೆಗಳ ಪ್ರವೇಶ ಪಡೆಯದವನು, ಶೂದ್ರಪ್ರಿಯನಾದವನು ಎಂದು ತೆಗಳುತ್ತಾ ತಾನು ಶ್ರೀಮಂತ ಪಂಡಿತರ ಭೋಜನವಸ್ತುವಾಗಿ, ಮಂತ್ರಾಕ್ಷತೆಯಾಗಿ ಮಂಗಳ ಕಾರ್ಯಗಳಲ್ಲಿ ನನ್ನದೇ ಮೇಲುಗೈ ಎಂದು ಮುಂತಾದ ಮಾತುಗಳಿಂದ ತನ್ನನ್ನು ಚೆನ್ನಾಗಿ ಹೊಗಳಿಕೊಂಡಿತು.

ಆಗ ರಾಗಿಯ ತಾಳ್ಮೆ ಮೀರಿತು. ರಾಗಿಯು ಭತ್ತದಲ್ಲಿದ್ದ ದೋಷಾಂಶಗಳನ್ನು ಗುರುತಿಸಿ ಎತ್ತಿ ಆಡಿ ಆಕ್ಷೇಪಿಸಿತು.

ಭತ್ತ (ಅಕ್ಕಿ) ಸತ್ವಹೀನವಾದ ಧಾನ್ಯ. ಅದನ್ನು ತಿಂದವರೂ ಸತ್ವಹೀನರಾಗುತ್ತಾರೆ. ಅಕ್ಕಿಯು ಎಂದೂ ಬಡವರ ಕಡೆ ಕಣ್ಣೆತ್ತಿ ಕರುಣೆಯಿಂದ ನೋಡಿಲ್ಲ. ಕೇವಲ ಶ್ರೀಮಂತರ ಬಾಲವನ್ನು ಹಿಡಿದು ಓಡುವ ನೀಚನಿವನು. ಶಕ್ತಿಹೀನವಾದ್ದರಿಂದ ಅಕ್ಕಿಯನ್ನು ಕೇವಲ ರೋಗಗ್ರಸ್ಥರು, ಬಾಣಂತಿಯರು ತಿನ್ನುತ್ತಾರೆ. ಹೆಣದ ಬಾಯಿಗೆ ತುತ್ತಾಗುವ ದುಸ್ಥಿತಿ, ಅನ್ನದ ಪಿಂಡದ ರೀತಿಯಲ್ಲಿ ಬಳಕೆಯಾಗುತ್ತದೆಯಲ್ಲದೆ, ಎಳ್ಳು – ದರ್ಭೆಗಳೇ ಸಂಗಾತಿಗಳಾಗಿವೆ. ಕ್ಷಾಮದ ಕಾಲದಲ್ಲಿ ಅದರ ಸುಳಿವೇ ಇಲ್ಲದಂತಾಗುತ್ತದೆ. ರಾಗಿಯನ್ನು ಶ್ರೀಮಂತರೂ ಉಪಯೋಗಿಸಬಹುದು. ಬಡವರಿಗಂತೂ ರಾಗಿಯು ಬಂಧುವಾಗಿದೆ. ಆದರೆ ಭತ್ತ ಹೀಗಲ್ಲ. ಬಡವರ ಪಾಲಿಗಂತೂ ಎಂದೂ ಎಟುಕಲಾರದು. ಹೀಗೆಂದು ರಾಗಿ (ನರೆದಲೆಗ) ಯು ಅಕ್ಕಿಯನ್ನು ಚೆನ್ನಾಗಿ ನಿಂದಿಸಿ ಉತ್ತರಕೊಟ್ಟ ಬಗೆಯಲ್ಲಿ ಬಂಡಾಯ ಧ್ವನಿ ವ್ಯಕ್ತವಾಗುತ್ತದೆ.

ಹೀಗೆ ಇವೆರಡೂ ಧಾನ್ಯಗಳ ನಡುವೆ ಉಂಟಾದ ಕಲಹವನ್ನು ಕಂಡು ರಾಮನು ಅವುಗಳನ್ನು ಆರು ತಿಂಗಳ ಕಾಲ ಸೆರೆವಾಸದಲ್ಲಿಡುವಂತೆ, ಸೂಚಿಸಿ, ಅವಧಿ ಮುಗಿದ ಮೇಲೆ ಅವುಗಳಲ್ಲಿ ಯಾರು ಶ್ರೇಷ್ಠರು ಎಂದು ತಿಳಿಸುವುದಾಗಿ ಹೇಳಿ ಹೊರಟರು. ಸೆರೆವಾಸದ ಅವಧಿ ಮುಗಿದ ಮೆಲೆ ಇಂದ್ರಾದಿದೇವತೆಗಳನ್ನು ಕರೆಸಿರುತ್ತಾರೆ, ಇಂದ್ರನು ಮತ್ತು ನಾರದರು ಸತ್ವಯುತವಾದ ಮತ್ತು ಬಲಿಷ್ಠವಾದ ಧಾನ್ಯ ರಾಗಿ. ರಾಗಿಯೇ ಶ್ರೇಷ್ಠ ಧಾನ್ಯ ಎಂದು ತಿಳಿಸಿದರು. ಈ ವಾದವನ್ನು ಒಪ್ಪಿಕೊಂಡು ರಾಮ ತನ್ನ ಹೆಸರನ್ನೇ ರಾಗಿಗೆ ಬಿರುದನ್ನಾಗಿ ಕೊಟ್ಟನು. ಈ ಕಾರಣದಿಂದ ರಾಗಿಯು ' ರಾಘವ ' ಎಂಬ ಹೆಸರು ಪಡೆದು ರಾಮಧಾನ್ಯವಾಯಿತು. ಆಗ ಭತ್ತದ ಕಣ್ಣುಗಳಲ್ಲಿ ನೀರು ತುಂಬಿ ತನ್ನ ಅಳಲನ್ನು ವ್ಯಕ್ತಪಡಿಸುವ ಬಗೆಯು – ಕೆಳವರ್ಗದವರಿಗೆ ಸ್ಥಾನವನ್ನು ಕೊಟ್ಟಾಗ ಮೇಲ್ವರ್ಗದವರು ಹೇಗೆ ಅಸೂಯೆಯನ್ನು ಪಡುತ್ತಾರೆ ಎಂಬುದನ್ನು ತಿಳಿಸುತ್ತದೆ. ಸಮಾಜದಲ್ಲಿ ಶಾಂತಿ ನೆಲೆಸಲು ಎಲ್ಲರ ನಡುವೆ ಮೈತ್ರಿ – ಸಾಮರಸ್ಯ ಮುಖ್ಯವೇ ಹೊರತು ಮೇಲು – ಕೀಳಲ್ಲ. ಆದ್ದರಿಂದ ಕೊನೆಯಲ್ಲಿ ಕವಿಯು ರಾಮನಿಂದಲೇ

'ಅತಿಹಿತದಲ್ಲಿ ನೀವಿಹುದು' ಎಂಬ ಮಾತಿನ ಮೂಲಕ ಸೂಚಿಸಿರುವುದು ಈ ಕಾವ್ಯದ ಬೆಲೆಯನ್ನು ಹೆಚ್ಚಿಸಿದೆ. ಯಾರೊಬ್ಬರ ಪ್ರಾಧಾನ್ಯ ಹೆಚ್ಚಿದರೂ ಸಮಾಜ ಏರುಪೇರಾಗುತ್ತದೆ ಎಂಬುದನ್ನು ಮರೆಯದಿರುವುದು ಒಳ್ಳೆಯದು.

ಹೀಗೆ ಈ ಕಾವ್ಯದಲ್ಲಿ ಕನಕದಾಸರು ನಿಮ್ನವರ್ಗದ ಉತ್ಥಾನದ ಅಗತ್ಯವನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ನಿಮ್ನ ವರ್ಗವನ್ನೆತ್ತುವ ಮಹೋದ್ದೇಶವನ್ನು ಸಾಧಿಸುವಲ್ಲಿ ಉಚ್ಚವರ್ಗದವರನ್ನು ತುಳಿಯುವುದು ಸರಿಯಲ್ಲ, ಎಂದು ಕನಕದಾಸರು ಇಲ್ಲಿ ಸೂಚಿಸಿರುವುದು ಗಮನಾರ್ಹ.

ಇಲ್ಲಿ ಮತ್ತು ರಾಗಿಯ ನಡುವಿನ ವಿಡಂಬನೆಯನ್ನು ಕನಕದಾಸರು ನಾಟಕೀಯ ಪ್ರತಿಭೆಯ ಹಿನ್ನಲೆಯಲ್ಲಿ ಹೇಳಿರುವುದು ಕಾವ್ಯದ ಸೊಬಗಿಗೆ ಇನ್ನಷ್ಟೂ ಮೆರಗು ಹೆಚ್ಚಿದೆ. ರಾಗಿ-ಭತ್ತದ ಸಂಭಾಷಣೆಯು ಸಾಮಾಜಿಕ ಚಿಂತನೆಯ ಸ್ವರೂಪದಂತಿದ್ದು, ನಮ್ಮ ಸಮಾಜದ ವ್ಯವಸ್ಥೆಗೆ ಕನ್ನಡಿ ಹಿಡಿದಂತಿದೆ ಎಂಬುದು ಕಾವ್ಯ ಪರಿಚಯದಿಂದ ನಮಗೆ ವೇದ್ಯವಾಗುತ್ತದೆ. ರಾಮಧಾನ್ಯ ಚರಿತ್ರೆಯನ್ನು ಸಂಪಾದಿಸಿದ ಪ್ರೊ॥ ದೇಜಗೌ ರವರು ಅದಕ್ಕೆ ಬರೆದ ಮುನ್ನುಡಿಯಲ್ಲಿ "ಇದೊಂದು ಸುಂದರವಾದ ಮತ್ತು ಕಾಂತಿಯುತವಾದ ವಿಡಂಬನ ಕಾವ್ಯ. ಬಿಂಕುಗುಳಿಗಳ ಮತಾಂಧರ ಮತ್ತು ಪಟ್ಟಭದ್ರಹಿತಾಸಕ್ತರ ಮೂಗು ಕೆತ್ತಿ ಅವರ ಓರೆಕೋರೆಗಳನ್ನು ತಿದ್ದಬೇಕೆಂಬುದೇ ಕವಿಯ ಪ್ರತಿಜ್ಞೆಯಾಗಿದೆ. ಜೊತೆಗೆ ಈ ಓರೆಕೋರೆಗಳು ಸಾಮಾನ್ಯರಿಗೆ ಗ್ರಹಿಕೆಯಾಗಿ ಅವರು ಎಚ್ಚೆತ್ತುಕೊಳ್ಳಬೇಕೆಂಬುದೇ ಅವರ ಆಶಯವಾಗಿದೆ"[೨] ಸತ್ಯಾಸತ್ಯಗಳ ನಡುವೆ ರಾಜಿಯ ಸೂತ್ರಸಲ್ಲದೆಂಬದು ಕವಿಯ ದೃಢನಿಲುವಾಗಿದೆ. ಈ ಮಾತು ಬಲುಮಟ್ಟಿಗೆ ನಿಜವೆನ್ನಬಹುದು.

ಮೇಲ್ನೋಟಕ್ಕೆ ಸಾಮಾನ್ಯವಾಗಿ ಕಾಣುವ ಈ ಕೃತಿ, ಇದರ ಒಳಹೊಕ್ಕು ನೋಡಿದಾಗ ತನ್ನಲ್ಲಿನ ಸಾಮಾಜಿಕ ಧ್ವನಿಯಾಗಿ ಅಸಾಧರಣ ವಿರಳಕೃತಿಗಳಲ್ಲಿ ಒಂದೆಂದು ಕಂಡುಬರುತ್ತದೆ. ವಿಜಯನಗರ ಕಾಲದ ಶ್ರೀಮಂತ ಮತ್ತು ಕೆಳವರ್ಗದವರ ನಡುವೆ ನಡೆಯುತ್ತಿದ್ದ ಹೋರಾಟದ ಚಿತ್ರಣ ಸ್ವರೂಪವನ್ನು ರಾಮಧಾನ್ಯ ಚರಿತ್ರೆಯಲ್ಲಿ ಕಾಣಬಹುದು.

(iii) ವೈಷ್ಣವ ಧರ್ಮ:-

ವೈಷ್ಣವ ಧರ್ಮ - ಸಿದ್ಧಾಂತದ ಪ್ರಕಾರ ವಿಷ್ಣುವೇ ಸರ್ವೋತ್ತಮ. ಅವನೇ ಸರ್ವಶ್ರೇಷ್ಠ, ಪೂಜಾರ್ಹದೈವ, ವಿಷ್ಣು ಎಂಬ ಶಬ್ದದ ಮೂಲಧಾತು ' ವಿಷ್ '. 'ವಿಷ್' ಎಂದರೆ ಸರ್ವವ್ಯಾಪಕವಾದ ಲಕ್ಷಣ ಸೂಚಿಸುತ್ತದೆ. ವಿಷ್ಣು ಭಕ್ತಿ, ವಿಷ್ಣುವಿನ ಅವತಾರದಲ್ಲಿರಿಸಿದ ಭಕ್ತಿಯೆ, ಬದುಕಿಗೆ ಮುಕ್ತಿ ಹಾಗೂ ಆಧ್ಯಾತ್ಮ ಸಫಲತೆಯೊದಗಿಸುತ್ತದೆಂಬುದು ವೈಷ್ಣವ ಧರ್ಮದ ದೃಢನಿಲುವಾಗಿದೆ.

" ವೈಷ್ಣವ ಧರ್ಮದ ಪವಿತ್ರಗ್ರಂಥ, ಶಾಸ್ತ್ರ-ರಾಮಾಯಣ, ಭಾರತದ ಶಾಂತಿ ಪರ್ವ, ವಿಷ್ಣು ಪುರಾಣ, ನಾರಾಯಣೀಯ, ಭಾಗವತ, ಗೀತೆ, ವಿಷ್ಣು ಸಹಸ್ರನಾಮ ಇತ್ಯಾದಿ ಇದೇ ಅವರಿಗೆ ಶ್ರುತಿಪ್ರಾಯವಾದವು "[೩] ವೈಷ್ಣವ ಧರ್ಮದ ವಿಶೇಷತೆಯೆಂದರೆ, ವಿಷ್ಣುವಿನ ಅನಂತಮಹಿಮಾ ವೈಭವವನ್ನು ಆತನ ಕಲ್ಯಾಣ ಗುಣವಿಶೇಷಣಗಳನ್ನು, ಆತನ ಸೃಷ್ಟಿಯ ವೈವಿಧ್ಯತೆ ಮತ್ತು ಸಾರ್ಥಕತೆ ಇವೇ ಮೊದಲಾದವುಗಳನ್ನು ಭಕ್ತಿಗೀತೆ, ಕೀರ್ತನೆ, ಪುರಾಣ, ಮಂತ್ರಗಳ ಮೂಲಕ ತಿಳಿಸಿಹೇಳುವುದೆ ಆಗಿರುತ್ತದೆ.

ಹರಿದಾಸರು ತಮ್ಮ ಸಾಹಿತ್ಯದಲ್ಲಿ ವೈಷ್ಣವ ಧರ್ಮ ಅಭಿವ್ಯಕ್ತಗೊಳಿಸಲು, ಹರಿಸರ್ವೋತ್ತಮತ್ವ ಪ್ರತಿಪಾದಿಸಲು ಉಪಯೋಗಿಸುವ ಭಾಷೆ ಜನಸಾಮಾನ್ಯರಿಗೆಲ್ಲಾ ಅರ್ಥವಾಗುವ ತಿಳಿಗನ್ನಡ, ಸರಳಶೈಲಿ, ಸಹಜವಾದ ಉಪಮೆ-ರೂಪಕ, ಇದರ ಜೊತೆ ಮನಸ್ಸಿಗೆ ಸಂತೋಷ ನೀಡುವ ಸಂಗೀತದ ಮಾಧ್ಯಮ. ಹೀಗೆ ನಡೆದ ಹರಿಭಜನೆ ಸಂಕೀರ್ತನೆಗಳಿಂದ ಹರಿದಾಸ ಸಾಹಿತ್ಯವು ವ್ಯಾಪಕ ಸಾಹಿತ್ಯವಾಗಿ ಪರಿಣಮಿಸಲು ಕಾರಣವೂ ಆಯಿತು.

ಕನಕದಾಸರು ವ್ಯಾಪಕವಾದ ಕೃಷ್ಣಭಕ್ತಿಯನ್ನು ತಮ್ಮಲ್ಲಿ ಹೊಂದಿದ್ದವರು ಎಂಬುದು ಅವರ ಕೀರ್ತನೆಗಳು, ಅವರ ಕುರಿತಾದ ಬದುಕು ಬರಹಗಳಿಂದ ನಮಗೆ ತಿಳಿಯುತ್ತದೆ. ಕಾಗಿನೆಲೆಯ ಆದಿಕೇಶವ ಸ್ವಾಮಿಯೇ (ಚಿತ್ರ-೨) ಇವರ ಆರಾಧ್ಯದೈವ. ಶ್ರೀಹರಿಯೆ ಸರ್ವೋತ್ತಮ ; ಜಗತ್ತು ಸತ್ಯ ಮತ್ತು ನಿತ್ಯ ; ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಸಾಧನ.

ಈ ಎಲ್ಲಾ ತಾತ್ವಿಕ ಸಿದ್ಧಾಂತಗಳೇ ಹರಿದಾಸ ಸಾಹಿತ್ಯಕ್ಕೆ ವಸ್ತುಗಳೆನಿಸಿದವು. ಈ ಮಾರ್ಗದಲ್ಲಿಯೇ ಸಾಗಿದ ಕನಕದಾಸರು ತಮ್ಮ 'ರಾಮಧಾನ್ಯ ಚರಿತ್ರೆ'ಯಲ್ಲಿ 'ಶ್ರೀರಾಮಭಕ್ತಿ' ಯನ್ನು ಯಥೇಚ್ಚವಾಗಿ ಮೆರೆದಿದ್ದಾರೆ – ಎಂಬುದಕ್ಕೆ ಸಾಕ್ಷಿ ಎಂಬಂತೆ ಅವರ ಕಾವ್ಯದ ಹೆಸರೇ ಅದನ್ನು ಸೂಚಿಸುತ್ತದೆ. ಶ್ರೇಷ್ಠನಾದ ದೈವಾಂಶ ಸಂಭೂತನಾದ ಶ್ರೀರಾಮನ ಮೂಲಕ ರಾಗಿಯನ್ನು ಮಾನ್ಯತೆ ಮಾಡಿಸುವುದರ ಮೂಲಕ ಎಲ್ಲಾ ಕೆಳಪಂಥದವರಿಗೂ ಮಾನ್ಯತೆ ಸಿಗಬೇಕೆಂಬ ಆಶಯ ಇಲ್ಲಿ ಮೂಡಿದೆ. ಶ್ರೀರಾಮನೇ ರಾಗಿಯನ್ನು ಮೆಚ್ಚಿ ಒಪ್ಪಿದ್ದಾನೆ ಎಂದ ಮೇಲೆ ಉಳಿದವರೆಲ್ಲರೂ ಒಪ್ಪಲೇಬೇಕು ಎಂಬ ಧೋರಣೆ ಇಲ್ಲಿ ಧ್ವನಿತವಾಗಿದೆ.

(iv) ಭಕ್ತಿ–ಅನುಭಾವ:

ಸಾಹಿತ್ಯವೆಂದರೆ ಬದುಕಿನಲ್ಲಿ ಶ್ರದ್ಧೆಯನ್ನು ಹುಟ್ಟಿಸುವುದು. ಮನುಷ್ಯನಲ್ಲಿ ತನ್ನ ಅರಿವನ್ನು ಮೂಡಿಸಿ ಬದುಕಲು ಪರಮಾತ್ಮನ ಪ್ರೇರಣೆಯೇ ಮುಖ್ಯವಾಗಿದೆ. ವಿಶೇಷತ: ಕನ್ನಡ ಸಾಹಿತ್ಯಚರಿತ್ರೆಯ ಕಾಲಘಟ್ಟದಲ್ಲಿ ಶರಣರು, ದಾಸರು ಈ ಭಕ್ತಿವಾಹಿನಿಯನ್ನು ಅಖಂಡವಾಗಿ ತಮ್ಮ ಜೀವಿತಕಾಲಾವಧಿಯಲ್ಲಿ ಪರಿಪಾಲಿಸುತ್ತಿದೆಯಲ್ಲದೆ, ಅದನ್ನು ತಮ್ಮ ಸಾಹಿತ್ಯದ ಮುಖೇನ ಪ್ರವಹಿಸುವಂತೆ ಮಾಡಿದ್ದಾರೆ.

ಭಕ್ತಿ ಅನಂತವಾದದ್ದು; ವಿಶ್ವವ್ಯಾಪಿ ಜಗತ್ತಿನಲ್ಲಿ ಬಂದು ಹೋದ ಎಲ್ಲ ಧರ್ಮಪ್ರವರ್ತಕರೂ, ಆಚಾರ್ಯರೂ ಭಕ್ತಿಯ ಹಂತ – ಅನುಭವಗಳನ್ನು ತಂತಮ್ಮ ರೀತಿಯಲ್ಲಿ ಬಿತ್ತರಿಸಿದ್ದಾರೆ. ಶ್ರೀ ಪುರುಂದರದಾಸರು "ಮುಕ್ತಿಪಡೆವುದಕೆ ಪುರಂದರ ವಿಠಲನ ಭಕ್ತನಾಗುವುದೇ ಸಾಕ್ಷಿ" ಎಂದೂ, 'ಭಕ್ತಿಯಲಿ ಶ್ರೀಪುರುಂದರನ ವಿಠಲನ ನೆನೆದರೆ ಮುಕ್ತಿ ಸಾಧನ' ಎಂದಿದ್ದಾರೆ. ಇದರಿಂದ ಭಕ್ತಿಯ ಪ್ರಾಮುಖ್ಯತೆ ಎಷ್ಟೆಂದು ತಿಳಿದು ಬರುತ್ತದೆ. ಭಗವಂತನಲ್ಲಿ ಸಂಪೂರ್ಣವಾಗಿ ಶರಣಾದರೆ, ಅವನ ಕೃಪೆಯಿಂದ ಪರಮಶಾಂತಿಯನ್ನು, ಶಾಶ್ವತ ಪದವಿಯನ್ನು ಪಡೆಯಬಹುದು. ಇದನ್ನು ಶ್ರೀ ಪಾದರಾಜರು ಹಾಡುವ ಸೊಬಗು ಹೀಗಿದೆ,

ಭಕ್ತಿಬೇಕು ಶಕ್ತಿಬೇಕು ಮುಂದೆ ।
ಮುಕ್ತಿಯ ಬಯಸುವವಗೆ ॥

ಭಗವಂತನಿಗೂ, ಭಕ್ತನಿಗೂ ಇರುವ ಪರಸ್ಪರ ಅವಿನಾಸಂಬಂಧವೇ ಭಕ್ತಿ. ಭಕ್ತನೆನಿಸಿಕೊಂಡಾತ ತಾನು ನಂಬಿದ ಭಗವಂತನಲ್ಲಿ ಇಟ್ಟಿರುವ ಅನನ್ಯ ಪ್ರೀತಿಯೇ ಭಕ್ತಿ ಪಮಾತ್ಮನೆಡೆಗೆ ಹರಿಯುವ ನಿರಂತರ ನಿಷ್ಕಲ್ಮಶ ಪ್ರೇಮ ಪ್ರವಾಹವೇ ಭಕ್ತಿ. ರಾಮಾನುಜರ ಅಭಿಮತದಂತೆ ಜ್ಞಾನ ಸಾರ್ಥಕವಾಗಬೇಕಾದರೆ, ಭಕ್ತಿರೂಪದಲ್ಲಿ ಅದು ಪರಿಣತಿ ಹೊಂದಿರಬೇಕು ಎಂದಿದ್ದಾರೆ.

ಕನಕದಾಸರ ಭಕ್ತಿಗೀತೆಗಳಲ್ಲಿ ಶ್ರೀಕೃಷ್ಣನ ಭಾವಪೂರ್ಣ ಒಳಸ್ಪಂದನವವೇ ಪರಿಪೂರ್ಣ ಶಕ್ತಿಯೆಂಬಂತಿದೆ. ಈ ಶಕ್ತಿಯು ಕನಕರ ಅನುಭಾವದ ಶಕ್ತಿಯೇ ಹೌದು. ಆದ್ದರಿಂದ ಭಕ್ತಿಯ ಮಾರ್ಗದಲ್ಲಿ ಅನನ್ಯವಾಗಿ ಸಮರ್ಪಣ ಮನೋಭಾವವಿರಬೇಕು. ಅವರ ಹರಿಭಕ್ತಿಸಾರದಲ್ಲಂತೂ ಮುಕ್ತಿಸಾಧನೆಗೆ ಭಕ್ತಿಯೇ ಕಾರಣ ಎಂಬುದು ಸ್ಪಷ್ಟವಾಗಿದೆ, ಭಕ್ತಿಯ ಮಾರ್ಗದ ತಿರುಳೆಲ್ಲಾ ಅಲ್ಲಿ ತುಂಬಿ ತುಳುಕಿದೆ. ಇದನ್ನು ಒಳಹೊಕ್ಕು ನೋಡಿದಾಗ ಭಕ್ತಿಯೇ ನಿಜವಾದ ಯೋಗವೆಂಬುದು ಸ್ಪಷ್ಟವಾಗುತ್ತದೆ. ಈ ಭಕ್ತಿಯೋಗದ ಸಾಧನೆಯು ಪುಣ್ಯಕಾರ್ಯ ಮಾಡುವ ವಿವೇಕಿಗೆ ಮಾತ್ರ ಸಾಧ್ಯ. ಅದಕ್ಕಾಗಿ ಮನಸ್ಸನ್ನು ಬಲಪಡಿಸಬೇಕು[೪] – ಇದು ಕನಕನ ಭಕ್ತಿ ಸಾಹಿತ್ಯದ ಒಳಗುಟ್ಟು.


ಕನಕದಾಸರ ಕೇಶವ ನಾಮವಂತೂ ಸುಪ್ರಸಿದ್ದ ಹಾಗೂ ಅನೇಕರ ನಿತ್ಯಸ್ತೋತ್ರ. ದಶಾವತಾರ ರೂಪಗಳಲ್ಲದೆ ನೃಸಿಂಹ, ಕೃಷ್ಣ, ರಾಮ – ಇವರೇ ಮೊದಲಾದ (ಚಿತ್ರ-೨) ಅವತಾರಗಳನ್ನು ಹರಿದಾಸರು ಭಕ್ತಿ ತುಂಬಿ ಹಾಡಿದ್ದಾರೆ. ಕೃಷ್ಣನ ವಿನೋದ, ಆಟ–ಪಾಟಗಳು ಅದರಲ್ಲಡಗಿರುವ ಭಕ್ತಿ – ಮಧುರಭಾವ – ವಿರಹ, ಸ್ಮರಣೆ ಅಲಂಕಾರ ಎಲ್ಲವೂ ಇಡೀ ದಾಸ ಸಾಹಿತ್ಯವನ್ನು ಸಂಪದ್ಯುಕ್ತಗೊಳಿಸಿವೆ. ಮೇಲ್ಜಾತಿಯವರು ಕನಕನನ್ನು ಉಡುಪಿ – ಶ್ರೀಕೃಷ್ಣನ ದರ್ಶನಕ್ಕೆ ಬಿಡದೆ ದೇವಸ್ಥಾನದ ಹೊರ ಬಾಗಿಲಲ್ಲೇ ತಡೆದು ನಿಲ್ಲಿಸಿದಾಗ, ಕನಕನ ಕೃಷ್ಣಭಕ್ತಿಯಿಂದ ಕೃಷ್ಣನಮೂರ್ತಿಯು ಅವರಿದ್ದೆಡೆಗೆ ತಿರುಗಿದ್ದರಿಂದ ಕನಕದಾಸ ಒಬ್ಬ ಅನುಭಾವಿ ಸಂತ ಎನ್ನಬಹುದು. ಉಡುಪಿಯಲ್ಲಿ ಅದು ಇಂದಿಗೂ 'ಕನಕನ ಕಿಂಡಿ' ಎಂದೇ ಪ್ರಸಿದ್ಧವಾಗಿದೆ. (ಚಿತ್ರ-೪)

ಚಿತ್ರ-೪

ಉಡುಪಿಯ ಶ್ರೀ ಕೃಷ್ಣ ದೇವಾಲಯದ ಪೂರ್ವ ದ್ವಾರ



ಕನಕನ ಭಕ್ತಿಗೆ ಒಲಿದ ಉಡುಪಿಯ ಶ್ರೀಕೃಷ್ಣನು ಅವನೆಡೆಗೆ ತಿರುಗಿ, ದರ್ಶನ ನೀಡಿದ ದ್ವಾರವು ಇಂದಿಗೂ ಉಡುಪಿಯಲ್ಲಿ 'ಕನಕನ ಕಿಂಡಿ'ಯೆಂದೇ ಪ್ರಸಿದ್ಧವಾಗಿದೆ.



ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಿರುವ ನವಗ್ರಹ ಕಿಟಕಿ ಕನಕನ ಕಿಂಡಿಗೆ ಇದೂ ನೇರವಾಗಿ ಕಾಣುತ್ತದೆ

ಉಡುಪಿಯ ಶ್ರೀ ಕೃಷ್ಣದೇವಾಲಯದಲ್ಲಿರುವ ನವಗ್ರಹ ಕಿಟಕಿ ಕನಕನ ಕಿಂಡಿಗೆ ಇದೂ ನೇರವಾಗಿ ಕಾಣುತ್ತದೆ.





ಚಿತ್ರ-೨

ಶ್ರೀ ಕನಕದಾಸರ ಆರಾಧ್ಯದೈವರು ಕಾಗಿನೆಲೆ ಶ್ರೀ ಆದಿಕೇಶವ ಸ್ವಾಮಿ



ಚಿತ್ರ-೧,

ಕಾಗಿನೆಲೆ ಆದಿಕೇಶವಸ್ವಾಮಿ ದೇವಾಲಯದ ಒಂದು ದೃಶ್ಯ



ಕಾಗಿನೆಲೆಯ ದೇವಾಲಯಗಳ ಮತ್ತೊಂದು ದೃಶ್ಯ

ಕನಕದಾಸರಿಗೆ ಭೂಶೋಧನೆಯಲ್ಲಿ ದೊರೆತ ಕೊಪ್ಪರಿಗೆ ಹಣದಿಂದ ಈ ದೇವಾಲಯವನ್ನು ನಿರ್ಮಾಣ ಮಾಡಿಸಿದರು ಎಂಬ ಐತಿಹ್ಯವಿದೆ.

ಚಿತ್ರ-೨

ಕಾಗಿನೆಲೆಯಲ್ಲಿರುವ ಶ್ರೀ ನರಸಿಂಹ ದೇವಾಲಯದ ಒಂದು ದೃಶ್ಯ



ಕಾಗಿನೆಲೆಯಲ್ಲಿರುವ ಶ್ರೀನರಸಿಂಹ ದೇವಾಲಯದ ಒಂದು ದೃಶ್ಯ

ಕನಕದಾಸರ ಪರಿಶ್ರಮದಿಂದ ಊರ್ಜಿತಗೊಂಡ ದೇವಾಲಯವಿದು. ಆತನ ವಿಷ್ಣುಭಕ್ತಿಗೆ ದ್ಯೋತಕವೆನಿಸಿದೆ.

ಉಡುಪಿಯಲ್ಲಿರುವ ಕನಕಮಂಟಪ, ಕನಕದಾಸರು ಇಲ್ಲಿ ಕುಳಿತು ಭಕ್ತಿಗೀತೆಗಳನ್ನು ಹಾಡುತ್ತಿದ್ದರು.



ಉಡುಪಿಯಲ್ಲಿರುವ ಕನಕ ಮಂಟಪ
ಕನಕರು ಇಲ್ಲಿ ಕುಳಿತು ಭಕ್ತಿಗೀತೆಗಳನ್ನು ಹಾಡುತ್ತಿದ್ದರು



ಶ್ರೀ ಕನಕದಾಸರ ಹುಟ್ಟೂರಾದ ಬಾಡಾಗ್ರಾಮದಲ್ಲಿನ ಅವರ ವಾಸಸ್ಥಳ



ಬಾಡ ಗ್ರಾಮದಲ್ಲಿ ಶ್ರೀಕನಕದಾಸರ ಅರಮನೆಯಿದ್ದ ನಿವೇಶನ

ಕನಕದಾಸರಿಗೆ ಕೇಶವ ಭಕ್ತಿಯೊಂದೇ ಅವರ ಜೀವನ ಸಾಧನೆ. ಅವರು ಎಂದಿಗೂ ಭವ್ಯವಾದ ಅರಮನೆಯಲ್ಲಿ ಇರಬೇಕೆಂದು ಬಯಸಿದವರಲ್ಲ. ಅದರಂತೆ ಅವರ ಸರಳತೆಗೆ ಇದೊಂದು ಉದಾಹರಣೆಯಾಗಬಲ್ಲದು.



ಶ್ರೀ ಕನಕದಾಸರು ಉಪಯೋಗಿಸುತ್ತಿದ್ದ ವಸ್ತುಗಳು

(1) ಬೆತ್ತದ ಕಡ್ಡಿ (2) ಊಟಮಾಡುತ್ತಿದ್ದ ಮರದ ತಟಗೆ

(3) ಶಂಖ (4) ಭವನಾಸಿ



ಕಾಗಿನೆಲೆಯಲ್ಲಿರುವ ಶ್ರೀಕನಕದಾಸರ ಸಮಾಧಿ

ಕಾಗಿನೆಲೆಯಲ್ಲಿರುವ ಶ್ರೀ ಕನಕದಾಸರ ಸಮಾಧಿ

ಅಡಿ ಟಿಪ್ಪಣಿಗಳು

೧. ಕನಕ ದರ್ಶನ – ದೇಜಗೌ, ತನು ಮನು ಪ್ರಕಾಶನ, ಮೈಸೂರು ೨೦೦೨.

(ಅ) ಮಹಾತ್ಮ ಕನಕದಾಸ ಪ್ರಶಸ್ತಿ –ರಾಜ್ಯಸಮಿತಿ, ಕನಕದಾಸರ ೪ನೇ ಶತಮಾನೋತ್ಸವ ಸಮಿತಿ, ಬೆಂಗಳೂರು ೧೯೯೫.

೨. ರಾಮಧಾನ್ಯ ಚರಿತ್ರೆ – ಸಂ.ಪ್ರೊ॥ ದೇಜಗೌ, ರಾಜ್ಯ ಸಮಿತಿ, ಶ್ರೀ ಕನಕದಾಸ ೪ನೇ ಶತಮಾನೋತ್ಸವ, ಬೆಂಗಳೂರು.

೩. ಹರಿದಾಸ ಆಂದೋಲನ – ಒಂದು ಅಧ್ಯಯನ – ಡಾ॥ ಎನ್.ಕೆ. ರಾಮಶೇಷನ್ ಮಿತ್ರಪ್ರಿಂಟರ್ಸ್, ಮೈಸೂರು ೧೯೯೧ (ಪು.ಸಂ.೨೬೧).

೪. **ಆಧಾರ :–**

ಅ) ಶ್ರೀ ಕನಕದಾಸರು – ಕೊರಟಿ ಶ್ರೀನಿವಾಸರಾವ್, ಭಾಗಲಕ್ಷ್ಮಿ ಪ್ರಕಾಶನ, ಬೆಂಗಳೂರು ೧೯೯೨.

ಆ) ಕನಕದ ಸಾಹಿತ. ದರ್ಶನ (ಸಂಪುಟ – ೧). – ಸಂ. ಡಾ॥ ದೇ.ಜವರೇಗೌಡ, ಶ್ರೀ ಮೀರಾಪ್ರಿಂಟರ್ಸ್, ಮೈಸೂರು, ೧೯೯೦.

ಇ) ಕನಕದಾಸರ ಹರಿಭಕ್ತಿಸಾರ – (ಭಾವಾನುವಾದ), ರಂಗನಾಥಶರ್ಮ ಎನ್. ಬೆಂಗಳೂರು–೧೯೭೨.

ಅಧ್ಯಾಯ – ೩

ಸಮಾಜ ಸ್ವರೂಪ ಮತ್ತು ಸಂಘರ್ಷ ನೆಲೆ

ನೆಲೆ – ಹಿನ್ನಲೆ

ಮನುಷ್ಯನು ಹುಟ್ಟುತ್ತಲೇ ಮೂಲಭೂತವಾಗಿ ಸಮಾಜದ ಒಂದು ಭಾಗವಾಗಿರುತ್ತಾನೆ. ತನಗೆ ಇಷ್ಟವಿರಲಿ, ಬಿಡಲಿ ಒಟ್ಟಿನಲ್ಲಿ ಅನಿವಾರ್ಯವಾಗಿಯಾದರೂ, ಸಮಾಜದ ವ್ಯವಸ್ಥೆಯೊಂದಿಗೆ ಕೂಡಿಯೇ ಬಾಳ್ವೆ ನಡೆಸಲೇಬೇಕಾಗುತ್ತದೆ. ನ್ಯಾಯ , ಸಮಾನತೆ – ಸುವ್ಯವಸ್ಥೆಗಳಿಂದ ಕೂಡಿದ ಸಮಾಜದಲ್ಲಿನ ಸಕಲ ಸೌಲಭ್ಯಗಳನ್ನು ಪಡೆದುಕೊಂಡ ವ್ಯಕ್ತಿ ಸುಖ–ಸಂತೃಪ್ತಿ, ಗೌರವ–ಮಾರ್ಯಾದೆಗಳಿಂದ ತನ್ನ ಬಾಳಹಾದಿಯಲ್ಲಿ ಸುಲಭವಾಗಿ ಮುನ್ನಡೆಯುತ್ತಾನೆ. ಆದರೆ ತನ್ನ ಹುಟ್ಟು, ವಿದ್ಯೆ, ಧರ್ಮ–ಜಾತಿ, ಆರ್ಥಿಕ ವ್ಯವಸ್ಥೆಯ ಏಣಿ–ಶ್ರೇಣಿಗಳು–ವ್ಯಕ್ತಿಯ ಬದುಕಿನ ಅಸಮಾನತೆ–ಅನ್ಯಾಯಗಳಿಗೆ ಕಾರಣವಾಗಿ, ಅಸಹಾಯಕತೆಯಿಂದ – ಬದುಕಿನ ಹಲವು ಸೌಲಭ್ಯಗಳಿಂದ ವಂಚಿತನಾಗಿ ಹತಾಶೆಯ ಹಾದಿಯಲ್ಲಿ ಬಾಳಪಯಣ ನಡೆಸುತ್ತಾನೆ. ಆದ್ದರಿಂದಲೇ ಸಾಮಾಜಿಕ ವ್ಯವಸ್ಥೆಯು ಪ್ರತಿಯೊಬ್ಬ ವ್ಯಕ್ತಿಯ ಜೀವನದ ಅನಿವಾರ್ಯವಾದ ಮೂಲಭೂತ ಆಶ್ರಯ ಸ್ಥಾನವಾಗಿದೆ.

ಯಾವ ರಾಷ್ಟ್ರದಲ್ಲಿ ಸಾಮಾಜಿಕ ಸ್ವರೂಪವು ಎಲ್ಲರ ಬಾಳಿನಲ್ಲಿ, ಎಲ್ಲಾ ವಲಯಗಳಲ್ಲಿ ಸಮಾನತೆ, ಸ್ವತಂತ್ರತೆ, ಶೋಷಣರಹಿತ ವ್ಯವಸ್ಥೆಯಿಂದ ಕೂಡಿರುವುದೋ ಅಂತಹ ದೇಶ ಸತ್ಯ, ಸಮತೆ–ಸಾಮರಸ್ಯ, ಸದಾಚಾರ, ಸುಖ–ಶಾಂತಿ, ಸಮೃದ್ಧಿಗಳಿಂದ ಸಂಪದ್ಭರಿತವಾಗಿರುತ್ತದೆ. ಇದರಿಂದ ದೇಶದ ಏಕತೆ, ಅಖಂಡತೆಗೆ ಸಾಧಕವಾಗುತ್ತದೆ. ಆದರೆ ದುರ್ಬಲರ ಮೇಲಿನ ದೌರ್ಜನ್ಯದಿಂದ ಸಕಲರಿಗೂ ಸಮಾನ ಸೌಕರ್ಯಗಳು, ಬದುಕಿನ ಅನಿವಾರ್ಯ ಅವಕಾಶಗಳು ಅಳವಡದೆ ಕೆಲವರು ದು:ಖದಲ್ಲಿದ್ದು, ಕೆಲವರು ಮಾತ್ರ ಸುಖಿಗಳಾಗಿದ್ದು, ಜಗತ್ತು ಅವ್ಯವಸ್ಥೆಯ ಆಕರವಾಗಿದೆ. ಇದರಿಂದಲೇ ಮನುಷ್ಯರ ನಡುವೆ ಮೇಲು–ಕೀಳಿನ ತಾರತಮ್ಯವನ್ನು ಈ ಅವ್ಯವಸ್ಥೆಯ ಸಮರ್ಥನೆಗೆ ಸಾಧನವಾಗಿ ಬಳಸುತ್ತಾ ಬರಲಾಗಿದೆ. ಅವುಗಳಲ್ಲಿ ವರ್ಣವ್ಯವಸ್ಥೆ, ಜಾತಿಪದ್ಧತಿ, ವರ್ಗವ್ಯವಸ್ಥೆ, ದಾಸ್ಯ ಪದ್ಧತಿಗಳು ಮುಂತಾದವು ಪ್ರಮುಖವಾಗಿದೆ.

ಇವುಗಳ ಆಧಾರದ ಮೇಲೆ ಮನುಷ್ಯರ ನಡುವೆ ಅಸಮಾನತೆಯನ್ನು ಕಲ್ಪಿಸಿ, ಅನ್ಯಾಯ–ಶೋಷಣೆ, ದಬ್ಬಾಳಿಕೆ, ಅತ್ಯಾಚಾರವೆಸಗುತ್ತಾ ಶತಶತಮಾನಗಳಿಂದಲೂ ಸಬಲರು ದುರ್ಬಲರ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿ ಅವರನ್ನು ತುಳಿಯುತ್ತ ಶೋಷಣೆಗೈಯುತ್ತಾ ತಮ್ಮ ಘೋಷಣೆಯನ್ನು ಪೂರೈಸುತ್ತಲೇ ಬಂದಿದ್ದಾರೆ. ಬರುತ್ತಲೂ ಇದ್ದಾರೆ. ಇಂದು ಸಾಮಾಜಿಕ ಸ್ವರೂಪವು ವಿಕೃತಿಗೊಂಡ ಕುರೂಪವೆನಿಸುತ್ತದೆ. ಇಂಥ ಸಮಾಜ ವ್ಯವಸ್ಥೆಯ ದೋಷಗಳನ್ನು ಕಳೆದು ಸಮಾಜಕ್ಕೆ ಸತ್ಯ ಸ್ವರೂಪವನ್ನು ಕೊಡಲು ಕೆಲವು ಶತಮಾನಗಳಿಂದ ಸತ್ಯವಂತರು, ಸಮಾಜ ಸುಧಾರಕ ಹೃದಯವಂತರು ಉದಯಿಸಿ, ಮಾರ್ಗದರ್ಶನ ನೀಡಿ ಪ್ರಯತ್ನಿಸಿದ್ದಾರೆ. ಕ್ರಾಂತಿಯ ನುಡಿಗಳನ್ನು ನೀಡಿದ್ದಾರೆ. ಆದರೂ ಸಮಾಜವು ನಾಯಿಯ ಬಾಲದಂತೆ ಡೊಂಕಾಗಿಯೆ ಉಳಿದುದು ಒಂದು ಮಾನವ ಕುಲಕೋಟಿಯ ದುರ್ದೈವವಾಗಿದೆ.

ಸಮಾಜದಲ್ಲಿ ಈ ಮೇಲು – ಕೀಳು ತಾರತಮ್ಯಕ್ಕೆ ಎಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಕಾರಣಕರ್ತರಾಗಿರುತ್ತಾರೆ. ನಮ್ಮ ಜಾತಿ, ಸಂಪ್ರದಾಯ, ಆಚಾರ–ವಿಚಾರವೇ ಮೇಲು, ನಾವೇ ಪ್ರಧಾನರು, ಉಳಿದವರೆಲ್ಲರೂ ಕೀಳು ಎಂಬ ಭ್ರಮೆಯಲ್ಲೇ ಮುಳುಗಿರುವವರು ಒಬ್ಬರಾದರೆ, ಶಿಕ್ಷಣ, ಅಂತಸ್ತು ಮೊದಲಾದ ಸಾಮಾಜಿಕ ವ್ಯವಸ್ಥೆಗಳಿಂದ ವಂಚಿತರಾಗಿ ಪ್ರಶ್ನೆ ಮಾಡುವ ಧೈರ್ಯವನ್ನು ಕಳೆದುಕೊಂಡ ಜನರು ಅನಿವಾರ್ಯತೆಯಿಂದ ಶೋಷಣೆಯನ್ನು ಮೂಕರಂತೆ ಅನುಭವಿಸುವವರು ಮತ್ತೊಬ್ಬರು. ಇಲ್ಲಿನ ಈ ಅವ್ಯವಸ್ಥೆಗೆ ವಿದ್ಯಾವಂತರೆನಿಸಿಕೊಂಡ ವಿವೇಕಿಗಳ ದರ್ಪ ಮತ್ತು ಅಕ್ಷರಗಳ ತಿಳುವಳಿಕೆಯೇ ಇಲ್ಲದೆ ಬೆಳೆದ ಅವಿದ್ಯಾವಂತರ ವಿವೇಕರಾಹಿತ್ಯ ಸ್ಥಿತಿಯೂ ಕಾರಣವಾಗಿರಬಹುದು. ಜೊತೆಗೆ ರಾಜಕೀಯ, ಧಾರ್ಮಿಕ ವಲಯಗಳ ಕೈವಾಡವಿದೆಯೆಂದರೆ ಬಹುಶ: ತಪ್ಪಾಗಲಾರದು.

ಹೀಗೆ ದುರ್ಬಲರ ಶೋಷಣೆಯಿಂದಲೇ ತಮ್ಮ ಘೋಷಣೆಯನ್ನು ಮಾಡಿಕೊಳ್ಳುತ್ತ ಬಂದ ಸಬಲರು, ದಾರ್ಶನಿಕ – ಸಮಾಜಸುಧಾರಕರ, ಮಹಾತ್ಮರ ಕೊಡುಗೆಯನ್ನು ಬಲುಜಾಣ್ಮೆಯಿಂದ, ಉಪಾಯದಿಂದ ವಿಕೃತಗೊಳಿಸಿ ಅವರ ಹೆಸರಿನಲ್ಲಿಯೆ ತಮ್ಮ ಹಳೆ ಸ್ವಾರ್ಥಪೂರಿತ ಆಚಾರ–ವಿಚಾರಗಳನ್ನು ಜಾರಿಗೊಳಿಸುತ್ತ ತಮ್ಮನ್ನು ತಾವು ಪೋಷಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತ ಬಂದಿದ್ದಾರೆ. ಆದ್ದರಿಂದ

ಸಮತೆ, ನ್ಯಾಯ, ಹೋರಾಟ, ಶಾಂತಿಯ ಸೂರ್ಯರೆನಿಸಿದ ಬುದ್ಧ, ಬಸವ, ಕನಕ, ಗಾಂಧಿ, ಅಂಬೇಡ್ಕರಂಥ ಮಹಾತ್ಮರ ಕನಸು ಕನಸಾಗಿಯೇ ಉಳಿದಿದೆ. ಆದರೂ ಈ ನಿಟ್ಟಿನಲ್ಲಿ ಅವರುಗಳ ಹೋರಾಟ – ಪ್ರತಿಭಟನೆಯ ಪರಿ ವಿಭಿನ್ನವೂ ಹೌದು, ವಿಶಿಷ್ಟವೂ ಹೌದು. ಆಮೂಲಾಗ್ರವಾಗಿ ಸಮಾಜದ ಸಮಸ್ಯೆಗಳನ್ನು ಹೋಗಲಾಡಿಸಲು ಸಾಧ್ಯವಿಲ್ಲದಿದ್ದರೂ, ಸ್ವಲ್ಪ ಮಟ್ಟಿಗೆ ಬೆಳಕನ್ನುಂಟು ಮಾಡಿದ್ದಾರೆ – ಎಂಬುದಂತೂ ಸತ್ಯ.

(i) <u>ವರ್ಣ ವ್ಯವಸ್ಥೆ:-</u>

<u>ಉಗಮ ಸ್ವರೂಪ:</u>

ವರ್ಣ ವ್ಯವಸ್ಥೆಯು – ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರೆಂದು ನಾಲ್ಕು ನಾಮಗಳಿಂದ ವಿಂಗಡಿಸಲ್ಪಟ್ಟಿದೆ. ಇದಕ್ಕೆ ಚತುರ್ವರ್ಣವೆಂತಲೂ ಕರೆಯುವರು. ಇದು ಭಾರತ ದೇಶದಲ್ಲಿ ಬೆಳೆದು ಬಂದ ಜಾತಿಪದ್ಧತಿಯ ತಾಯಿ ಬೇರಾಗಿದೆ. ಇವು ಮಾನವ ಕಲ್ಪಿತವೇ ಹೊರತು ದೇವನಿರ್ಮಿತವಲ್ಲ. ಆರ್ಯರು ಮಾನವ ಮಾನವರಲ್ಲಿ ಭೇದವನ್ನು ಕಲ್ಪಿಸಿದರು. ಋಗ್ವೇದದಲ್ಲಿ ಪರಮಾತ್ಮನ ವರ್ಣನೆಯನ್ನು ಈ ರೀತಿ ಮಾಡಲಾಗಿದೆ.

ಓಂ॥ ಸಹಸ್ರಶೀರ್ಷಾ: ಸಹಸ್ರಾಕ್ಷ: ಸಹಸ್ರಪಾದ:

ಸಭೂಮಿಂ ವಿಶ್ವತೋ ವೃತ್ವಾಅತ್ಯಾಶಿಷ್ಠದ್ಧಶಾಂಗುಲಂ॥

ಋಗ್ವೇದ ೧೦ ಮಂ. ೯೦ ಸೂಕ್ತ, ೧ ಶ್ಲೋ.

ಯಾವಾತನಿಗೆ ಸಹಸ್ರಮಸ್ತಕಗಳಿವೆಯೋ, ಯಾವಾತನಿಗೆ ಸಾವಿರ ನಯನಗಳಿವೆಯೋ, ಯಾವನಿಗೆ ಸಾವಿರ ಪಾದಗಳಿವೆಯೋ, ಅಂತಹ ವಿರಾಟ್ ಪುರುಷನೆ ಈಶ್ವರನಾಗಿದ್ದಾನೆ. ಈ ಭೂಮಿಯ ನಾಲ್ಕು ದಿಶೆಗಳನ್ನು ವ್ಯಾಪಿಸಿ ಸುತ್ತಿಕೊಂಡಿದ್ದಾನೆ. ಹೀಗೆ ವಿರಾಟ್ ಪುರುಷನನ್ನು ವರ್ಣಿಸುತ್ತಾ ಮುಂದೆ ಅದೇ ಸೂಕ್ತಿಯ ಹನ್ನೆರಡನೆಯ ಶ್ಲೋಕದಲ್ಲಿ ಅಂತಹ ವಿಶ್ವನಾಮಕನ ಮುಖದಿಂದ ಬ್ರಾಹ್ಮಣನು, ಭುಜದಿಂದ ಕ್ಷತ್ರಿಯನು, ತೊಡೆಯಿಂದ ವೈಶ್ಯನು, ಪಾದದಿಂದ ಶೂದ್ರನು ಜನಿಸಿದರೆಂದು ಕೆಲವು ಐತಿಹ್ಯಗಳಿಂದ ತಿಳಿದುಬಂದಿದೆ.

ಬ್ರಾಹ್ಮಣೋಸ್ಯ ಮುಖಮಾಸೀದ್ಬಾಹುರಾಜನ್ಯಕೃತ:
ಊರು ತದಸ್ಯಯದ್ವೈಶ: ಪದ್ಭ್ಯಾಂ ಶೂದ್ರೋ ಅಜಾಯತ॥

ಋ.೧೦-೯೦-೧೨

ಒಬ್ಬ ಮನುಷ್ಯ ರೂಪುಗೊಳ್ಳಬೇಕಾದರೆ ಆತನಿಗೆ ಮುಖ, ಭುಜ, ತೊಡೆ, ಪಾದ ಇಲ್ಲಿ ಎಲ್ಲಾ ಅಂಗಗಳು ಮುಖ್ಯವೇ ಹೊರತು, ಯಾವುದೂ ಅಮುಖ್ಯವಲ್ಲ. ಇದರಲ್ಲಿ ಯಾವುದೇ ಒಂದು ಅಂಗ ಊನವಾದರೂ ಆತ ಪರಿಪೂರ್ಣ ವ್ಯಕ್ತಿ ಎನಿಸಿಕೊಳ್ಳಲಾರ. ಹಾಗೆ ನೋಡುವುದಾದರೆ ಇಡೀ ದೇಹದ ಭಾರವನ್ನು ಹೊತ್ತಿರುವ ಪಾದಗಳು ಮತ್ತೂ ಶ್ರೇಷ್ಠವೇ ಹೌದು. ಬ್ರಾಹ್ಮಣನಿಗೆ ವೇದಾಭ್ಯಾಸ, ಕ್ಷತ್ರಿಯರಿಗೆ ದೇಶರಕ್ಷಣೆ, ವೈಶ್ಯನಿಗೆ ಕೃಷಿ, ವ್ಯಾಪಾರ–ವಹಿವಾಟು ಹಾಗೂ ಶೂದ್ರನು ಈ ಮೇಲಿನ ವರ್ಣದವರ ಸೇವೆಯನ್ನು ನಿಷ್ಕಲ್ಮಶ ಮನಸ್ಸಿನಿಂದ ಮಾಡವುದೇ ತಮ್ಮ ಪರಮ ಕರ್ತವ್ಯವೆಂದು ಪರಿಪಾಲಿಸಬೇಕು ಎಂಬಂತೆ ಮನು ತನ್ನ ಧರ್ಮಶಾಸ್ತ್ರದಲ್ಲಿ ಅಭಿಪ್ರಾಯ ಪಟ್ಟಿದ್ದಾನೆ. ೧(ಆಧಾರ)

ರಾಮಾಯಣದ ಉತ್ತರಕಾಂಡದ ೭೩ ರಿಂದ ೭೬ನೆಯ ಸರ್ಗದಲ್ಲಿ ಶೂದ್ರ ಶಂಭುಕ ತಪಸ್ಸನ್ನಾಚರಿಸಿದ್ದರಿಂದ ಬ್ರಾಹ್ಮಣ ಬಾಲಕ ಸಾವನ್ನಪ್ಪಿದ್ದಾನೆ ಎಂಬ ದೂರನ್ನಾಲಿಸಿ ಶ್ರೀರಾಮನು ಶಂಭುಕನ ತಲೆಯನ್ನು ಕತ್ತರಿಸಿದನು. ದೇವತೆಗಳು ಇದರಿಂದ ಸಂತೋಷಿಸಿ ಪುಷ್ಪವೃಷ್ಟಿ ಗೈದರು ಎಂಬುದು ನಮಗೆ ತಿಳಿದೇ ಇದೆ.

ಮಹಾಭಾರತದಲ್ಲಿ, ಪರಶುರಾಮರು ಕರ್ಣನ ತೊಡೆಯ ಮೇಲೆ ವಿಶ್ರಮಿಸಿಕೊಳ್ಳುತ್ತಿದ್ದಾಗ, ಕೀಟವೊಂದರ ಕಡಿತಕ್ಕೊಳಗಾಗಿ ಆತನ ತೊಡೆಯಿಂದ ಸುರಿದ ರಕ್ತದ ತೇವದಿಂದ ಎಚ್ಚೆತ್ತ ಗುರುಗಳು ಕ್ಷತ್ರಿಯನಿಗಲ್ಲದೆ ಬ್ರಾಹ್ಮಣನಿಗೆ ಇಷ್ಟೊಂದು ನೋವನ್ನು ಸಹಿಸಿಕೊಳ್ಳುವ ಶಕ್ತಿಯಲ್ಲ. ನಿನ್ನ ಜಾತಿಯಾವುದೆಂದು ಗದರಿಸಿ ಕೇಳಿದಾಗ ಶೂದ್ರನೆಂದು ಒಪ್ಪಿಕೊಂಡು, ಕಲಿತ ಸಕಲ ವಿದ್ಯೆ ನಾಶವಾಗಲಿ ಎಂಬ ಶಾಪವನ್ನು ಪಡೆದನು. ಅದೇ ರೀತಿ ಗುರುದಕ್ಷಿಣೆಯ ನೆಪದಲ್ಲಿ ದ್ರೋಣನಿಗೆ ತನ್ನ ಬಲಗೈಯ ಹೆಬ್ಬೆರಳನ್ನು ಕೊಟ್ಟ ಏಕಲವ್ಯನ ಕಥೆಯು ಇತಿಹಾಸ ಪ್ರತಿದ್ಧವಾಗಿದೆ. ಕಪಟನಾಟಕವಾಡಿದ ದ್ರೋಣ ಇತಿಹಾಸದಲ್ಲಿ ಕಪ್ಪುಕಲೆಯಾಗಿ ಉಳಿದನೆಂಬುದು ನಮಗೆ ತಿಳಿದಿರುವ ಸಂಗತಿಯಾಗಿದೆ.

ಹೀಗೆ ವಿದ್ಯೆ, ಬುದ್ಧಿ, ಜ್ಞಾನ-ಧ್ಯಾನಗಳಿಂದ ದೂರ ಉಳಿಯಬೇಕಿದ್ದ ಶೂದ್ರರು, ಬ್ರಾಹ್ಮಣರ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಬಾರದಿತ್ತು. ಮಡಿ-ಮೈಲಿಗೆ ಮೊದಲಾದ ಅಂಶಗಳನ್ನು ಮುಂದುಮಾಡಿ, ಸಮಾಜದಿಂದ ಹೊರಗಡೆಯೇ ವಾಸಿಸಬೇಕಿದ್ದ ಶೂದ್ರರ ಬದುಕು ಅತಂತ್ರವಾಗಿದ್ದು, ಭಯಭೀತಿಯಿಂದ ಕೂಡಿತ್ತು ಎಂಬುದು ಹಲವು ಆಧಾರಗಳಿಂದ ನಮಗೆ ವೇದ್ಯವಾಗುತ್ತದೆ.

ವರ್ಣ ವ್ಯವಸ್ಥೆ – ವಚನ ಸಾಹಿತ್ಯ

ಕ್ರಿ. ಶ ೧೨ನೇ ಶತಮಾನದ ಪ್ರಖ್ಯಾತ ವಚನ ಸಾಹಿತ್ಯ ಪ್ರಾಚೀನ ಕನ್ನಡ ಸಾಹಿತ್ಯ ಕಾಲಘಟ್ಟಗಳಲ್ಲಿ ಅತ್ಯಂತ ವಿಶಿಷ್ಟದಾಯಕವಾದುದು. ಏಕದೇವೋಪಾಸನೆ, ಮೌಢ್ಯಗಳ ಖಂಡನೆ, ನೀತಿ – ಮೌಲ್ಯಪ್ರತಿಪಾದನೆ, ಜಾತಿ ಅಸಮಾನತೆಗಳ ವಿರುದ್ಧ ಸಾಮಾಜಿಕ-ಧಾರ್ಮಿಕ ಕ್ರಾಂತಿಗಳು, ಸ್ತ್ರೀ-ಸಮಾನತೆ, ಕಾಯಕ ಮಹತ್ವ, ವೃತ್ತಿ ಮರ್ಯಾದೆ – ಇವೇ ಮೊದಲಾದ ಮಹತ್ವದ ಲಕ್ಷಣಗಳನ್ನು ತನ್ನ ಬಾಳ ಸಾಧನೆಯ ಹಾದಿಯಲ್ಲಿ ಮಹತ್ವದ ಗುರಿಯನ್ನಾಗಿಟ್ಟುಕೊಂಡಿದ್ದರು.

ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಜಾತಿರಹಿತ, ವರ್ಣ ರಹಿತ, ವರ್ಗರಹಿತ ಸಮಾಜವನ್ನು ಕಟ್ಟಲು ಬಯಸಿದವರು ಬಸವಣ್ಣನವರು. ಮನುಷ್ಯ-ಮನುಷ್ಯನನ್ನು ಮನುಷ್ಯರನ್ನಾಗಿ ನೋಡಬೇಕೆಂಬುದು ಇವರ ಆಶಯ. ಬಸವಣ್ಣ ಅಸ್ಪೃಶ್ಯರ ಮನದಲ್ಲಿ ಹಚ್ಚಿದ ಆತ್ಮವಿಶ್ವಾಸದ ಕಿಚ್ಚು ಒಮ್ಮೆಲೆ ಇಡೀ ಜನಾಂಗವನ್ನು ಆವರಿಸಿ ತಮ್ಮ ಸುತ್ತಣ ಪರಿಸರದಲ್ಲಿ ಜಾತಿ ತಾರತಮ್ಯ, ಶೋಷಣೆ-ದಬ್ಬಾಳಿಕೆ, ಮೌಢ್ಯತೆ, ಅಜ್ಞಾನ ಮುಂತಾದುವುಗಳನ್ನು ಅರಿತ ಶರಣರು ಅವುಗಳ ನಿವಾರಣೆಗಾಗಿ ಬಂಡಾಯ ಮನೋಧರ್ಮವನ್ನೇ ತಾಳಿದರು. ಸಾಮಾಜಿಕ ಅನ್ಯಾಯಗಳ ವಿರುದ್ಧ ಸಿಡಿದೆದ್ದು ಹೋರಾಟಕ್ಕಿಳಿದರು. ಹೀಗೆ ಹೊಸ ಆದರ್ಶವನ್ನೇ ರೂಪಿಸಿಕೊಂಡು ವಿನೂತನ – ನ್ಯಾಯಬದ್ಧ ಸಮಾಜವನ್ನು ನಿರ್ಮಾಣ ಮಾಡಹೊರಟ, ತಮಗೆ ಅನಿಸಿದ್ದನ್ನು ಯಾವುದೇ ಮುಚ್ಚುಮರೆಯಿಲ್ಲದೆ ನಿರ್ಭೀತಿಯಿಂದ 'ಸಾಮಾಜಿಕ ಕ್ರಾಂತಿ'ಯನ್ನೇ ಕ್ರಿ.ಶ ೧೨ನೇ ಶತಮಾನದಲ್ಲಿ ನಡೆಸಹೊರಟ ವಚನಕಾರರ ಈ ಅರ್ಥಪೂರ್ಣವಾದ ಹೋರಾಟ ವಿಶಿಷ್ಟವೂ ಹೌದು. ಗಮನಾರ್ಹವೂ ಹೌದು.

"ವೇದ, ಶಾಸ್ತ್ರ, ಆಗಮ, ಉಪನಿಷತ್ತು, ಪುರಾಣ ಇವೆಲ್ಲವೂ ಉತ್ತಮರ ಸೊತ್ತಾಗಿದ್ದಾಗ, ಇವುಗಳನ್ನೇ ಸಮಯೋಚಿತವಾಗಿ ಹೇಳಿ ಸಮರ್ಥಿಸಿಕೊಳ್ಳುವ; ಇವು ಅನಾದಿ, ದೇವಸೃಷ್ಟಿ, ಇಲ್ಲಿ ಬಂದಿರುವುದೇ ಪ್ರಮಾಣ ಎಂದು ವಾದಿಸುವ ಮೇಲುವರ್ಗದವರನ್ನು ವಚನಕಾರರು ಖಂಡಿಸಿರುವರು. ಅರಿವು ಓದಿನಿಂದ ಬರುವಂತಹದಲ್ಲ, ವೇದ, ಆಗಮ ಪುರಾಣಾದಿಗಳೇ ಜ್ಞಾನದ ಪರಮಸೀಮೆಗಳಲ್ಲ ಎಂಬುದನ್ನು ವಚನಕಾರರು ಮನಗಂಡಿದ್ದರು." ೨

ಕೀರ್ತನಾ ಸಾಹಿತ್ಯ ಕಾಲದಲ್ಲಿನ ಜನಸಾಮಾನ್ಯರ
ಧಾರ್ಮಿಕ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳು.

ಕೀರ್ತನಾ ಸಾಹಿತ್ಯ ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿತ್ತು. ವಿಜಯನಗರದ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ ಧರ್ಮದಲ್ಲಿ ಕಂಡು ಬರುವ ಎಲ್ಲಾ ಮುಖ್ಯ ಅಂಶಗಳೂ ಇದ್ದವು. ಹಿಂದೂ ಸಮಾಜವು ವೃತ್ತಿ ಅವಲಂಬನೆ ತತ್ವದ ಆಧಾರದ ಮೇಲೆ ನಾಲ್ಕು ವರ್ಣಗಳಾಗಿ ವಿಂಗಡಿಸಲಾಗಿತ್ತು. ಬ್ರಾಹ್ಮಣರಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನವಿತ್ತು. ವಿದ್ಯಾಭ್ಯಾಸ ಮತ್ತು ದೇವಾಲಯಗಳ ಉಸ್ತುವಾರಿ ಇವರ ಮುಖ್ಯ ಕರ್ತವ್ಯವಾಗಿತ್ತು. ಅಸ್ಪೃಶ್ಯರು ಪಟ್ಟಣಗಳಲ್ಲಿ ವಾಸಿಸುವಂತಿರಲಿಲ್ಲ. ಬದಲಿಗೆ ಊರಾಚೆ ಮಾರಿ-ಮಸಣಿ ಗುಡಿಗಳ ಬಳಿ-ಕೊಳೆಗೇರಿ ನಿವಾಸಗಳಲ್ಲಿ ವಾಸಿಸಬೇಕಾಗಿತ್ತು. ಶೂದ್ರರು ಭೂವ್ಯವಸಾಯ ಮಾಡುತ್ತಿದ್ದರು. ಉನ್ನತ ಮಟ್ಟದ ವಿದ್ಯಾಭ್ಯಾಸವು ಸಂಸ್ಕೃತದಲ್ಲಿ ನಡೆಯುತ್ತಿತ್ತು. ಬ್ರಾಹ್ಮಣರು ಮಾತ್ರವೇ ಸಂಸ್ಕೃತ ಕಲಿಯಲು ಅವಕಾಶವಿತ್ತು. ಕ್ಷತ್ರಿಯರಿಗೆ ರಾಜ್ಯಾಡಳಿತ ಕ್ರಮ, ಸಾಹಿತ್ಯ ಕಲೆ, ಯುದ್ಧ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು. ವ್ಯಾಪಾರ ವಹಿವಾಟು ವೈಶ್ಯರಿಗೆ ಮತ್ತು ಇವರುಗಳ ಸೇವೆಯನ್ನು ಅಸ್ಪೃಶ್ಯರು ಮಾಡುತ್ತಿದ್ದರು ಅಲ್ಲದೆ ದೇವಸ್ಥಾನದ ಪ್ರವೇಶವನ್ನು ಅವರಿಗೆ ನಿಷೇಧಿಸಲಾಗಿತ್ತು.

ಮೇಲ್ಜಾತಿಯವರಿಂದ ಕೀಳರಿಮೆ, ಅಣುಕು ನುಡಿಗಳಿಂದ ಬೇಸತ್ತ ಕನಕದಾಸರು ತಮ್ಮ ಈ ಕೃತಿಯಲ್ಲಿ ಶೋಷಣೆಯ ವಿರುದ್ಧ ಬಂಡಾಯ ಮನೋಭಾವ ತಳೆದು ಭತ್ತವನ್ನು ಮೇಲ್ವರ್ಣದವರಿಗೂ, ರಾಗಿಯನ್ನು ಕೆಳವರ್ಣದವರಿಗೂ ಸಾಂಕೇತವಾಗಿರಿಸಿ

'ರಾಘವ' ಎಂಬ ಬಿರುದು ರಾಗಿಗೆ ಕೊಡುವುದರ ಮೂಲಕ ಇಲ್ಲಿ ಎಲ್ಲಾ ಕೆಳವರ್ಣದವರಿಗೂ ಮಾನ್ಯತೆ ದೊರೆತಂತಾಯಿತು. ಹರಿಯೇ ಸರ್ವೋತ್ತಮನೆಂದು ತಿಳಿದು ಭಜಿಸುವವನೆ ನಿಜವಾಗಿಯು ಉತ್ತಮಕುಲದವನೆಂಬುದು ಕನಕದಾಸರ ಅಭಿಪ್ರಾಯವಾಗಿದೆ.

ಕುಲಕುಲ ಕುಲವೆಂದು ಹೊಡೆದಾಡದಿರಿ
ಕುಲದ ನೆಲೆಯನೇನಾದರೂ ಬಲ್ಲಿರಾ ।
ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ ಆ
ಜಲದ ಕುಲವನೇನಾದರೂ ಬಲ್ಲಿರಾ॥ ೩ ಎನ್ನುವ ಕನಕದಾಸರ.

ನಿರೂಪಣೆಯಿಂದ ಜಾತಿ-ಕುಲಗಳ ತಾರತಮ್ಯಗಳಿಂದ ನಿಮ್ಮಲ್ಲೇ ಹೊಡೆದಾಡಬೇಡಿ ಎಂದು ಹೇಳುತ್ತಾ ಕುಲದ ನೆಲೆಯನ್ನು ಯಾರೂ ಅರಿಯಲು ಸಾಧ್ಯವಿಲ್ಲ. ನೀರನ್ನು ಎಲ್ಲಾ ಮನುಷ್ಯರು ಉಪಯೋಗಿಸುತ್ತಾರೆ. ಆದರೆ ಆ ಜಲಕ್ಕೆ ಕುಲವಿರಲು ಸಾಧ್ಯವಿಲ್ಲ. ಕೆಸರಿನಲ್ಲಿ ಹುಟ್ಟುವ ಕಮಲ, ಗೋವಿನ ಕೆಚ್ಚಲಿನಿಂದ ಬರುವ ಹಾಲು ದೇವರಿಗೆ ಪ್ರಿಯವಾಗುವುದು. ಬಿಳಿಮೃಗದ ಹೊಟ್ಟೆಯಲ್ಲಿ ಹುಟ್ಟುವ ಕಪ್ಪು ಕಸ್ತೂರಿ ಗಂಧವನ್ನು ಎಲ್ಲರೂ ಲೇಪಿಸಿಕೊಳ್ಳುತ್ತಾರೆ. ಪ್ರಕೃತಿಯಲ್ಲಿ ವರ್ಣಮೈತ್ರಿಯನ್ನು ಕಾಣಬಹುದು ಆದರೆ ಮನುಷ್ಯರಲ್ಲಿ ಈ ಬಗೆಯ ವರ್ಣಮೈತ್ರಿಯಲ್ಲದೆ ವರ್ಣದ್ವೇಷವನ್ನು ಕಾಣುತ್ತೇವೆ. ಆದ್ದರಿಂದ ಯಾವುದೇ ಒಂದು ವಸ್ತು ಅಥವಾ ಮನುಷ್ಯರಲ್ಲಿರುವ ಗುಣ ಪ್ರಧಾನವೇ ಹೊರತು ಅವುಗಳ ಹುಟ್ಟಲ್ಲ ಹೀಗೆ ಎಲ್ಲಕ್ಕೂ ಕುಲವನ್ನು ಗುರುತಿಸುತ್ತಾ ಹೋದರೆ ದೇಶಕ್ಕೆ, ಆತ್ಮಕ್ಕೆ ಯಾವ ಕುಲವನ್ನು ಗುರುತಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಇರುವುದು ಒಂದೇ ಕುಲ – ಅದು ಮನುಷ್ಯ ಕುಲ ! ಈ ಸಂದರ್ಭದಲ್ಲಿ ಆದಿಕವಿ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಮತ್ತು ವಿಶ್ವಮಾನವ, ರಾಷ್ಟ್ರಕವಿ ಕುವೆಂಪುರವರ 'ಮನುಜ ಮತ ವಿಶ್ವಪಥ' ಎಂಬ ನುಡಿಮುತ್ತುಗಳನ್ನು ನೆನಪಿಸಿಕೊಳ್ಳಬಹುದು.

ಜಾತಿ ಪದ್ಧತಿ:-

ಜಾತ ಅಂದರೆ ಜನಿಸಿದ ಮಾನವರು. ಒಂದು ಮಗು ಈ ಸಮಾಜದಲ್ಲಿ ಹುಟ್ಟುತ್ತಲೇ ಅದು ಯಾವ ಧರ್ಮ, ಜಾತಿಗೆ ಸೇರುತ್ತದೆ ಎಂದು ನಿಗಧಿಯಾಗುತ್ತದೆ. ಆದೂವರೆಗೂ ಯಾವುದರ ಪರಿವೂ ಇಲ್ಲದ ಮಗುವಿಗೆ ಆಯಾ ಜಾತಿ ನಿಯಮಗಳನ್ನು ಪರಿಪಾಲಿಸುವಂತೆ ಹಿರಿಯರು ಒತ್ತಡ ಹೇರುತ್ತಾರೆ. ಹೀಗೆ ಒತ್ತಡಕ್ಕೆ ಮಣಿದೋ, ಇಲ್ಲವೆ ಸ್ವ ಇಚ್ಛೆಯಿಂದಲೋ ಆ ಜಾತಿಯಲ್ಲಿನ ಕುರುಡು ಸಂಪ್ರದಾಯಗಳನ್ನು ನಂಬಿಕೊಂಡು ನಾನು - ನನ್ನದು ಎಂಬ ಸ್ವಾರ್ಥವನ್ನು ತನ್ನಲ್ಲಿ ಬೆಳಸಿಕೊಳ್ಳುತ್ತಾ ಹೋಗುತ್ತಾನೆ. ಹೀಗೆ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವ ಸಲುವಾಗಿ ಜನಿಸಿದ ಜನಾಂಗದ ಆಧಾರದ ಮೇಲೆ ಮಾನವ – ಮಾನವರಲ್ಲೇ ಮೇಲು – ಕೀಳು ತಾರತಮ್ಯವನ್ನು ಕಲ್ಪಿಸಿ ಎಲ್ಲಾ ಸೌಲಭ್ಯಗಳನ್ನು ತನ್ನಲ್ಲೇ ಇರಿಸಿಕೊಂಡು ಕೆಳಗಿನವರನ್ನು ಎಲ್ಲಾ ಅವಕಾಶಗಳಿಂದ ವಂಚಿತರಾಗುವಂತೆ ಮಾಡುತ್ತಾರೆ. ತಮ್ಮ ಸ್ವಾರ್ಥ ಹಾಗೂ ಲಾಭಕ್ಕಾಗಿ ಜಾತಿಗಳಲ್ಲಿ ಅನೇಕ ಉಪಜಾತಿಗಳನ್ನಾಗಿ ಮಾಡಿಕೊಂಡು, ತಮ್ಮ ತಮ್ಮಲ್ಲೇ ದ್ವೇಷದ ದಳ್ಳುರಿಗಳನ್ನು ಬೆಳಸಿಕೊಂಡು ವಿನಾಶದ ಹಾದಿ ಹಿಡಿದಂತಾಗುತ್ತದೆ.

ಹಿಂದೆ ಉಚ್ಚಜಾತಿಯವರು ಕೆಳಜಾತಿಯ ವ್ಯಕ್ತಿಯನ್ನು ಮುಟ್ಟಿದರೂ ಮಾತನಾಡಿದರೂ ಅಷ್ಟೆ ಅಲ್ಲ ಅವರನ್ನು ನೋಡಿದರೂ ಮೈಲಿಗೆಯಾಗುವ ಕೀಳುಪದ್ಧತಿಗಳು ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ಜಾರಿಯಲ್ಲಿದ್ದವು. ಇಂದಿಗೂ ಗ್ರಾಮೀಣಭಾಗದಲ್ಲಿ ಇಂತ ಕ್ರೂರ ಅಮಾನವೀಯ ಆಚರಣೆಗಳು ಜಾರಿಯಲ್ಲಿರುವುದು ಸ್ವತಂತ್ರಭಾರತದಲ್ಲಿ ಗಣತಂತ್ರ ವ್ಯವಸ್ಥೆಯ ಸಂವಿಧಾನಕ್ಕೊಂದು ಸವಾಲಾಗಿಯೇ ನಿಂತಿದೆ.

ಸಕಲ ಜೀವಿಗಳ ಸಂಕಷ್ಟ ಬದುಕು ಸಹಿಸದ ಕಾರುಣ್ಯಮೂರ್ತಿ ಸಿದ್ಧಾರ್ಥನು, ಅಂಧಕಾರದಲ್ಲಿ ಮುಳುಗಿ – ಅಜ್ಞಾನದಲ್ಲಿರುವ ಮಾನವನಿಗೆ ಶಾಂತಿ ಸಂಪಾದಿಸುವ ಮಾರ್ಗವನ್ನು ಹುಡುಕಲು ಅರ್ಧರಾತ್ರಿಯಲ್ಲಿ ರಾಜ್ಯವೈಭೋಗವನ್ನು, ಪತ್ನಿ–ಮಗುವನ್ನು ತೊರೆದು ಅಡವಿ ಸೇರಿದನು. ಸುಮಾರು ಆರುವರ್ಷ ಧ್ಯಾನಯೋಗವನ್ನು ಸಾಧಿಸಿ ಸಮಾಧಿಯಲ್ಲಿ ಶಾಂತಿಯನ್ನು ಕಂಡನು. ಅದನ್ನೇ ಜ್ಞಾನೋದಯವೆಂದು ಕರೆದನು.

ಅಂದಿನಿಂದ ಸಿದ್ಧಾರ್ಥ ಬುದ್ಧನಾದನು. ಜಾತಿಮತವೆನ್ನದೆ ಎಲ್ಲರಿಗೂ ತನ್ನ ಧರ್ಮದ ಬಾಗಿಲು ಮುಕ್ತವಾಗಿರಿಸಿದನು. ರಾಜ ಮಹಾರಾಜರಿಂದ ಸಾಮಾನ್ಯರವರೆಗೆ ಅಸಂಖ್ಯಾತ ಜನರೆಲ್ಲರೂ ಬುದ್ಧಿನ ಅನುಯಾಯಿಗಳಾದರು. ಜಾತಿ-ವರ್ಣ-ವರ್ಗವೆಂಬ ಭೇದವಿಲ್ಲದೆ ಮೊಟ್ಟಮೊದಲು ಸಮಾನತೆ ಶಾಂತಿಯ ಗಾಳಿ ಭಾರತದಲ್ಲಿ ಬೀಸಿದ್ದು ಬುದ್ಧನಿಂದ! .

ವಚನ ಸಾಹಿತ್ಯ – ಜಾತಿ ಪದ್ಧತಿ

ಸುಧಾರಕರಾಗಿ ಬಸವಣ್ಣಾದಿಗಳು...

ಶರಣರ ಸಮಗ್ರಕ್ರಾಂತಿಯ ಮೂಲ ಆಶಯವನ್ನು ಮತ್ತು ಈ ವೈಚಾರಿಕ ಧೋರಣೆಯ ವಾಹಕವಾಗಿ ಮೂಡಿ ಬಂದ ವಚನ ಸಾಹಿತ್ಯದ ಸ್ವರೂಪವನ್ನು ಗಮನಿಸಬೇಕಿದೆ. ಸಮಾಜದಲ್ಲಿ ಕ್ರಾಂತಿಯನ್ನು ಮಾಡಬೇಕೆಂದು ಪ್ರಜ್ಞಾಪೂರ್ವಕವಾಗಿ ಹೊರಟವರಲ್ಲ. ಸಾಹಿತ್ಯ ರಚನೆಯೂ ಅವರ ಉದ್ದೇಶವಾಗಿರಲಿಲ್ಲ. ಆದರೆ ಬದುಕನ್ನು ಕುರಿತ ಅವರ ನೇರವಾದ ನಡೆನುಡಿಗಳು, ಸಮಾಜ ಮತ್ತು ಸಾಹಿತ್ಯಗಳೆರಡರಲ್ಲೂ ಕ್ರಾಂತಿಗೆ ಕಾರಣವಾದುವು. ಜೀವನವೇ ಅವರ ಕೇಂದ್ರ ಬಿಂದು. ಅಲ್ಲಿ ನಿಂತು ಆ ಪೂರ್ಣ ವೃತ್ತದ ವ್ಯಾಪ್ತಿಯನ್ನು ಪರಿಭಾವಿಸಿದರು.

ಕರ್ನಾಟಕದ ಇಂದಿನ ವಿಜಾಪುರ ಜಿಲ್ಲೆಯ ಬಾಗೇವಾಡಿಯ ಅಗ್ರಹಾರದ ಅಧಿಪತಿ ಶೈವಬ್ರಾಹ್ಮಣ ಮಾದರಸ, ಸತಿ ಮಾದಲಾಂಬಿಕೆಯವರ ಉದರದಲ್ಲಿ ಜನಿಸಿದ ಬಸವಣ್ಣನವರು ಬಾಲ್ಯದಲ್ಲಿನ, ತಮ್ಮವರು ಅಸ್ಪೃಶ್ಯರನ್ನು ನಡೆಸಿಕೊಳ್ಳುತ್ತಿರುವ ಅಮಾನವೀಯ ರೀತಿಯನ್ನು ಕಂಡು ಕನಿಕರಗೊಂಡರು, ಕಳವಳಿಸಿದರು. ಬೆಕ್ಕು, ನಾಯಿಗಳನ್ನು ಮುಟ್ಟಬಹುದು ಆದರೆ ಅವರನ್ನೇಕೆ ಮುಟ್ಟಬಾರದು, ವಿದ್ಯೆ ಇಲ್ಲ, ಬಾವಿಕೆರೆಗಳ ನೀರನ್ನು ಮುಟ್ಟುವಂತಿಲ್ಲ. ತಮ್ಮ ಬದುಕಿನ ಮೇಲೆ ಅವರಿಗೆ ಅಧಿಕಾರವಿಲ್ಲ ಹೀಗೇಕೆ? ಎಂಬುದು ಬಾಲ ಬಸವನ ಪ್ರಶ್ನೆ. ತಂದೆ ತಾಯಿಗಳು ಇವನ ಮಾತಿಗೆ ಬೆಂಬಲ ತೋರದಿದ್ದ ಕಾರಣ, ಉಪನಯನವನ್ನು ಧಿಕ್ಕರಿಸಿ, ಪರಂಪರೆಯಿಂದ ಬಂದ ಜಾತಿ ಪರಂಪರೆ-ಸಂಪ್ರದಾಯವನ್ನು ತಿರಸ್ಕರಿಸಿ, ಪ್ರತಿಭಟಿಸಿದ ಬಾಲ ಬಸವ ತನ್ನ ಬಂಧು ಬಳಗದವರಿಂದ ಬಾಗೇವಾಡಿಯಲ್ಲಿ ಬಹಿಷ್ಕೃತನಾದ. ಆಗ

ಕೂಡಲ ಸಂಗಮಕ್ಕೆ ಆಗಮಿಸಿ, ಶಿವಯೋಗ ಸಾಧಿಸಿ ಸಮತೆಯ ಸಂದೇಶವನ್ನು ರೂಪಸಿಕೊಂಡು, ಮಂತ್ರಿಯ ಸ್ಥಾನ ಪಡೆದು ಆಧ್ಯಾತ್ಯ ಹಾಗೂ ಲೋಕಕಾರ್ಯಗಳನ್ನು ಕೈಗೊಂಡರು. ಜಾತಿ ಕುಲ–ಗೋತ್ರ, ವರ್ಣ–ವರ್ಗ, ಲಿಂಗ ಬೇಧವಿಲ್ಲದೆ ಭರತ ಭೂಮಿಯ ಮೇಲೆ ಮೊಟ್ಟಮೊದಲನೆಯ ಸಮತಾ ತತ್ವದ ಸಂದೇಶ ಸಾರಿದರು.

ಹೊಲೆ ಗಂಡಲ್ಲದ ಪಿಂಡದ ನೆಲೆಗಾಶ್ರಯವಿಲ್ಲ

... ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ...

... ಲಿಂಗಸ್ಥಲವನರಿದವನೇ ಕುಲಜನು.(೪)

ಎಂದು ಸಂಪ್ರದಾಯ ಸಮಾಜಕ್ಕೆ ಸವಾಲೆಸಿದರು. ಆ ನುಡಿಯನ್ನು ನಡೆಯಲ್ಲಿ ತಂದರು. ಬಸವಣ್ಣನವರ ಮಾನವೀಯ ಮೌಲ್ಯದ ಮಹಾಮನೆಗೆ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಮಾದಾರ ಧೂಳಯ್ಯ, ಹಡಪದಪ್ಪಣ್ಣ, ಅಂಬಿಗರ ಚೌಡಯ್ಯ ಮುಂತಾದ ಅಸಂಖ್ಯಾತ ಶೋಷಿತ ವರ್ಗದಿಂದ ಬಂದ ಶರಣರು ತಮ್ಮ ಬದುಕಿಗೆ ಬಸವನ ಬೆಳಕು ಕಂಡರು.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೇತಕ್ಕರಿಯರಿ ಕೂಡಲಸಂಗಯ್ಯಾ(೫)

ಎಂದು ಸಮಾಜದ ಕಟ್ಟಕಡೆಯ ಜನಾಂಗದ ಮಾದಾರ ಚೆನ್ನಯ್ಯ ಮುಂತಾದವರನ್ನು ಹೃದಯ ತುಂಬಿ ಅಪ್ಪ, ಅಜ್ಜ, ಅಣ್ಣ ಎಂದು ಹಾಡಿದರು.

ಬಸವ ಸಮಕಾಲೀನರು ನಡೆಸ ಹೊರಟ ಸಾಮಾಜಿಕ ಕ್ರಾಂತಿಗೆ ಪ್ರಮುಖ ಕಾರಣ, ಆಗಿನ ಸಮಾಜದಲ್ಲಿ ಆಳವಾಗಿ ಬೇರೂರಿದ್ದ ವರ್ಣ, ಜಾತಿ ಮತ್ತು ವರ್ಗ ಸಮಸ್ಯೆಗಳು, ಈ ಪರಂಪರೆಯಿಂದ ಬೆಳಯಿಸಿಕೊಂಡು ಬಂದಿದ್ದ ನೀತಿಗಳಿಂದ ಸಮಾಜದಲ್ಲಿ ಶ್ರೇಷ್ಠ–ಕನಿಷ್ಠ, ಉತ್ತಮ–ಅಧಮ, ಶ್ರೀಮಂತ–ಬಡವ ಈ ಭೇದವನ್ನುಂಟು ಮಾಡಿ ಶೋಷಣೆಗೆ ದಾರಿಮಾಡಿಕೊಟ್ಟಿತು.

ಕೊಲ್ಲುವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ
ಕುಲವೇನೊ ಆವಂದಿರ ಕುಲವೇನೋ।
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು। ೬

ಎಂದು ವ್ಯಕ್ತಿಯ ಹುಟ್ಟಿನಿಂದ ಮೇಲು–ಕೀಳು ಜಾತಿಯೆಂದು ಅಳೆಯದೆ, ನಡೆ–ನುಡಿ, ಆಚಾರ–ವಿಚಾರ ಅನುಭಾವದಿಂದ ಆತನ ಅರ್ಹತೆಯನ್ನಳೆಯಬೇಕೆಂದು, ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಶರಣರೆ ಶ್ರೇಷ್ಠರೆಂದು ಸಾರಿದರು. ಅವರ ಜೊತೆಯೇ ಕೂಡಿದರು.

ವಾರವೇಳು, ಕುಲ ಹದಿನೆಂಟೆಂಬಿರಯ್ಯಾ।
ಅದ ನಾವು ಅಲ್ಲವೆಂಬೆವು ಹಗಲೊಂದು ವಾರ ಇರಳೊಂದು ವಾರ
ಭವಿಯೊಂದು ಕುಲ, ಭಕ್ತನೊಂದು ಕುಲ
ನಾವು ಬಲ್ಲದು ಇದು ಕಾಣಾ, ಕೂಡಲ ಚನ್ನಸಂಗಮದೇವಾ॥ ೭

ಎಂದು ವೈಚಾರಿಕ ಕ್ರಾಂತಿಯ ಹೊಸ ಹವೆಯನ್ನು ಬೀಸಿದರು.

ಸಮಾಜ ಸುಧಾರಕನಾಗಿ ಬಸವಣ್ಣನವರು ಹೊಸ ಸಾಮಾಜಿಕ ಮೌಲ್ಯಗಳನ್ನು ನೀಡಿ, ಅರ್ಥವಿಲ್ಲದ ಆಚಾರಗಳನ್ನು ತಿರಸ್ಕರಿಸಿ ಶ್ರೇಷ್ಠ–ಕನಿಷ್ಠ, ಸ್ಪೃಶ್ಯ–ಅಸ್ಪೃಶ್ಯ ಭಾವನೆಗಳನ್ನು ಸಂಪೂರ್ಣವಾಗಿ ಮನಸ್ಸಿನಿಂದ ತೊಡೆದು ಹಾಕಬೇಕೆಂದರು. ಬಡವರ ಪಕ್ಷಪಾತಿಯಾದ ಅವರು ಅಸ್ಪೃಶ್ಯರಿಗೆ ಸಮಾಜದಲ್ಲಿ ಸ್ಥಾನ, ಮಾನ, ಗೌರವ, ಆತ್ಮವಿಶ್ವಾಸಗಳನ್ನು ಗಳಿಸಿಕೊಟ್ಟರು.

ವ್ಯಕ್ತಿಗಳನ್ನು ಕುಲ, ಗೋತ್ರ, ವರ್ಣಾದಿಗಳಿಂದ ಭೇದ ಮಾಡಿದರೆ ದೇವರಲ್ಲೇ ಪಕ್ಷಪಾತ ತೋರಿಸಿದಂತೆ, ಆದ್ದರಿಂದ ಶಿವಭಕ್ತರೆಲ್ಲಾ ಸಮಾನರು. ಹುಟ್ಟಿನಿಂದಲೇ ಮೇಲು–ಕೀಳೆಂದು ಭೇದಮಾಡುವುದು ತಪ್ಪೆಂದ ಬಸವಣ್ಣನವರು ವ್ಯಕ್ತಿಯ ಶೀಲಕ್ಕೆ, ನುಡಿಗಿಂತ ನಡೆಗೆ, ಬುದ್ಧಿಗಿಂತ–ಭಾವ–ಅನುಭಾವಕ್ಕೆ ಹೆಚ್ಚಿನ ಮಹತ್ವಕೊಟ್ಟರು. ಸಮಾಜದಲ್ಲಿ ಸಕಲರೂ ಸಮಾನತೆಯಿಂದ ಬಾಳಬೇಕೆಂಬ ದಿವ್ಯಸಂದೇಶವನ್ನು ಅವರು

ಜಗತ್ತಿಗೇ ನೀಡಿದರು. ಸಮತೆಯ ತತ್ವದೊಂದಿಗೆ ಸ್ವಾತಂತ್ರ್ಯ ತತ್ತ್ವವನ್ನೂ ಸಾರಿದರು. ಸಮಾಜದ ವ್ಯಕ್ತಿಗಳು ಸತ್ಯ, ಸಂಯಮ, ಸಮತೆ, ಅನುರಾಗ, ಒಡನಾಟದಿಂದಲೆ ಅವರೇ ಶಿವಶರಣರು. ಮಹಿಳೆಯರೂ ಸೇರಿದಂತೆ ಎಲ್ಲರಿಗೂ ಸಮಾನ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟರು. ೮

ಜ್ಞಾನ ಕೇವಲ ಉತ್ತಮರ ಸ್ವತ್ತಲ್ಲ ಅದು ಎಲ್ಲರಿಗೂ ಸಿಗುವಂತಾಗಬೇಕೆಂದು ಬಸವಾದಿ ಶರಣರು ವಾದಿಸಿ ಅಸ್ಪೃಶ್ಯರಿಗೆ ಒದಗಿಸಿಕೊಟ್ಟರು. ಅಂತರ್ಜಾತಿ ವಿವಾಹದಿಂದ ಮಾತ್ರ ಮನುಷ್ಯ – ಮನುಷ್ಯರ ನಡುವೆ ಸಮಾನತೆ ತರಲು ಸಾಧ್ಯವೆಂದು ಮನಗಂಡರು. ಆದ್ದರಿಂದ ಅಸ್ಪೃಶ್ಯ ಹರಳಯ್ಯನ ಮಗನಿಗೂ, ಬ್ರಾಹ್ಮಣ ಮಧುವರಸನ ಮಗಳಿಗು ವಿವಾಹ ಮಾಡಿಸಿ ಬ್ರಾಹ್ಮಣ ಮತ್ತು ಅಸ್ಪೃಶ್ಯರ ನಡುವೆ ರಕ್ತಸಂಬಂಧವನ್ನು ಉಂಟು ಮಾಡಿಸಿದರು ಇದರಿಂದ ಧಾಮಿಕ– ಸಾಮಾಜಿಕ ಕ್ಷೋಭೆಗೆ ಕಾರಣವಾಗುವಂತಾಯಿತು.

ಚಾಂಡಾಲನಾದರೆಯೂ ಶಿವಭಕ್ತನೇ ಕುಲಜನು
ಶಿವನೇ ನಿಮ್ಮ ಸದ್ಭಕ್ತರನು ಅವರಿವರೆಂದು
ಕುಲವೆತ್ತಿ ನುಡಿದವರಿಗೆ ಇಪ್ಪತ್ತೆಂಟು ಕೋಟಿ ನರಕ ತಪ್ಪದು
ನೋಡಯ್ಯ ಬಸವಪ್ರಿಯ ಕೂಡಲ ಚನ್ನಸಂಗಮದೇವ. ೯

ಎಂಬ ಚನ್ನಬಸವಣ್ಣನ ವಚನದಲ್ಲಿ ನಿಜವಾದ ಶಿವಭಕ್ತನಿಗೆ ಜಾತಿಯೆಂಬುದಿಲ್ಲ, ಯಾರು ಜಾತಿಯ ಹಿನ್ನಲೆಯಲ್ಲಿ ಹೀಯಾಳಿಸುವರೋ ಅವರಿಗೆ ನರಕ ಭಾದೆ ತಪ್ಪಿದ್ದಿಲ್ಲ. ಎಲ್ಲೆಡೆ ಜಾತಿ ಸಮಾನತೆಗೆ ಕರೆಕೊಟ್ಟರು ಎಂದೇ ಹೇಳಬಹುದು.

ನಂತರ ಬಂದ ಸರ್ವಜ್ಞ ಜಾನಪದ ಕವಿ. ಅವನು ಕಟುಮಾತಿನವನಾದರೂ ಸತ್ಯವನ್ನು ನುಡಿಯುವವನು.

ಜಾತಿಯ ಬಗ್ಗೆ ಅವನು ಹೀಗೆನ್ನುತ್ತಾನೆ –

ಯಾತರದ ಹೂವೇನು ನಾತರದು ಸಾಲದೆ
ಜಾತಿ – ವಿಜಾತಿಯೆನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ॥(೧೦)

ಜಾತಿಹೀನರ ಮನೆಯ ಜ್ಯೋತಿ ತಾಹೀನವೇ
ಜಾತಿ ವಿಜಾತಿ ಎನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ॥(೧೧)

ನಡೆವುದೊಂದೇ ಭೂಮಿ ಕುಡಿಯಲೊಂದೆ ನೀರು
ಸುಡುವಗ್ನಿವೊಂದೇ ಇಂತಿರಲು
ನಡುವೆ ಕುಲವೆತ್ತಣದು ಬಂತು ಸರ್ವಜ್ಞ॥(೧೨)

ಜಾತಿ ಭೇದ ಮನುಷ್ಯಕುಲಕ್ಕೆ ಸಲ್ಲದು, ಇಲ್ಲಿ ಎಲ್ಲರೂ ಒಂದೇ, ಏಕೆಂದರೆ ಪಂಚಭೂತಗಳಲ್ಲೇ ಈ ಸಂಕುಚಿತ ಮನೋಭಾವನೆಗಳಿಂದ ಸಮಾಜದಲ್ಲಿ ಅಡ್ಡಪರಿಣಾಮಗಳನ್ನೆ ಉಂಟುಮಾಡುತ್ತವೆ ಹೊರತು ಮನುಷ್ಯ ಕುಲದ ಸರ್ವತೋಮುಖ ಅಭಿವೃದ್ಧಿಗೆ ಸಾಧ್ಯಮಾಡಿಸುವುದಿಲ್ಲ.

ಕೀರ್ತನಾ ಸಾಹಿತ್ಯ –ಜಾತಿಪದ್ಧತಿ

ಸಮಾಜ ಸುಧಾರಕರಾಗಿ ಕನಕದಾಸರು...

ಕನಕದಾಸ ಕೀರ್ತನೆಗಳು ಮತ್ತು ರಾಮಧಾನ್ಯ ಚರಿತ್ರೆ ಅವರ ಬದುಕಿನ ವೈಯಕ್ತಿಕ ಅಂಶಗಳ ಜೊತೆಗೆ ಸಮಾಜದ ಎಲ್ಲ ಸ್ತರಗಳ ಮೇಲೆ ಬೆಳಕು ಬೀರುವುದಲ್ಲದೆ, ಅಲ್ಲಿನ ಡೊಂಕುಗಳನ್ನು ಸರಿಪಡಿಸುವ ಚಿಂತನೆಗಳ ಕಡೆಗೂ ಗಮನ ತೋರುತ್ತದೆ. ಇಲ್ಲಿ ಸಮಾಜದ ವಾಸ್ತವದ ಅನುಭವಗಳನ್ನು ವಿವರಿಸುತ್ತಲೇ ಅದರ ವಿಡಂಬಕರಾಗಿಯೂ ಕಾಣಿಸಿಕೊಂಡಿರುವ ಕನಕದಾಸರ ಸಾಮಾಜಿಕ ಪ್ರಜ್ಞೆ ಮತ್ತು ಅವರ ಚಿಂತನಾಶೀಲ ಮನಸ್ಸು ಎರಡೂ ಮೆಚ್ಚುವಂತದ್ದು.

ಸಮಾಜದ ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಬಡವ-ಬಲ್ಲಿದ ಮುಂತಾದ ಜಾತಿ-ಮತ, ವರ್ಗಗಳ ಒಳ-ಹೊರಗನ್ನು ತಿರುವಿನೋಡಿದ್ದಾರೆ. ಅಷ್ಟೇ ಅಲ್ಲದೆ ಅವುಗಳ ವಿರುದ್ಧ ಬಂಡಾಯ ಮನೋಭಾವವನ್ನು ತಮ್ಮ ಸಾಹಿತ್ಯದಲ್ಲಿ ಕಾಣಿಸಿದ್ದಾರೆ. ಮೇಲ್ವರ್ಗದವರ ಹಣ, ಅಧಿಕಾರ, ಪ್ರತಿಷ್ಠೆ-ಅಹಂಕಾರ, ಡಾಂಭಿಕ ಸ್ವರೂಪವನ್ನು ಮತ್ತು ಕೆಳವರ್ಗದವರ ಮೌಢ್ಯ, ಅಜ್ಞಾನ, ಅಂಧಶ್ರದ್ಧೆಗಳಂತಹ ಮನೋಭಾವಗಳು ಅವರ ಕೀರ್ತನೆಯ ವಸ್ತುಗಳಾಗಿರುತ್ತಿದ್ದವು. ಆದರೆ ಒಂದು ಸ್ಥಗಿತ ವ್ಯವಸ್ಥೆಯ ಮಿತಿಯಲ್ಲಿಯೇ ನಿಂತುಕೊಂಡು ಸಮಾಜದ ಎಲ್ಲಾ ವಿಷಯಗಳಿಗೂ ಸ್ಪಂದಿಸಿದ್ದಾರೆ ಎನ್ನಬಹುದು.

ಒಂದು ಮುಷ್ಟಿಯಾಗಲು ಐದು ಬೆರಳುಗಳೂ ಅಗತ್ಯ. ಅವುಗಳಲ್ಲಿ ಒಂದು ಚಿಕ್ಕದಿರಬಹುದು, ಮತ್ತೊಂದು ದೊಡ್ಡದಿರಬಹುದು. ಹಾಗೆಂದ ಮಾತ್ರಕ್ಕೆ ಅವು ತಮಷ್ಟಕ್ಕೆ ತಾವು ಶ್ರೇಷ್ಠವೂ ಅಲ್ಲ, ಕನಿಷ್ಟವೂ ಅಲ್ಲ. ಕೊನೆಯ ಬೆರಳು ಕಿರಿದು ಎಂಬ ಕಾರಣಕ್ಕೆ ಅದನ್ನೇನು ನಾವು ಕತ್ತರಿಸಿ ಹಾಕವುದೂ ಇಲ್ಲ. ಹಾಗೆ ದೇಹದ ಯಾವುದೇ ಭಾಗಕ್ಕೆ ಗಾಯವೇನಾದರೂ ಆದರೆ, ಆ ಭಾಗದ ಶ್ರೇಷ್ಠತೆ – ಕನಿಷ್ಠತೆಯನ್ನು ಗಮನಿಸಿ ಚಿಕಿತ್ಸೆಯನ್ನು ನಾವು ನೀಡುವುದಿಲ್ಲ. ಆ ನೋವನ್ನು ಇಡೀ ದೇಹವೇ ತಿನ್ನುತ್ತದೆಯೇ ಹೊರತು ಕೇವಲ ಆ ಭಾಗ ಮಾತ್ರ ತಿನ್ನುವುದಿಲ್ಲ, ಅಲ್ಲದೆ ಆ ಭಾಗ ನಮಗೆ ಬೇಡವೆಂದು ಕತ್ತರಿಸಿ ಬಿಸಾಡಲು ಸಾಧ್ಯವೇ? ಅದಕ್ಕೆ ಮನಸ್ಸು ಒಪ್ಪುತ್ತದೆಯೇ? ಒಂದು ವೇಳೆ ಹಾಗೇನಾದರೂ ಮಾಡಿದರೂ ಮನುಷ್ಯ ಸಮತೋಲನವಾಗುಳಿಯಲು ಸಾಧ್ಯವಾಗುವುದಿಲ್ಲ. ಹಾಗೆ ಒಂದು ಪರಿಸರದಲ್ಲೂ ಸಹ ಮರ, ಬಂಡೆ, ಪ್ರಾಣಿಪಕ್ಷಿಗಳ ಎತ್ತರ-ಗಾತ್ರದ ನಡುವೆ ವ್ಯತ್ಯಾಸವಿರುತ್ತದೆ. ಅದರಂತೆ ಸಮಾಜದಲ್ಲಿ ಶ್ರೀಮಂತ-ಬಡವರು, ಬ್ರಾಹ್ಮಣ-ಶೂದ್ರರೂ, ಆಳುವ ವರ್ಗ-ಸಾಮಾನ್ಯ ಪ್ರಜೆಗಳು ಹೀಗೆ ಎಲ್ಲರೂ ಇದ್ದಾರೆ. ಒಬ್ಬರಿಂದಲೇ ಮತ್ತೊಬ್ಬರ ಉಳಿವೇ ಹೊರತು, ಕೇವಲ ಒಬ್ಬರಿಂದಲೇ ಎಲ್ಲರ ಉಳಿವಲ್ಲ ಎಂಬದಂತೂ ಸತ್ಯವಾದ ಮಾತು. ಆದ್ದರಿಂದ ಪರಸ್ಪರ ಒಬ್ಬರನ್ನೊಬ್ಬರು ದ್ವೇಷಿಸದೆ, ನಾಶಗೈಯದೆ ಪರಸ್ಪರ ಅನ್ಯೋನ್ಯವಾಗಿ ಸಹಕಾರದಿಂದ ಬಾಳ್ವೆ ನಡೆಸಬೇಕು ಕಚ್ಚಾಟದಿಂದ ಯಾವ ಬಗೆಯ ಸಾಧನೆಯೂ ಆಗುವುದಿಲ್ಲ. ಭಾವೈಕ್ಯದ ಪ್ರಧಾನ ಆದರ್ಶವನ್ನಾಗಿ ಸ್ವೀಕರಿಸಬೇಕು ಎಂಬುದು ಕನಕದಾಸರ ಆಶಯವಾಗಿದ್ದಿತ್ತೇನೋ

ಎಂಬಂತೆ ಕನಕದಾಸರು ತನ್ನ ರಾಮಧಾನ್ಯ ಚರಿತ್ರೆಯಲ್ಲಿ ಈ ಬಗೆಯ ಸಾರವನ್ನೇ ತಿಳಿಸುವಂತೆ 'ಎಲ್ಲರೂ ಅತಿಹಿತದಲಿ ಬಾಳಿ' ಎಂದು ಹಾರೈಸುವಂತೆ ಕಾಣುತ್ತದೆ. ಅಲ್ಲದೆ ಕನಕದಾಸರ ಈ ಮಾತು ಸಮಾಜದ ಜನತೆಗೆ ಸರ್ವಸಮಾನತೆ ತತ್ವದ ಸಾರವನ್ನು ಸಾರಿಹೇಳುವಂತಿದೆ ಎಂಬುದು ಗಮನಾರ್ಹ.

ಕನಕದಾಸರ ಪಾಂಡಿತ್ಯ, ಭಕ್ತಿವೈಶಿಷ್ಟ್ಯ ಮತ್ತು ಅವರ ವ್ಯಕ್ತಿತ್ವಕ್ಕೆ ವ್ಯಾಸರಾಯರು, ಪುರಂದರ ದಾಸರು ಅಲ್ಲದೆ ಸಮಕಾಲೀನ ಅರಸರೆ ಬೆಲೆಕೊಟ್ಟು ಸಾಮಾಜಿಕ ಗೌರವವನ್ನು ಸೂಚಿಸಿರಬೇಕಾದರೆ ಈ ಪಂಡಿತ – ಬ್ರಾಹ್ಮಣರು ಅವರನ್ನು ಕೀಳಾಗಿ ಕಂಡು, ಕೆಣಕಿ, ಅಣುಕುನುಡಿಗಳನ್ನು ವರ್ಷಾನುಗಟ್ಟಲೆ ಅವರ ವಿರುದ್ಧ ಆಡಿದ್ದಿರಬೇಕು, ಕನಕ ತನ್ನ ತಾಳ್ಮೆಯ ಮಿತಿ ಮೀರುವವರೆಗೂ ಸಹಿಸಿದ್ದು, ಕೊನೆಗೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲೋಸುಗ, ಅನಿವಾರ್ಯವಾಗಿ ಎದುರು ನಿಲ್ಲುವ ಮನೋವೃತ್ತಿಯನ್ನು ತಾಳಿರಬೇಕು. ಅದರಂತೆ ತನ್ನ ಶ್ರೇಷ್ಠತೆ ಮತ್ತು ರಾಗಿಯ ಕನಿಷ್ಠತೆಯನ್ನು ಕುರಿತು ಸಭೆಯಲ್ಲಿ ಭತ್ತವು ಒಂದೇ ಸಮನೆ ಅವಮಾನಕ್ಕೊಳಪಡಿಸಿದಾಗ ಕೊನೆಗೆ ತಾಳ್ಮೆ ಕಳೆದುಕೊಂಡ ರಾಗಿ ಅಕ್ಕಿಯ ಜಂಭವನ್ನು ಮುರಿಯುವಂತೆ ಅದರ ವಿರುದ್ಧ ಪ್ರತಿಭಟಿಸಿ ನಿಂತಾಗ ಅಕ್ಕಿಯೂ ತಣ್ಣಗಾಯಿತು.

ಇಲ್ಲಿನ ಭತ್ತ–ರಾಗಿಯ ಸಂಭಾಷಣೆಯು ಸಾಮಾಜಿಕ ಸ್ಥಿತಿ–ಗತಿಗೆ ಕನ್ನಡಿ ಹಿಡಿದಂತೆ ನಾಟಕೀಯ ಪ್ರತಿಭೆಯಲ್ಲಿ ರಚಿಸಿ ಕನ್ನಡ ಸಾಹಿತ್ಯದಲ್ಲೇ ಕವಿ ಕನಕದಾಸರು ವಿಶಿಷ್ಟ ಛಾಪು ಮೂಡಿಸಿದ್ದಾರೆ. ಕೊನೆಯಲ್ಲಿ ರಾಗಿಯೇ ಶ್ರೇಷ್ಠ ಧಾನ್ಯ, ಅದು ಬಡವರ ಪ್ರೀತಿಗೆ ಪಾತ್ರವಾದದ್ದು ಮತ್ತು ಶಕ್ತಿಶಾಲಿ – ಸತ್ವಯುತವಾದ ಧಾನ್ಯ ಎಂದು ಹೇಳಿ 'ರಾಘವ' ಎಂಬ ಬಿರುದನ್ನು ನೀಡಿದಾಗ ಅದು ಹಿಗ್ಗಿ ಸಂತೋಷಪಟ್ಟು ಇತರ ಧಾನ್ಯಗಳನ್ನು ಕಾಲಿನ ಕಸವಾಗಿ ಕಾಣಲಿಲ್ಲ. ಬದಲಿಗೆ ಮೇಲ್ವರ್ಗದವರ ಧಾಳಿಗೆ ತುತ್ತಾಗಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗಿದ್ದ ಸಂದರ್ಭದಲ್ಲಿ ಹಿರಿಯ, ನ್ಯಾಯವಾದಿ ಶ್ರೀರಾಮನಂತಹ ಮಹಾನ್ ವ್ಯಕ್ತಿಯಿಂದ ತನ್ನ ಅಸ್ತಿತ್ವವು ಈ ಸಮಾಜದಲ್ಲಿ ಉಳಿಯುವ ಹಾಗಯಿತಲ್ಲ. ಹಾಗೂ ತನ್ನ ಆದರ್ಶ, ಕರ್ತವ್ಯ ಮತ್ತು ಜವಾಬ್ದಾರಿಗಳೇನು ಎಂಬುದು ತನಗೆ ಮತ್ತು ಇತರರಿಗೆ ಮನವರಿಕೆಯಾಯಿತಲ್ಲ ಎಂಬ ಒಂದು ತೃಪ್ತಿ ಉಳಿದು ಹಸನ್ಮುಖಿಯಾಯಿತು. ಒಂದು ವೇಳೆ ಭತ್ತಕ್ಕೆ ಈ ವಿಜಯದ ಮಾಲೆ ದೊರೆತಿದ್ದರೆ

ಅದರ ಜಂಭ ಇನ್ನು ಹತ್ತು ಪಟ್ಟು ಹೆಚ್ಚಾಗಿ, ತನ್ನ ಮುಂದೆ ನಿಲ್ಲುವವರು ಯಾರೂ ಇಲ್ಲ, ನಾನೇ ಸರ್ವಶ್ರೇಷ್ಠ ಎಂದು ಹಿಗ್ಗಿ ತನ್ನ ಕರ್ತವ್ಯ ನಿಷ್ಠೆಯನ್ನು ಮರೆತು ಬಿಡುತ್ತಿತ್ತು ಎಂದೆನಿಸುತ್ತದೆ.

ಇಲ್ಲಿನ ರಾಗಿಯ ವಿಜಯದ ಮೂಲಕ ಎಲ್ಲಾ ಕೆಳಜಾತಿ, ಕೆಳವರ್ಗ, ಕನ್ನಡವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಹೀಗೆ ಕನಕದಾಸರು ಮೇಲ್ವರ್ಗದ ಸ್ವಾರ್ಥಬದ್ಧವಾದ ದೋಷ, ಅಹಂಕಾರ ಗುಣಗಳನ್ನು ನಿರ್ದಾಕ್ಷಿಣ್ಯವಾಗಿ ತಿಳಿಸಿದ್ದರೂ, ಕೆಳವರ್ಗದವರ ದೋಷ, ವರ್ತನೆಯನ್ನು ಸಹನೆಯಿಂದಲೇ ಗ್ರಹಿಸಿ, ಕನಿಕರದಿಂದ ತಿಳಿಸುತ್ತಾರೆ. ಅಂದರೆ ಕನಕದಾಸರ ದೃಷ್ಟಿಕೋನದಲ್ಲಿ ತಿಳಿಯದೆ ಮಾಡುವ ತಪ್ಪಿಗಿಂತ ತಿಳಿದು ಮಾಡುವ ತಪ್ಪು ಘೋರ ಅಪರಾಧವಾಗುವುದು. ಅದು ಮನುಷ್ಯರ ಅಮಾನವೀಯ ಪ್ರವೃತ್ತಿಯನ್ನು ತಿಳಿಸಿಹೇಳುತ್ತದೆ.

ಜಾತಿ ಪದ್ಧತಿ ಮತ್ತು ಶಿಕ್ಷಣ

ಭಾರತೀಯ ಸಾಮ್ರಾಟರು ಶಿಕ್ಷಣವನ್ನು ತಮ್ಮ ಮಡಿವಂತ ಜಾತಿಗೆ ಮೀಸಲಾಗಿರಿಸಿಕೊಂಡಿತ್ತು. ಮುಂದೆ ಬ್ರಿಟಿಷ್ ಸರಕಾರದ ಆಡಳಿತದಲ್ಲಿ ಕ್ರಿ.ಶ. ೧೮೧೩ರ ಒಂದು ಗೊತ್ತುವಳಿಯಲ್ಲಿ ಈಸ್ಟ್ ಇಂಡಿಯಾ ಕಂಪನಿಯವರಿಂದ ಭಾರತೀಯರೆಲ್ಲರಿಗೂ ಶಿಕ್ಷಣ ದೊರೆಯಬೇಕೆಂಬ ಒಪ್ಪಂದವಾಯಿತು. ಬ್ರಿಟೀಷ್ ಶಿಕ್ಷಣ ತಜ್ಞ ಮೆಕಾಲೆ ಸಾರ್ವಜನಿಕ ಶಿಕ್ಷಣ ನೀತಿಯನ್ನು ಮುಕ್ತವಾಗಿ ಜಾರಿಗೆ ತಂದನು. ಇಡೀ ದೇಶದ ಜನಜಾಗೃತಿಯ ಚರಿತ್ರೆಯಲ್ಲಿ ಅದರಲ್ಲಿಯೂ ಶೂದ್ರ, ಅಸ್ಪೃಶ್ಯರ ಜನಜಾಗೃತಿಯಲ್ಲಿ ಮೆಕಾಲೆ ಶಿಕ್ಷಣ ನೀತಿ ಒಂದು ಅಪೂರ್ವ ಮೈಲಿಗಲ್ಲಾಗಿತ್ತು. ಭಾರತೀಯರ ಜಾತಿಪದ್ಧತಿಯಲ್ಲಿ ಪಾಶ್ಚಾತ್ಯರ ಸಾರ್ವತ್ರಿಕ ಶಿಕ್ಷಣ ನೀತಿಯು ಭಾರತದೇಶದ ಜನತೆಯ ಜೀವನದಲ್ಲಿ ಹೊಸ ಚಿಂತನೆಯ ಬುನಾದಿಯನ್ನು ಹಾಕಿತ್ತು. ಅದೂವರೆಗೂ ಪುರೋಹಿತಶಾಹಿಯ ಸ್ವತ್ತಾಗಿದ್ದ ಮತ್ತು ಅವರ ಕಪಿಮುಷ್ಟಿಯಲ್ಲಿದ್ದ ಶಿಕ್ಷಣ ಮಾನವ ಕುಲಕೋಟಿಗೆ ಮುಕ್ತವಾಯಿತು. ಇದಕ್ಕೆ ಅನುಕೂಲವಾಗಿ ಭಂಡಾರ್‌ಕರ್ ಮಹಾದೇವ, ಗೋವಿಂದ ರಾನಡೆ, ಗೋಖಲೆ, ಸರೋಜಿನಿ ನಾಯ್ಡು, ವಿವೇಕಾನಂದ, ರಾಜರಾಮ್ ಮೋಹನ್ ರಾಯ್, ದಯಾನಂದ ಸರಸ್ವತಿ, ಲಾಲಾಲಜಪತ್‌ರಾಯ ಮುಂತಾದ

ಮುಖಂಡರು ಪಾಶ್ಚಾತ್ಯ ಶಿಕ್ಷಣ ನೀತಿಯನ್ನು ಸಾರಿ, ಶಿಕ್ಷಣವು ಎಲ್ಲಾವರ್ಗದವರಿಗೂ ಸಲ್ಲುವ ಹಾಗೆ ಪ್ರಯತ್ನಿಸಿದರು. ಆದರೂ ಬ್ರಾಹ್ಮಣರ ವಿರೋಧವಂತೂ ತಪ್ಪಿದ್ದಿಲ್ಲ ಎಂದು ಹೇಳಬಹುದು. ಜಾತಿ ಪದ್ಧತಿ ನಡೆದು ಬಂದ ಪರಂಪರೆಯಲ್ಲಿಯೆ ಇಪ್ಪತ್ತನೆಯ ಶತಮಾನದ ಸ್ವತಂತ್ರ ಭಾರತದ ಚಳುವಳಿಯ ಅವಧಿಯಲ್ಲಿ ಡಾ॥ ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧೀಜಿರವರ ಪಾತ್ರ ಹಾಗೂ ಆ ಸಂದರ್ಭದಲ್ಲಾದ ಬದಲಾವಣೆ ಬಹುಮಹತ್ವದ್ದಾಗಿದೆ.

ಅಸ್ಪೃಶ್ಯತೆಯ ಆಚರಣೆಯ ಅಸ್ಪೃಶ್ಯರ ಬದುಕನ್ನು ಹಾಳುಗೆಡಹಿರುವುದಷ್ಟೇ ಅಲ್ಲ, ಹಿಂದೂಗಳನ್ನು ಮತ್ತು ಇಡೀ ರಾಷ್ಟ್ರವನ್ನು ಆತ್ಮನಾಶದ ಹಾದಿಗೆಳೆದಿದೆ ಎಂದ ಅಂಬೇಡ್ಕರ್‌ರು ಜಾತಿ ಸಮಾನತೆಗಾಗಿ ಕರೆ ನೀಡಿದ್ದಾರೆ. "ಹರಿಜನರು = 'ವಿಷ್ಣುವಿನ ಮಕ್ಕಳು' " ಎಂದು ಅಸ್ಪೃಶ್ಯರಿಗೆ ಶಾಂತಿ-ಸಮಾನತೆಗೆ ಪ್ರೇರೇಪಿಸಿ, ಹಲವು ಕಾರ್ಯಕ್ರಮಗಳ ಮೂಲಕ ಜಾತಿ ನಿರ್ಮೂಲನಕ್ಕಾಗಿ ಹೋರಾಟ ಮನೋಭಾವ ತಾಳಿದ್ದರು. ವಿವೇಕಾನಂದರು ಅಸ್ಪೃಶ್ಯತೆಯ ಕುರಿತು, ಅಂತ್ಯಜರು, ಅಜ್ಞಾನಿಗಳು, ಅನಕ್ಷರಸ್ಥರು, ಬಡವರು, ಆಚಾರಕರನ್ನು (ಶೋಷಕ) ಚಮ್ಮಾರರು, ಜಲಗಾರರು ಇವರೆಲ್ಲರೂ ನಿನ್ನ ರಕ್ತಮಾಂಸದವರೇ, ನಿನ್ನ ಸಹೋದರರೇ ಎಂಬುದನ್ನು ಮರೆಯದಿರು – ಎಂದು ಎಚ್ಚರಿಸಿದ್ದಾರೆ.

<u>ವರ್ಗ ವ್ಯವಸ್ಥೆ</u>

ವರ್ಗವ್ಯವಸ್ಥೆ ಆರ್ಥಿಕ ಅಸಮತೋಲನೆಯ ಮೂಲಕ ಅಸ್ತಿತ್ವಗೊಂಡಿದ್ದಾಗಿದೆ. ಲೋಕದಲ್ಲಿ ಕೆಲವರು ಸಿರಿಸಂಪತ್ತಿನಿಂದ ಸಿರಿವಂತರಾಗಿದ್ದರೆ, ಹಲವರು ಬಡತನದ ಬವಣೆಯಲ್ಲಿ ಬೆಂದು-ನೊಂದವರಾಗಿದ್ದಾರೆ. ಮಾನವನ ಭೌತಿಕ ಬದುಕಿನಲ್ಲಿ ಸಿರಿಸಂಪತ್ತು-ಐಶ್ವರ್ಯ, ಸುಖ-ಭೋಗ ಜೀವನವನ್ನೊದಗಿಸಿದರೆ, ಅದಿಲ್ಲದ ಅವ್ಯವಸ್ಥೆ ಮಾನವನಿಗೆ ದುಃಖ, ನೋವು, ಚಿಂತೆ, ಅಸಹಾಯಕತೆ, ದಾಸ್ಯ, ಅವಮಾನ, ಶೋಷಣೆಗಳೆಂಬ ಹಲವು ಬವಣೆಗಳನ್ನು ಬದುಕಿನಲ್ಲಿ ತಂದೊಡ್ಡುತ್ತದೆ. ಐಶ್ವರ್ಯವಂತರು ಬಂಡವಾಳಶಾಹಿಗಳೆನಿಸಿದ್ದರೆ, ಬಡವರು ಜೀವನದುದ್ದಕ್ಕೂ ಶ್ರೀಮಂತರ ದಾಸ-ಸೇವಕರಾಗಿಯೇ ಅವರ ಅಧೀನರಾಗಿರುತ್ತಾರೆ. ಬಡವರ ಶ್ರಮಕ್ಕೆ ಪ್ರತಿಫಲವಾಗಿ ಕನಿಷ್ಠತಮ ಕೂಲಿಯನ್ನು ತೆತ್ತು, ಗರಿಷ್ಠ ಲಾಭವನ್ನು ಬಂಡವಾಳದಾರರು

ಉತ್ಪಾದಿಸಿಕೊಳ್ಳುತ್ತಾರೆ. ಆ ಕೂಲಿಯು ಅವನ ಮತ್ತು ಆತನ ಕುಟುಂಬ ವರ್ಗದ ಜೀವನ ನಿರ್ವಹಣೆಗೂ ಸಾಧ್ಯವಾಗದೆ ಆತನು ಹೆಚ್ಚಿನ ಬಡ್ಡಿಗೆ ಹಣವನ್ನು ಬಂಡವಾಳಶಾಹಿಗಳಿಂದ ಪಡೆದು ಸಾಲಗಾರನಾಗುತ್ತಾನೆ. ಸಾಲಭಾದೆ ತಾಳಲಾರದೆ ಆತ್ಮಹತ್ಯೆಗೆ ಶರಣಾಗುವ ವರ್ಗ ಒಂದೆಡೆಯಾದರೆ, ಮತ್ತೊಂದೆಡೆ ಆ ಸಿರಿವಂತ ವರ್ಗ ಬಡವರನ್ನು ತನ್ನ ಅಧೀನ ನೌಕರನಾಗಿಯೋ, ಸೇವಕ-ಜೀತದಾಳಾಗಿಯೇ ನಿಯಮಿಸಿಕೊಳ್ಳುತ್ತಾನೆ. ಮೊದಲೇ ಯಾವ ಹಣ ಆಸ್ತಿಯನ್ನು ಹೊಂದಿರದ ಬಡ ಕಾರ್ಮಿಕರು ತಮ್ಮ ಶ್ರಮಶಕ್ತಿಯನ್ನು ಶ್ರೀಮಂತರು ಬಡ್ಡಿ ಸಾಲದ ಅಧೀನಗೊಳಿಸಿ, ತಾವು ನಿರಂತರ ಶೋಷಣೆಗೊಳಗಾಗುತ್ತಾರೆ. ಇದರಿಂದ ಶ್ರೀಮಂತ ಬಂಡವಾಳಶಾಹಿ ಮತ್ತಷ್ಟೂ ಬಲಿಷ್ಠನಾಗುತ್ತಾನೆ. ದುಡಿವ ಬಡವವರ್ಗ ಇನ್ನಷ್ಟೂ ಬಡವಾಗುತ್ತದೆ.

ವರ್ಗಭೇದ ಉಗಮ, ಸ್ವರೂಪ

ಶ್ರಮ ವಿಭಜನೆಯ ಸಲುವಾಗಿ ಪ್ರತಿಯೊಂದು ವರ್ಗಗಳಿಗೆ ಈ ರೀತಿಯ ಕೆಲಸಗಳು ಎಂದು ಹಂಚಿ, ಇದೇ ನಿಯಮವನ್ನು ಎಲ್ಲರೂ ಖಡ್ಡಾಯವಾಗಿ ಪರಿಪಾಲಿಸಬೇಕು. ನಿಯಮ ಮೀರುವಂತಿಲ್ಲ ಹಾಗೇನಾದರೂ ಮೀರಿದರೆ ಲೋಕದ ದುರಂತಕ್ಕೆ ನಾಂದಿಯಾಗುತ್ತಾರೆ ಎಂದೆಲ್ಲಾ ಕಟ್ಟುಪಾಡುಗಳನ್ನು ವಿಧಿಸಿದ್ದರು. ಇವೆಲ್ಲಾ ತಮ್ಮ ತಮ್ಮ ಲಾಭ ಮತ್ತು ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕೆ ಎಂದು ಸ್ಪಷ್ಟವಾಗಿ ತೋರುವಂತಿದೆ.

ಲೋಕದಲ್ಲಿ ಬಡವವರ್ಗ ಮತ್ತು ಶ್ರೀಮಂತವರ್ಗಗಳೆಂಬ ಎರಡು ವರ್ಗಬೇಧವನ್ನು ಕಾಣುತ್ತೇವೆ. ಐಶ್ವರ್ಯವಂತರು ಭೋಗವಿಲಾಸ ಜೀವನ ನಡೆಸಿದರೆ, ಬಡವರು ಒಪ್ಪೊತ್ತಿನ ಊಟಕ್ಕೂ ಹೆಣಗುವರು. ಇವೆರಡೂ ವರ್ಗಭೇದಗಳ ಹುಟ್ಟಿಗೆ ಹೇಗೆ ಕಾರಣವೆಂಬುದನ್ನು ಸ್ವಲ್ಪ ಸೂಕ್ಷ್ಮ ದೃಷ್ಟಿಯಿಂದ ವಿವೇಚಿಸಿ ನೋಡಿದರೆ ಮನದಟ್ಟಾಗುತ್ತದೆ. ಏಕೆಂದರೆ ಭಾರತೀಯರಲ್ಲಿ ಆರಂಭದಿಂದಲೂ ಪೂರ್ವಜನ್ಮ, ಪಾಪ-ಪುಣ್ಯಗಳಿಂದಲೇ ಈ ಜನ್ಮದಲ್ಲಿ ಜಾತಿ, ವರ್ಗ, ವರ್ಣ, ಶ್ರೀಮಂತಿಕೆ-ಬಡತನ ಪ್ರಾಪ್ತವಾಗುತ್ತದೆ ಎಂಬುದು – ಈ ವರ್ಗವ್ಯವಸ್ಥೆಯ ಉಗಮಕ್ಕೆ ಕಾರಣವೆಂಬ ನಂಬಿಕೆಯನ್ನು ನಂಬುವ ಮಂದಬುದ್ಧಿಯವರೂ ಇದ್ದಾರೆ. ಈ ವಾದದಲ್ಲಿ ತಿರುಳಿಲ್ಲ ವೆಂಬುವವರೂ ಇದ್ದಾರೆ. ಅದೇನೆ ಇರಲಿ ಶ್ರೀಮಂತ ಮತ್ತು ಬಡವ ಎಂಬ

ವರ್ಗಗಳಿದ್ದು ಇವರ ನಡುವೆ ತಾರತಮ್ಯ, ಮೇಲ್ವರ್ಗದವರ ಶೋಷಣೆ, ದಬ್ಬಾಳಿಕೆ – ದೌರ್ಜನ್ಯದಿಂದಾಗಿ ಕೆಳವರ್ಗದವರು ಅಸಹನೀಯ ವೇದನೆ, ಬಡತನ, ಅಸಹಾಯಕ ಸ್ಥಿತಿಗಳು ಆದಿಕಾಲದಿಂದಲೂ ನಡೆದುಬಂದಿರುವುದು ಹಲವು ಐತಿಹ್ಯಗಳಿಂದ ಸ್ಪಷ್ಟವಾಗುತ್ತದೆ.

ಬಡ ಶ್ರಮ ಜೀವಿಗಳು, ಹೊಲಗದ್ದೆಗಳಲ್ಲಿ ಶ್ರೀಮಂತರ ಮನೆಗಳಲ್ಲಿ, ಅವರ ಗೃಹ ನಿರ್ಮಾಣದಲ್ಲಿ, ರಸ್ತೆ–ಸೇತುವೆ ಕಾರ್ಯಗಳಲ್ಲಿ, ಕೈಗಾರಿಕೆ ಇತ್ಯಾದಿಗಳಲ್ಲಿ ಕೂಲಿಗಾಗಿ ದುಡಿಯುತ್ತಾರೆ. ಕೂಲಿ ಕಾರ್ಮಿಕರು ದಿನ ಒಂದಕ್ಕೆ ನಿಗದಿ ಪಡಿಸಿದ ಹಣಕ್ಕಾಗಿ ತಮ್ಮ ಶ್ರಮಶಕ್ತಿಯನ್ನು ಹೇಳಿದ ಕೆಲಸದಲ್ಲಿ ತೊಡಗಿಸುತ್ತಾರೆ. ಅದಕ್ಕೆ ಬಂಡವಾಳಶಾಹಿಗಳು ಗರಿಷ್ಠ ಲಾಭವನ್ನು ತಾವಿಟ್ಟುಕೊಂಡು ಕನಿಷ್ಠ ಬೆಲೆ ಕೊಡುತ್ತಾರೆ. ಅಲ್ಪ ಕೂಲಿಗಾಗಿ ದುಡಿವ ಬಡ ಕೂಲಿವರ್ಗದವರು ಹರಕು–ಮುರುಕು ಬಟ್ಟೆ, ಗುಡಿಸಲಿನಲ್ಲಿ ಬದುಕನ್ನು ಹತಾಶೆಯಿಂದ ನೂಕುತ್ತಾ ಜೀವನ ಕಳೆಯುತ್ತಾರೆ.

ವರ್ಗ ವ್ಯವಸ್ಥೆ – ವಚನ ಸಾಹಿತ್ಯ

ಕರ್ನಾಟಕದ ಕಲ್ಯಾಣದಲ್ಲಿ ಬಸವಣ್ಣನವರು ಸಮಗ್ರ ಕ್ರಾಂತಿಯ ಜಾಗೃತಿಯನ್ನು ಮಾಡಿದರು. ಜನಮನವನ್ನು ಜಾಗೃತಗೊಳಿಸಿದರು. ಶರಣರು ಆರ್ಥಿಕ ಕ್ರಾಂತಿ ವರ್ಗರಹಿತ ವ್ಯವಸ್ಥೆಯ ಮೂಲಕಾಯಕವಾಗಿತ್ತು. ವಿಶ್ವದ ನಾಗರೀಕರಲ್ಲಿ ಪ್ರತಿಯೊಬ್ಬರೂ ಪರಾವಲಂಬಿ ಜೀವನ ಮಾಡದೆ ಪರರ ಪರಿಶ್ರಮದಲ್ಲಿ ಪಾಲುದಾರರಾಗಿ ಬಾಳದೆ ಸ್ವಾವಲಂಬಿಗಳಾಗಿ, ಕಾಯಕ ಜೀವಿಗಳಾಗಿ ಬಾಳಬೇಕೆಂದು ಕರೆಕೊಟ್ಟರು. ತಮ್ಮ ಆಧ್ಯಾತ್ಮಿಕ ಕ್ಷೇತ್ರದ ಆಶ್ರಯದಲ್ಲಿ ಕಾಯಕ ತತ್ವ ಬೋಧನೆ ಸಾಧನೆಯನ್ನು ಕಡ್ಡಾಯಗೊಳಿಸಿದರು. ಭಕ್ತಿ ಭಂಡಾರಿ ಬಸವಣ್ಣನವರ 'ಕಾಯಕವೇ ಕೈಲಾಸ' – 'ಕಾಯಕ ತತ್ವ' ದಂತೆ ದುಡಿದು ತಿನ್ನಬೇಕೆಂಬ ಛಲವನ್ನು ಕೆಳವರ್ಗದವರಲ್ಲಿ ಮೂಡಿಸಿತು. ಯಾವುದೇ ಕಾಯಕವಾಗಲಿ ಮೋಸ, ವಂಚನೆಗಳಿಲ್ಲದೆ ಮಾಡಬೇಕು. ಕಾಯಕ ಸೂತ್ರದಲ್ಲಿ ಎಲ್ಲರೂ ಸಮಾನ, ಇಲ್ಲಿ ಮೇಲು–ಕೀಳು ಎಂದಿರಲಿಲ್ಲ.

ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ವರ್ಗರಹಿತ ಸಮಾಜ ನಿರ್ಮಾಣಕ್ಕಾಗಿ ಕಾಯಕ ದಾಸೋಹಗಳೆಂಬ ಸೂತ್ರಗಳನ್ನು ರೂಪಿಸಿದರು. ಕಾಯಕಕ್ಕೆ ತಕ್ಕ ಪ್ರತಿಫಲ ಮಾತ್ರ ಪಡೆಯಬೇಕೆಂಬುದು ಶರಣರ ಕಾಯಕ ಸೂತ್ರ . ಅಗತ್ಯಕ್ಕಿಂತ ಹೆಚ್ಚಿನ ಅಕ್ಕಿಯನ್ನು ಆಯ್ದು ತಂದಿದ್ದಕ್ಕೆ ಆಯ್ದಕ್ಕಿ ಲಕ್ಕಮ್ಮ ತನ್ನ ಗಂಡನಾದ ಆಯ್ದಕ್ಕಿ ಮಾರಯ್ಯನಿಗೆ, "ಈಸಕ್ಕಿಯಾಸೆ ನಿಮಗೇಕೆ, ಈಶ್ವರನೊಪ್ಪ" ಎಂದು ತಿಳುವಳಿಕೆ ಮಾತನ್ನು ಹೇಳಿದ ವಚನವನ್ನು ಗಮನಿಸಿದಾಗ-ಸಂಪತ್ತನ್ನು ಸಂಗ್ರಹಿಸುವ ಶ್ರೀಮಂತ ಬಂಡವಾಳಶಾಹಿಗಳಿಗೂ ಕೂಡ ಆರ್ಥಿಕ ನೀತಿಯನ್ನು ಬೋಧಿಸುತ್ತಾರೆ. ಅವರ ಉದ್ದಂಡ ಪ್ರವೃತ್ತಿಯನ್ನು ಖಂಡಿಸುವ ಮನೋಗುಣ, ಶ್ರೀಮಂತರ ವಿರುದ್ಧ ಬಂಡಾಯವೆತ್ತುವ ಸೊಲ್ಲು ವಚನಕಾರರಲ್ಲಿ ಅಧಿಕವಾಗಿಯೇ ಮೂಡಿದೆ. ವಚನ ಸಾಹಿತ್ಯದ ಕಾಲದಲ್ಲಿ ಜಾತಿ, ವರ್ಗ, ಲಿಂಗ ತಾರತಮ್ಯ ಕಾಣಿಸದೆ ಎಲ್ಲರೂ ಒಂದೇ ಎನ್ನುವ ಏಕತೆಯ ಮನೋಭಾವವನ್ನು ಗುರುತಿಸಲು ಸಾಕಷ್ಟು ಆಧಾರಗಳಿವೆ. ಉದಾ: ಆಯ್ದಕ್ಕಿ ಲಕ್ಕಮ್ಮ, ಮಾದಾರ ಚೆನ್ನಯ್ಯ, ತುರುಗಾಹಿ ರಾಮಯ್ಯ, ಮಾದಾರ ಧೂಳಯ್ಯ, ಅಂಬಿಗರ ಚೌಡಯ್ಯ, ಹೆಂಡದ ಮಾರಯ್ಯ ಮುಂತಾದವರು. – ಅವರವರ ವೃತ್ತಿ ಅವರುಗಳ ಹೆಸರಿನೊಂದಿಗೆ ಬೆಸೆದುಕೊಂಡಿದೆ. ವಚನಕಾರರೆಲ್ಲರೂ ತಮ್ಮ ಪರಿಭಾಷೆಯಲ್ಲಿಯೇ ತಮ್ಮ ಅನುಭವಗಳನ್ನು ರೂಪಕವಾಗಿ ಅಭಿವ್ಯಕ್ತಪಡಿಸಿವುದು ಗಮನಾರ್ಹ ಸಂಗತಿ.

ಹೀಗೆ ವಚನ ಸಾಹಿತ್ಯದ ಕಾಲದಲ್ಲಿ ಪ್ರತಿಯೊಬ್ಬರೂ ಯಾವುದಾದರೂ ವೃತ್ತಿಯನ್ನು ಜೀವನಕ್ಕೆ ಆಧಾರವೆಂಬಂತೆ ಮಾಡಲೇಬೇಕಾಯಿತು. ಈ ಮೂಲಕ ಆರ್ಥಿಕ ಸಮಾನತೆ ಸಾಧಿಸಿ ವರ್ಗರಹಿತ ಸಮಾಜ ರಚನೆ ಅವರ ಪ್ರಮುಖ ಉದ್ದೇಶವಾಗಿತ್ತು.

ಗುರುವಾದಡೂ ಕಾಯಕದಿಂದಲೆ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೆ ಶಿಲೆಯ ಕುಲ ಹರಿವುದು
ಜಂಗಮವಾದಡೂ ಕಾಯಕದಿಂದಲೆ ತನ್ನ ವೇಷದ ಪಾಶಹರಿವುದು
ಗುರುವಾದಡೂ ಚರಸೇವೆ ಮಾಡಬೇಕು
ಲಿಂಗವಾದಡೂ ಚರಸೇವೆ ಮಾಡಬೇಕು
ಜಂಗಮವಾದಡೂ ಚರಸೇವೆ ಮಾಡಬೇಕು
ಇದು ಚಂದೇಶ್ವರ ಲಿಂಗದ ಅರಿವು ಕೇಳಾಪ್ರಭುವೆ ೧೩

ಎಂದು ನುಲಿಯ ಚಂದಯ್ಯ ನುಡಿಯುತ್ತಾನೆ. ಎಲ್ಲರೂ ಕಾಯಕ ಮಾಡಬೇಕು, ಅದರಿಂದಲೇ ಗಳಿಸಬೇಕು. ಅದನ್ನು ಸಮಾಜ ಸೇವೆಗಾಗಿ ಬಳಸಬೇಕು. ಇದನ್ನೇ ದಾಸೋಹವೆಂದು ಕರೆದರು.

<u>ವರ್ಗವ್ಯವಸ್ಥೆ-ಕೀರ್ತನಾ ಸಾಹಿತ್ಯ:</u>

ವಚನ ಸಾಹಿತ್ಯದಲ್ಲಿ ಬಸವಣ್ಣನವರ ಮೊದಲಾದ ವಚನಕಾರರು ಹೋರಾಟ ನಡೆಸುವುದರ ಮೂಲಕ ವರ್ಗರಹಿತ ಸಮಾಜ ರಚನೆಗೆ ಒಂದೆಡೆ ಪ್ರಯತ್ನಿಸಿದರೆ ಇನ್ನೊಂದೆಡೆ ಕನಕದಾಸರೂ ವರ್ಗ ಸಮಾಜದ ವಿರುದ್ಧ ಬಂಡಾಯ ಧ್ವನಿಯನ್ನು ಎತ್ತಿದ್ದಾರೆ. ವಿದ್ವತ್ತು, ಪ್ರತಿಭೆ, ಅರ್ಹತೆ, ಜಾತಿ, ಶ್ರೀಮಂತಿಕೆ ಮುಂತಾದ ಎಲ್ಲಾ ವಿಚಾರಗಳಲ್ಲಿಯೂ ಮೇಲುವರ್ಗದ ಜನ ಕನಕನನ್ನು ಅವಹೇಳನ – ತಿರಸ್ಕಾರ ಮಾಡಿರಬಹುದು, ಅದರಿಂದ ಕನಕದಾಸರು ಮನನೊಂದು ತಮ್ಮ 'ರಾಮಧಾನ್ಯ ಚರಿತ್ರೆ' ಯಲ್ಲಿ 'ಭತ್ತ-ರಾಗಿ' ಗಳ ಜಗಳದ ಸರಳ ಕಥೆಯನ್ನಾಗಿಸಿ, ಮೇಲ್ವರ್ಗದವರಿಂದ ತುಳಿತಕ್ಕೊಳಗಾದ ಜನತೆಯ ಸಾಮಾಜಿಕ ಧ್ವನಿಯಾಗಿ ನಿರ್ಮಿಸಿರುವ ಹಿನ್ನಲೆಯಲ್ಲಿ ನೋಡಿದಾಗ, ಇಲ್ಲಿ ಕನಕದಾಸರ ಸಾಮಾಜಿಕ ಚಿಂತನೆಯ ಸ್ವರೂಪ ಸ್ಪಷ್ಟಪಡುವಂತೆ ತೋರುತ್ತದೆ.

ಇಲ್ಲಿ ಭತ್ತವು ರಾಗಿಯನ್ನು ಕುರಿತು ಅವಮಾನಿಸಿ ಆಡುವ ಒಂದೊಂದು ಮಾತುಗಳು ಇಂದಿನ ಶ್ರೀಮಂತರ ದರ್ಪದ ವ್ಯಕ್ತಿತ್ವ ಮತ್ತು ಬಡವರನ್ನು ಅವಮಾನಗೊಳಿಸಿ ಮನನೋಯಿಸುವ ಮನೋವೃತ್ತಿಗೆ ಸಾಕ್ಷಿಯೆಂಬಂತಿದೆ. ಭತ್ತದ ಕ್ರೂರನುಡಿಗಳಿಗೆ ತಕ್ಕ ಸಮಯದಲ್ಲಿ ಪ್ರತಿಕ್ರಿಯಿಸುವ ರಾಗಿಯ ಮಾತುಗಳು ಕೆಳವರ್ಗದವರಿಗೆ ಆತ್ಮಸ್ಥೈರ್ಯ ನೀಡುವಂತಿದೆ.

(ಭತ್ತ-ರಾಗಿಯ ವಾಗ್ವಾದದ ಸ್ವರೂಪ)

ಉದಾ: ಭತ್ತ:- ಏನೆಲವೂ ನರೆದಲೆಗ ನೀನು ಸ
ಮಾನನೇ ಯೆನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ, ಹೆಚ್ಚು ಕುಂದುಗಳ
ಜಾನಕಿ ಪತಿಯ ಸ(ನಿ) ಹದಲಿ ಕುಲ
ಹೀನ ನೀನು ಪ್ರತಿಷ್ಠ (ಸುಡು ಮತಿ ಹೀನ
ನೀನೆಂದೆನುತ) ಖತಿಯಲಿ ಬೈದು ಭಂಗಿಸಿದ. ೧೪

ರಾಗಿ:- ಸತ್ಯಹೀನನು ಬಡವರನು ಕಣ್ಣೆತ್ತಿ
ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯ ನೀ (ನಡೆ) ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರೆವೆಂದ ೧೫

ಇದು ತಾವು ಕೆಳವರ್ಗದಲ್ಲಿ ಜನಿಸಿದ ನೋವು – ತುಮುಲವನ್ನು ತೋರುವ ಉದ್ದೇಶವಿದ್ದಂತೆ, ಅವರ ಆತ್ಮಚರಿತ್ರೆಯ ವಿಷಯವನ್ನು ಬಿಂಬಿಸುವಂತಿದೆ. 'ವರ್ಣ-ವರ್ಗ-ಜಾತಿ'. ಮುಂತಾದ ಪರಿಣಾಮಕಾರಿಯಂತಹ ವಿಷಯಗಳನ್ನು ಒಬ್ಬೊಂಟಿಗನಾಗಿ, ಬಹಿರಂಗವಾಗಿ ನೇರ ಬರವಣಿಗೆಯಲ್ಲಿ ಹೇಳುವುದರಿಂದ ಹಲವು ಹತ್ತು ವಿರೋಧಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಕನಕರು ಮೇಲು-ಕೀಳು ವರ್ಗದ ಸಂಘರ್ಷವನ್ನು 'ಭತ್ತ-ರಾಗಿ'ಯ ಸಂಕೇತಗಳ ಮೂಲಕ ಬಲು ಸೂಕ್ಮವಾಗಿ ಮತ್ತು ಜಾಣತನದಿಂದ ಅಭಿವ್ಯಕ್ತಿಸಿದಂತಿದೆ. ಇಲ್ಲಿ ಕೆಳವರ್ಗದವರ ಜಾಗೃತಿ, ಪ್ರತಿಭಟನೆ ಎಲ್ಲವನ್ನು ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ವಿಶ್ಲೇಷಿಸಿದ್ದಾರೆ ಎನ್ನಬಹುದು.

"ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ" ಎಂಬ ಕೀರ್ತನೆಯಲ್ಲಿ ತನ್ನ ಜೀವನೋಪಾಯಕ್ಕೆ ಮನುಷ್ಯರು ಹಲವು ವೇಷಧರಿಸಿರುವ ಸತ್ಯವನ್ನು ಬಯಲು ಮಾಡಿದ್ದಾರೆ. ಪ್ರತಿಯೊಬ್ಬ ತನ್ನ ಏಳಿಗೆಗೆ ತಾನೇ ಶ್ರಮವಹಿಸಿ ದುಡಿಯಬೇಕೆ ವಿನಃ ಅನ್ಯರನ್ನು ತುಳಿದು ತಾನು ಮುಂದೆ ಬರುವುದು ಸರಿಯಾದ ಮಾರ್ಗವೂ ಅಲ್ಲ, ಯಾವ ವ್ಯಕ್ತಿ ಪರಮಾತ್ಮನ ಧ್ಯಾನ-ಭಕ್ತಿಯಿಂದ ಸನ್ಮಾರ್ಗದಲ್ಲಿ ನಡೆದು ಸರ್ವರ ಒಳಿತಿಗಾಗಿ ಶ್ರಮಿಸುವರೋ ಅವರ ಮೇಲೆ ದೇವರ ಒಲುಮೆ ಸಂಪೂರ್ಣವಾಗಿರುತ್ತದೆ ಎಂಬುದು ರಾಗಿಯ ಚಿತ್ರಣದ ಮೂಲಕ ನಮಗೆ ಗೋಚರವಾಗುತ್ತದೆ. ಅದೇ ರೀತಿ ಯಾವ ವ್ಯಕ್ತಿ ತಾನೇ ಮೇಲು, ನನ್ನಿಂದಲೇ ಎಲ್ಲಾ ಎಂಬ ಸ್ವಾರ್ಥ ಮತ್ತು ಒಣಜಂಭದಿಂದ ಮೆರೆಯುತ್ತಾನೋ ಅವನಿಗೆ ಭಗವಂತನ ದಯೆ, ಒಲುಮೆ ದೊರೆಯುವುದು ಸಾಧ್ಯವಿಲ್ಲವೆನ್ನುವುದನ್ನು ತಿಳಿಸಿ ಹೇಳುವಂತಿದೆ. ಹಾಗೆ ಕನಕದಾಸರ ಧ್ಯಾನ, ಭಕ್ತಿ, ನಿಸ್ವಾರ್ಥ ಸೇವೆ, ಸರ್ವೋದ್ಧಾರದ ಹಂಬಲ - ಇವೇ ಮೊದಲಾದ ಆತನ ಗುಣಗಳಿಂದ ಆತನ ಶ್ರೀಕೃಷ್ಣನ ಒಲುಮೆಗೆ ಪಾತ್ರನಾಗಿದ್ದ ಒಬ್ಬ ಶ್ರೇಷ್ಠ ಹರಿಭಕ್ತ ಎಂಬುದು ಹಲವು ಐತಿಹ್ಯಗಳಿಂದ ಸ್ಪಷ್ಟವಾಗುತ್ತದೆ.

(i) ಶ್ರೀ ಜ್ಯೋತಿ ಹೊಸೂರ ಅವರ ಮಾತಿನಲ್ಲಿ ಹೇಳುವುದಾದರೆ, "ವರ್ಗ ಸಂಘರ್ಷವನ್ನು ಪ್ರತಿಪಾದಿಸುವ ವಿಷಯವನ್ನು ಆಯ್ದುಕೊಂಡು ಕಾವ್ಯರಚಿಸಿದ ಇನ್ನೊಬ್ಬ ಕವಿ ಹಳಗನ್ನಡ ಕಾಲದಲ್ಲಂತೂ ನಮಗೆ ಸಿಗುವುದಿಲ್ಲ."(೧೬)

(ii) ಕಾ.ತ.ಚಿಕ್ಕಣ್ಣ - "ಈ ಸಮಾಜಕ್ಕಾಗಿ ಸಮಾಜ ನಿರ್ಮಿತ ಅಸಮಾನತೆಗಳ ನಿರ್ಮೂಲನಕ್ಕಾಗಿ ಮಾನವ ಧರ್ಮದ ಶ್ರೇಷ್ಠತೆಗಾಗಿ ಸಹಜವಾಗಿ ಸ್ಪಂದಿಸಿದ ಕೀರ್ತನಕಾರ, ಕವಿ" - ಅವರು.(೧೭)

(iii) ಡಾ॥ ಎಂ. ಚಿದಾನಂದ ಮೂರ್ತಿ: "ಕನಕದಾಸ ಮೇಲ್ವರ್ಗದ ಜನ ತನ್ನನ್ನು ಒಪ್ಪಿಕೊಳ್ಳುವ ಮುನ್ನ ಅವರಿಂದ ತಿರಸ್ಕಾರ ಅವಹೇಳನಗಳನ್ನು ಅನುಭವಿಸಿದನೆಂಬಲ್ಲಿ ಅನುಮಾನ ಕಾಣದು, ಅವನ ಜಾತಿ ಪೆಡಂಭೂತದಂತೆ ಅವನ ಜೀವನದುದ್ದಕ್ಕೂ ಕಾಡಿದ್ದರೆ ಆಶ್ಚರ್ಯವಿಲ್ಲ. ಈ ಹಿನ್ನಲೆಯಲ್ಲಿ ಅವನ ರಾಮಧಾನ್ಯ ಚರಿತ್ರೆ ಕೃತಿಯ ವಸ್ತು ಬಹು ಅರ್ಥಪೂರ್ಣವಾಗಿ ತೋರುತ್ತದೆ" (೧೮)

<u>ಭಾಷೆ :-</u>

ಕ್ರಿ.ಶ. ೧೦ನೇ ಶತಮಾನದಲ್ಲಿ ಧಾರ್ಮಿಕ ಮತ್ತು ಲೌಕಿಕ ಕಾವ್ಯಧೋರಣೆಯನ್ನಿಟ್ಟುಕೊಂಡು ಸಂಸ್ಕೃತ ಭಾಷೆಯ ಪ್ರಭಾವದಿಂದ ಮಾರ್ಗ ಸಾಹಿತ್ಯದಲ್ಲಿ ಕಾವ್ಯರಚಿಸುತ್ತಿದ್ದರು. ಇದು ಕೇವಲ ಪಂಡಿತರ ಭಾಷೆಯಾಗಿದ್ದರಿಂದ ಜನಸಾಮಾನ್ಯರನ್ನು ತಲುಪುತ್ತಿರಲಿಲ್ಲ. ಸಂಸ್ಕೃತ ದೇವಭಾಷೆಯೆಂದು ಪರಿಗಣಿತವಾಗಿದ್ದರಿಂದ ಅದರಲ್ಲಿ ಕಾವ್ಯರಚಿಸುವವರು ಮಾತ್ರ ಮೋಕ್ಷಕ್ಕೆ ಪ್ರಾಪ್ತರಾಗುತ್ತಾರೆ ಎಂಬ ನಂಬಿಕೆ ಬಲವಾಗಿದ್ದಿತು. ಆದರೆ ಕ್ರಿ.ಶ. ೧೨ನೇ ಶತಮಾನದ ವಚನ ಸಾಹಿತ್ಯದಲ್ಲಿ ಜನಸಾಮಾನ್ಯರ ಭಾಷೆ-ಕನ್ನಡ – ದೇಸೀಯತೆಗೆ ಒತ್ತುಕೊಟ್ಟು, ಕನ್ನಡ ಚಂಪೂ ಸಾಹಿತ್ಯದಲ್ಲಿ ಅದೂವರೆಗೂ ಬೆಳೆದು ಬಂದಿದ್ದ ಧಾರ್ಮಿಕ, ಲೌಕಿಕವೆಂಬ ಕಾವ್ಯಧೋರಣೆಯನ್ನು ಕೈಬಿಟ್ಟು, ಭಕ್ತಿ-ಜ್ಞಾನ, ಶೋಷಣೆರಹಿತ ಬದುಕು, ಸಮಾನತೆ, ನೀತಿ ಪ್ರಧಾನವೇ ಮೊದಲಾದ ಮೌಲ್ಯಗಳನ್ನು ಮತ್ತು ತನ್ನ ದೈನಂದಿನ ಅನುಭವ ಅನಿಸಿಕೆಗಳ ಅಭಿವ್ಯಕ್ತಿಗಾಗಿ 'ವಚನ' ವನ್ನು ಸಮರ್ಥ ಮಾಧ್ಯಮವನ್ನಾಗಿ ಬಳಸಿಕೊಂಡರು. ಈ ಮೂಲಕ ಭಾಷಿಕ ಕ್ರಾಂತಿಯನ್ನು ನಡೆಸ ಹೊರಟ ಪ್ರಥಮ ಕಾವ್ಯಪಂಥದವರು. ಇದಕ್ಕೆ ಅಡ್ಡಿಯಾಗಿದ್ದ ರಾಜಾಶ್ರಯ ತೊರೆದು, ಕಾಯಕವೇ ಕೈಲಾಸವೆಂಬಂತೆ ಸ್ವಂತ ದುಡಿಯಮೆಯನ್ನು ನೆಚ್ಚಿ ನಂಬಿದ್ದ ವರ್ಗದವರು.

ಇದೇ ರೀತಿಯ ಆಂದೋಲನ ಮನೋಭಾವವನ್ನು ಕ್ರಿ.ಶ.೧೬ನೇ ಶತಮಾನದ ಕೀರ್ತನಾ ಸಾಹಿತ್ಯ ಪಂಥದಲ್ಲಿ ಕಾಣುವಂತಿದ್ದರೂ ಅವರಲ್ಲಿ ಮೇಲ್ಜಾತಿ-ಕೆಳಜಾತಿ ಎನ್ನುವ ಒಡಕು ಮನಸ್ಸಿನಿಂದ ಒಂದೇ ರೀತಿಯ ಧೋರಣೆ ಕಾಣುವುದು ಕಷ್ಟಕರವಾಯಿತು. ಏಕೆಂದರೆ ಅಲ್ಲಿನ ಪಂಡಿತವರ್ಗವೆಲ್ಲ ಸಂಸ್ಕೃತ ಕಾವ್ಯಗಳನ್ನೇ ಮೆಚ್ಚಿ, ಅವುಗಳ ಅಧ್ಯಯನದಲ್ಲೇ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು, ಅವುಗಳನ್ನೇ ಪಾಠ ಪ್ರವಚನಗಳನ್ನೇ ಹೇಳಿಕೊಡುತ್ತಿದ್ದರು. ಇವರು ಕನ್ನಡವನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಆದರೆ ಇವರಿಗೆ ವ್ಯತಿರಿಕ್ತವೆನ್ನುವಂತಿದ್ದ ವ್ಯಾಸರಾಯರು ಸಂಸ್ಕೃತ, ಕನ್ನಡ-ಎರಡೂ ಭಾಷೆಗಳಲ್ಲಿ ಗ್ರಂಥರಚನೆ ಮಾಡಿದ್ದರು. 'ನ್ಯಾಯಾಮೃತ, ತರ್ಕತಾಂಡವ, ತಾತ್ಪರ್ಯ ಚಂದ್ರಿಕಾ-ಮುಂತಾದ ಜಟಿಲ ಗ್ರಂಥಗಳನ್ನು ಸಂಸ್ಕೃತದಲ್ಲಿ

ರಚಿಸಿರುವ ವ್ಯಾಸರಾಯರು ವೇದ ವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರವನ್ನು ತಿಳಿಗನ್ನಡದಲ್ಲಿ ಸಾಮಾನ್ಯನಿಗೂ ಅರ್ಥವಾಗುವಂತೆ ವಿವರಿಸಲು ಪ್ರಯತ್ನಿಸುವ ಅವರ ಸಾಹಸ ಪ್ರವೃತ್ತಿಯಲ್ಲಿ ಬಹುಜನ ಸುಖವನ್ನು ಕುರಿತಾದ ಕಳಕಳಿಯನ್ನು ತೋರಿಸುತ್ತದೆ." ೧೯

ವ್ಯಾಸರಾಯರು ಪಾಂಡಿತ್ಯ-ಭಕ್ತಿಗಳ ನಡುವಣ ಸಮನ್ವಯಕ್ಕಾಗಿ ಶ್ರಮಿಸಿದರು. ಅವರ ಶಿಷ್ಯವರ್ಗದಲ್ಲಿ ವಿಜಯೀಂದ್ರ ತೀರ್ಥರು, ಗೋವಿಂದ ಒಡೆಯರು, ನಾರಾಯಣಯತಿಗಳು ಪ್ರಚಂಡ ಪಂಡಿತವರ್ಗವಿದ್ದಂತೆ, ಪುರುಂದರದಾಸರು, ಕನಕದಾಸರು, ವೈಕುಂಠದಾಸರೇ ಮೊದಲಾದವರೂ ಇದ್ದರು. ವ್ಯಾಸಕೂಟ ಮತ್ತು ದಾಸಕೂಟ ಎಂಬ ಎರಡು ಗುಂಪುಗಳು ಇದ್ದಿತು ಎಂಬುದು ಐತಿಹ್ಯ. ವ್ಯಾಸರಾಯರ ಮಠದಲ್ಲಿ ಸಂಸ್ಕೃತವನ್ನಾಡುತ್ತಿದ್ದ ಮಡಿವಂತರ ವರ್ಗ – ಅದು ವ್ಯಾಸಕೂಟ, ಕನ್ನಡವನ್ನಾಡುತ್ತಿದ್ದ ಸಾಮಾನ್ಯ ವರ್ಗವೇ ದಾಸಕೂಟ. ಆರಂಭದಲ್ಲಿ ಈ ಎರಡೂ ಗುಂಪುಗಳು ಪರಸ್ಪರ ಕಲೆತು ಜ್ಞಾನ ಮತ್ತು ಭಕ್ತಿಯನ್ನು ಅವುಗಳ ಅರ್ಥಮಹತ್ವವನ್ನು ವಿನಿಮಯ ಮಾಡಿಕೊಂಡು ಪ್ರಜ್ಞಾವಂತರಾಗಲು ಅನುವು ಮಾಡಿಕೊಟ್ಟಿತು. ಆದರೆ ಕ್ರಮೇಣ ಪಂಡಿತರು ಕನಕದಾಸರ ಕನ್ನಡ ಕಾವ್ಯ, ಕೀರ್ತನೆಗಳ ಬಗ್ಗೆ ಸಿಡಿಮಿಡಿಗೊಂಡು, ವ್ಯಾಸರಾಯರ ಆಶ್ರಮದಲ್ಲಿ ಈಗ ಇರಕೂಡದೆಂದು ಈತನನ್ನು ಹೊರಹಾಕುವ ಪ್ರಯತ್ನ ಮಾಡುತ್ತಿದ್ದರು ಎಂಬದು ನಮಗೆ ಹಲವು ಮೂಲಗಳಿಂದ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಾಗಲೇ ಸಂಸ್ಕೃತ ಮೃತಭಾಷೆಯಾಗಿದ್ದು, ಕನ್ನಡವು ಜನಸಾಮಾನ್ಯರ ಜೀವಂತ ಭಾಷೆಯಾಗಿತ್ತು. ಮೃತಭಾಷೆಯೇ ಶ್ರೇಷ್ಠ, ಅದು ಪಂಡಿತರ ಭಾಷೆ, ಕನ್ನಡ ಕನಿಷ್ಠ ಎಂದು ವ್ಯಾಸಕೂಟ ಮತ್ತು ದಾಸಕೂಟದ ನಡುವೆ ವಾಗ್ವಾದ ಉಂಟಾಗಿದ್ದಿರಬೇಕು. ಇದರಿಂದ ಮನನೊಂದು, ಕನಕದಾಸರು 'ರಾಮಧಾನ್ಯ ಚರಿತ್ರೆ' ಯಲ್ಲಿ 'ಅಕ್ಕಿ-ರಾಗಿ' ಜಗಳದ ಹಿನ್ನಲೆಯಲ್ಲಿ 'ಸಂಸ್ಕೃತ-ಕನ್ನಡ' ಭಾಷೆಗಳನ್ನು ಸಂಕೇತವನ್ನಾಗಿಟ್ಟು ನೋಡುವುದಾದರೆ ಕೊನೆಯಲ್ಲಿ ರಾಗಿಯ ವಿಜಯ ಧ್ವಜದ ಹಿನ್ನಲೆಯಲ್ಲಿ ಕನ್ನಡದ ವಿಜಯ ಪತಾಕೆಯೂ ಹಾರುವಂತಾಯಿತು. ಏಕೆಂದರೆ ಕನ್ನಡ, ಅಂದಿನ ಎಲ್ಲಾ ಜನಸಾಮಾನ್ಯರ ಭಾಷೆಯಾಗಿತ್ತು. ಆ ಭಾಷೆಯ ಮೂಲಕ ಮೌಲ್ಯಯುತವಾದ ಯಾವುದೇ ವಿಚಾರ, ಭೋದನೆ ಮಾಡಿದರೂ ಅವರಿಗೆ ಗ್ರಹಿಸಲು

ಸಾಧ್ಯವಾಗುತ್ತಿತ್ತು. 'ರಾಗಿ' ಹೇಗೆ ಬಡವರ ಬಂಧು, ಪ್ರೀತಿಗೆ ಪಾತ್ರವಾದ ಧಾನ್ಯವೋ ಹಾಗೆ 'ಕನ್ನಡ'ವೂ ಜನಸಾಮಾನ್ಯರ ಪ್ರೀತಿಯ ಭಾಷೆಯಾಗಿತ್ತು. ಈ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೇನೆಂದರೆ ಕನಕದಾಸರಿಗೆ ಭಾಷೆ ಜಗಳ ಬೇಕಿರಲಿಲ್ಲ. ಆದರೆ ಪಂಡಿತರು ತಮ್ಮ ಸಂಸ್ಕೃತವನ್ನು ಮುಂದಿಟ್ಟುಕೊಂಡು ಅದೇ ನಿಜವಾದ ಸತ್ವಯುತವಾದ ಭಾಷೆ ಎಂದು ಹೆಮ್ಮೆಯಿಂದ ಬೀಗುವುದರ ಜೊತೆಗೆ ಕನಕದಾಸರ ಕನ್ನಡ ಪಾಂಡಿತ್ಯವನ್ನು ಕುರಿತು ಛೇಡಿಸಿರಬಹುದು. ಅದಕ್ಕೆ ಸೂಕ್ತ ಉತ್ತರವೆಂಬಂತೆ 'ರಾಮಧಾನ್ಯ ಚರಿತ್ರೆ' ಯಲ್ಲಿ ನೀಡಿದ್ದಾರೆ. ಈ ಊಹೆಗೆ ಆಧಾರವೆಂಬಂತೆ ಕಾವ್ಯದಲ್ಲಿ ಕೆಲವು ಸುಳಿವುಗಳು ಪುಷ್ಟಿನೀಡುವಂತಿದೆ.

ಗೌತಮ ಹೇಳುವ " ದಾಶರಥಿ ಚಿತ್ತೈಸು ನಮ್ಮಯ ದೇಶಕತಿಶಯ ನರೆದಲೆಗನೇ ವಾಸಿ" ಎಂಬ ಮಾತುಗಳಲ್ಲಿ ರಾಗಿಯನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಬಳಸುವಂತೆ ಕನ್ನಡವನ್ನು ನಾಡಿನಾದ್ಯಂತ ಎಲ್ಲರೂ ಬಳಸುತ್ತಾರೆ. ಆದರೆ ಸಂಸ್ಕೃತ ಯಾರ ಮಾತೃಭಾಷೆಯೂ ಆಗಿಲ್ಲ, ದಿನನಿತ್ಯದ ಸಾಮಾಜಿಕ ವ್ಯವಹಾರಕ್ಕೆ ಎಲ್ಲೂ ಬಳಸುವುದಿಲ್ಲ. ಅದು ಕೇವಲ ಗ್ರಂಥಸ್ಥ ಭಾಷೆಯಾಗಿ ಉಳಿದುಕೊಂಡಿದೆ. ಆದ್ದರಿಂದ ಕನ್ನಡವೇ ಶ್ರೇಷ್ಠ ಎಂಬ ಒಳದನಿ ಮೂಡಿ ಬಂದಿದೆ. "ಲೋಕದಲಧಿಕ ಭೋಜನವಿದೆಂದಾಕೆವಾಳರು ಬುಧರು ಜರೆದು ನಿರಾಕರಿಸಿ ಬಿಡಲಂತು ನೀ ಶೂದ್ರಾನ್ನವಾದೆಯಲ".. ಎಂದು ನುಡಿಯುವ ಭತ್ತವು, ವಿದ್ವಾಂಸರು-ಪಂಡಿತರು ಸಂಸ್ಕೃತವನ್ನೇ ಶ್ರೇಷ್ಠವೆಂದು ಒಪ್ಪಿಕೊಂಡು, ಕನ್ನಡವನ್ನು ಶೂದ್ರರಾಡುವ ಭಾಷೆ ಎಂಬ ಅಣುಕು ಮಾತನ್ನಾಡಿತು. "ನೆಲ್ಲು ನಾನಿರೆ ಗೋಧಿ ಮೊದಲಾದ ಎಲ್ಲಾ ಧಾನ್ಯಗಳಿರಲು ಇದರಲಿ ಬಲ್ಲಿದನು ನರೆದೆಲಗನೆಂಬುದಿದಾವ ಮತವೆಂದ" - ಎಂಬ ಭತ್ತದ ನುಡಿಗಳಲ್ಲಿ ಸಂಸ್ಕೃತವನ್ನು ಬಲ್ಲ ಪ್ರಮುಖ ವಿದ್ವಾಂಸರ ಎದುರು ಬಡ ಕನ್ನಡ ಕವಿಗಳಿಗೆ ಸ್ಥಾನವೂ ಇಲ್ಲ, ಕೆಲಸವೂ ಇಲ್ಲ, ಹೊರನಡೆಯಬೇಕೆಂಬ ಮುನ್ಸೂಚನೆಯನ್ನು ಸೂಚಿಸುವಂತಿದೆ. ಇದಕ್ಕೆ ಉತ್ತರವೆಂಬಂತೆ ರಾಗಿಯು, "ಕಡು ಜಡನಲಾ, ಸತ್ತವರ ಪ್ರತಿಬಿಂಬ ರೂಪನು" ಎಂಬಲ್ಲಿ, ಜಡ-ಸತ್ತವರ ಪ್ರತಿಬಿಂಬ - ಎಂಬ ಶಬ್ದಗಳ ನಿಶ್ಚೇತನ ಅಥವಾ ಪ್ರಸ್ತುತದಲ್ಲಿ ಬಳಕೆಯಲ್ಲಿಲ್ಲದ ಸಂಸ್ಕೃತವನ್ನು ತಿಳಿಸಿ ಹೇಳುವಂತಿದೆ. ಕಡೆಯಲ್ಲಿ ರಾಮನು ರಾಗಿಗೆ ರಾಘವ ಎಂಬ ಬಿರುದನ್ನಿತ್ತು, ರಾಗಿಯು ವಿಜಯ ಸಂಭ್ರಮದಲ್ಲಿರುವಾಗ, ಭತ್ತವನ್ನು ಕರೆದು "ದೀನರಲಿ

ದರಿದ್ರ ಜನರಲಿ ನೀನು ನಿರ್ದಯನೆಂದೆನಲ್ಲದೆ ಹೀನಗಳೆದವನಲ್ಲನೀ ಸುರಧೇನುವಿನ ಸಮ" ವೆಂಬ ಮಾತುಗಳಲ್ಲಿ ಸಂಸ್ಕೃತ ಕೇವಲ ಪಂಡಿತರ ಬೆನ್ನುಹಿಡಿದು ಹೋಗುತ್ತಿತ್ತೇ ಹೊರತು, ಕೀಳು, ಬಡವ ವರ್ಗವನ್ನು ಕಣ್ಣೆತ್ತಿಯೂ ನೋಡಲಿಲ್ಲ ಅಂದರೆ ಅವರು ಬಳಸುವಂತಿರಲಿಲ್ಲ. ಆದರೆ 'ಸುರಧೇನು' ಎಂಬಂತೆ ಕನ್ನಡವೂ ಎಲ್ಲರ ಪ್ರೀತಿಯುತವಾದ ಭಾಷೆಯಾಗಿತ್ತು.

ಭತ್ತ ಬೆಳೆದು ನಿಂತಾಗ ತಲೆ ಬಾಗಿಸಿಕೊಂಡಿದ್ದರೆ, ರಾಗಿಯ ತೆನೆ ಹಾಗಲ್ಲ, ತಲೆ ಎತ್ತಿ ಮೆರೆಯುತ್ತದೆ. ಅದು ಮೃತಭಾಷೆಯ ಸಿಗ್ಗು, ಇದು ಜೀವಂತ ಭಾಷೆಯ ಹಿಗ್ಗು ಎಂಬಂಶವೂ ಧ್ವನಿತವಾಗುತ್ತದೆ. ಭತ್ತಕ್ಕೆ ಕೊಟ್ಟಿರುವ 'ವ್ರೀಹಿ' ಮತ್ತು ರಾಗಿಗೆ ಕೊಟ್ಟಿರುವ 'ನರೆದಲೆಗ' ಎಂಬ ಹೆಸರು ಕ್ರಮವಾಗಿ ಸಂಸ್ಕೃತ ಮತ್ತು ಕನ್ನಡ ಭಾಷೆಯ ಪದಗಳಾಗಿವೆ. ಇಲ್ಲಿ ಡಾ॥ಸಾ.ಶಿ.ಮರುಳಯ್ಯ ನವರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.೨೦ (ಆಧಾರ).

ನಮ್ಮ ಕನ್ನಡ ಸಾಹಿತ್ಯದ ಕುವೆಂಪು, ಪಂಜೆಮಂಗೇಶರಾಯರು, ಬೇಂದ್ರೆ ಮೊದಲಾದವರಂತೆ 'ಕನಕದಾಸರೂ' ಓರ್ವ ಸರ್ವಶ್ರೇಷ್ಠ ಸಾಹಿತಿಯೂ ಹೌದು, ಕನ್ನಡದ ಅಭಿಮಾನಿಯೂ ಹೌದು ಎಂಬುದಲ್ಲಿ ಎರಡು ಮಾತಿಲ್ಲ. ಏಕೆಂದರೆ ಯಾವ ವ್ಯಕ್ತಿಯೇ ಆಗಲಿ ತಾಯಿ ನೆಲ, ಜಲ ಮತ್ತು ಭಾಷೆಗೆ ಪರರಿಂದ ಅವಮಾನವಾಗುತ್ತಿದಾಗ ಅದನ್ನು ಸಮರ್ಥವಾಗಿ, ಚಾಣಾಕ್ಷತನದಿಂದ ಪ್ರತಿಭಟಿಸಿ, ಅದಕ್ಕೆ ಸರಿಯಾದ ಗೌರವ–ಸ್ಥಾನಮಾನವನ್ನು ತಂದುಕೊಡುವವನೆ ನಿಜವಾದ ಧೀರ ಅಥವಾ ಅಭಿಮಾನಿಯಾಗುತ್ತಾನೆ. ಇಲ್ಲದಿದ್ದರೆ ಅವನು ಹೇಡಿ ಎನ್ನಸಿಕೊಳ್ಳುತ್ತಾನೆ. ಯಾವುದೇ ಭಾಷೆಯಾಗಲೀ ಅದಕ್ಕೆ ಅದರದ್ದೇ ಆದ ದೀರ್ಘ ಇತಿಹಾಸ, ಪರಂಪರೆ ಇರುತ್ತದೆ. ಅದನ್ನೆಲ್ಲಾ ಕಡೆಗಣಿಸಿ ಕೇವಲ ವೈಯಕ್ತಿಕ ಹಿತದೃಷ್ಟಿಯಿಂದ ತಾವು ತಿಳಿದಿರುವ ಭಾಷೆಯೆ ಶ್ರೇಷ್ಠ ಉಳಿದದ್ದೆಲ್ಲಾ ಕನಿಷ್ಠ ಎಂಬ ವಾದದಲ್ಲಿ ತಿರುಳಿಲ್ಲವೆಂಬ ಸತ್ಯವೂ ಇದರಿಂದ ನಮಗೆ ಬಹುಚೆನ್ನಾಗಿ ತಿಳಿಯುತ್ತದೆ. ಹೀಗೆ ಕನಕದಾಸರ ಶೈಲಿಯ ಬಗ್ಗೆ ಬರೆಯುತ್ತ ಪ್ರೊ॥ ಎಸ್.ವಿ.ರಂಗಣ್ಣ ನವರು, "ಕವಿಕನಕದಾಸ ನಿರಹಂಕಾರಿ, ನಯಶೀಲ; ಆದರೆ ಆರ್ತನಲ್ಲ, ಅಂಜುಗಳಿಯಲ್ಲ ಬಗ್ಗಿ ಕುಗ್ಗುವಾತನಲ್ಲ, ನೆಲದತ್ತ ಕುಸಿದು ಬೀಳುವವನಲ್ಲ" ೨೧ ಎಂಬ ಮಾತು ಕನಕದಾಸರು ಅಂದಿನ ಸಮಾಜದಲ್ಲಿ ತಮ್ಮ ಅಂತಃಸತ್ವದ ಬಲದಿಂದ ಎದ್ದು ನಿಂತ ಬಗೆಯನ್ನು ಮನದಟ್ಟು ಮಾಡುತ್ತದೆ.

ಅಡಿ ಟಿಪ್ಪಣಿಗಳು

೧. ಶ್ರೀ ಕನಕದಾಸರು : ಕೊರಟಿ ಶ್ರೀನಿವಾಸರಾವ್, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೯೨. ಪು.ಸಂ. ೨೦೦, ೨೦೧

೨. ವಚನಾನುಶೀಲನ : ಡಾ॥ ಎಸ್. ವಿದ್ಯಾಶಂಕರ್, ಸ್ನೇಹ ಪ್ರಕಾಶನ ಬೆಂಗಳೂರು ೧೯೮೯ (ಪು.ಸಂ.೨೪೨).

೩. ಸಮಗ್ರ ದಾಸ ಸಾಹಿತ್ಯ (ಕನಕದಾಸರ ಕೀರ್ತನೆಗಳು ಭಾಗ-೨) : ಸಂ.ಪ್ರೊ॥ ಸುಧಾಕರ್, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್.

೪. ಬಸವಣ್ಣನವರ ವಚನ ಸಂಪುಟ-೧ : ಸಂ.ಡಾ॥ ಎಂ.ಎಂ.ಕಲಬುರ್ಗಿ, ಬೆಂಗಳೂರು, ೧೯೯೩.

೫. ಬಸವಣ್ಣನವರ ವಚನ ಸಂಪುಟ-೧ : ಸಂ.ಡಾ॥ ಎಂ.ಎಂ.ಕಲಬುರ್ಗಿ, ಬೆಂಗಳೂರು, ೧೯೯೩.

೬. ಬಸವಣ್ಣನವರ ವಚನ ಸಂಪುಟ-೧ : ಸಂ.ಡಾ॥ ಎಂ.ಎಂ.ಕಲಬುರ್ಗಿ, ಬೆಂಗಳೂರು, ೧೯೯೩.

೭. ಚನ್ನಬಸವಣ್ಣನವರ ವಚನಗಳು : ಡಾ:: ಆರ್. ಸಿ. ಹಿರೇಮಠ್, ಕರ್ನಾಟಕ ವಿಶ್ವವಿದ್ಯಾಲಯ ೧೯೬೫.

೮. ಬಸವಪುರಾಣ : ಡಾ॥ ಆರ್.ಸಿ. ಹಿರೇಮಠ, ಪ್ರಕಾಶಕರು, ಶ್ರೀಮುರುಘಾ ಮಠ ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿ, ಧಾರವಾಡ, ೧೯೭೧.

೯. ಚನ್ನಬಸವಣ್ಣನವರ ವಚನಗಳು: ಡಾ॥ ಆರ್.ಸಿ.ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೫.

೧೦. ಸರ್ವಜ್ಞನ ವಚನಗಳು : ಸಂ.ಚನ್ನಪ್ಪ ಉತ್ತಂಗಿ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೫. ಪು.ಸಂ.೧೨೨, ಪದ್ಯಸಂ. ೬೭೮.

೧೧. ಸರ್ವಜ್ಞನ ವಚನಗಳು : ಸಂ.ಚನ್ನಪ್ಪ ಉತ್ತಂಗಿ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೫. ಪು.ಸಂ.೧೨೨, ಪದ್ಯ ಸಂಖ್ಯೆ ೬೭೬

೧೨. ಸರ್ವಜ್ಞನ ವಚನಗಳು : ಸಂ.ಚನ್ನಪ್ಪ ಉತ್ತಂಗಿ, ಕರ್ನಾಟಕ ವಿಶ್ವವಿದ್ಯಾಲಯ, ೧೯೭೫. ಪು.ಸಂ.೧೨೨, ಪದ್ಯ ಸಂ.೬೭೨

೧೩. ವಚನ ಸಾಹಿತ್ಯ ಸಂಗ್ರಹ : ಎಸ್.ಎಸ್.ಭೂಸನೂರ ಮಠ, ಬೆಳಗಾವಿ, ೧೯೯೪.

೧೪. ರಾಮಧಾನ್ಯ ಚರಿತ್ರೆ : ಸಂ. ದೇ.ಜ.ಗೌ., ಶ್ರೀ ಕನಕದಾಸ, ೪ನೇ ಶತಮಾನೋತ್ಸವ ರಾಜ್ಯ ಸಮಿತಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಕೇಷನ್ಸ್, ಮೈಸೂರು, ಪು.ಸಂ.೨೪, ಪದ್ಯ ಸಂ.೨೬.

೧೫. ರಾಮಧಾನ್ಯ ಚರಿತ್ರೆ : ಸಂ. ದೇ.ಜ.ಗೌ., ಶ್ರೀ ಕನಕದಾಸ, ೪ನೇ ಶತಮಾನೋತ್ಸವ ರಾಜ್ಯ ಸಮಿತಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಕೇಷನ್ಸ್, ಮೈಸೂರು, ಪು.ಸಂ.೨೬, ೨೭, ಪದ್ಯ ಸಂ.೪೫.

೧೬. ಕನಕದಾಸ ಜೀವನ ವಿಚಾರ: ಜ್ಯೋತಿ ಹೊಸೂರ, ಬೆಳಗಾವಿ, ೧೯೮೩, ಪು.ಸಂ.೧೯.

೧೭. ಕನಕಕಿರಣ : ಸಂ.ಕಾ.ತ.ಚಿಕ್ಕಣ್ಣ, ಕಾಳಿದಾಸ ಸಾಂಸ್ಕೃತಿಕ ಸಂಘ, ಬೆಂಗಳೂರು ೧೯೮೨, ಸಂಪಾದಕನ ಮಾತು.

೧೮. ಕನಕ ಸಾಹಿತ್ಯ ದರ್ಶನ : ಡಾ॥ ದೇ.ಜವರೇಗೌಡ, ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು ೧೯೯೦, ಪು.ಸಂ.೬೫೫.

೧೯. ದಾಸ ಸಾಹಿತ್ಯ ದರ್ಶನ - ಸಂ.ಎಚ್ಚೆಸ್ಕೆ, ಮಂಗಳಭಾರತಿ ಪ್ರಕಾಶನ, ಬೆಂಗಳೂರು.

(ಅ) ಹರಿದಾಸ ಆಂದೋಲನ ಒಂದು ಅಧ್ಯಯನ - ಡಾ॥ ಎನ್.ಕೆ. ರಾಮಶೇಷನ್, ಮಿತ್ರ ಪ್ರಿಂಟರ್ಸ್, ಮೈಸೂರು, ೧೯೯೧.

೨೦) ಕನಕ ಸಾಹಿತ್ಯ ದರ್ಶನ ಸಂಪುಟ-೨ : ಸಂ. ಡಾ॥ ಸಾ.ಶಿ. ಮರುಳಯ್ಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೧, ಪ್ರಸ್ತಾವನೆ XI

೨೧. ಕನಕ ದರ್ಶನ : ದೇಜಗೌ, ತನು ಮನು ಪ್ರಕಾಶನ, ಮೈಸೂರು-೨೦೦೨.

ಅಧ್ಯಾಯ – ೪

ಕಾವ್ಯೋದ್ದೇಶ

ವಿಷಯದ ವಿನೂತನತೆಯಿಂದ ಕೂಡಿದ, ಚಾತುರ್ಯದಿಂದ ಹೆಣೆದ ರಾಗಿ – ಭತ್ತಗಳ ಸಂಭಾಷಣೆಯ ರೂಪದ "ರಾಮ ಧಾನ್ಯ ಚರಿತ್ರೆ" ಯನ್ನು ಜನಪದೀಯ ನೆಲೆಯಿಂದ, ಬಂಡಾಯ ಧ್ವನಿಯಾಗಿ ಮತ್ತು ಪೌರಾಣಿಕ ಹಿನ್ನಲೆಯಿಂದ ನೋಡುವ ಮೂಲಕ ಕಾವ್ಯೋದ್ದೇಶವನ್ನು ವಿವಿಧ ನೆಲೆಗಳಿಂದ ತಿಳಿಸುವ ಕಿರುಪ್ರಯತ್ನ ಇದಾಗಿದೆ.

ರಾಮಧಾನ್ಯ ಚರಿತ್ರೆಯ ಅಸ್ತಿತ್ವ ಅಡಗಿರುವುದು, ಅದರಲ್ಲಿ ಎದ್ದು ಕಾಣುವ 'ಭತ್ತ – ರಾಗಿ' ಯ ನಡುವಿನ ಸಂಭಾಷಣೆಯ ಶ್ರೀಮಂತಿಕೆಯಲ್ಲಿದೆ. ಇಲ್ಲಿ ಅವರ ಗ್ರಾಮೀಣ ಸೊಗಡು ತುಂಬಿದ ಭಾಷೆ, ಅವರ ವಸ್ತುವಿನ್ಯಾಸದ ವೈಶಿಷ್ಟ್ಯತೆಗೆ ಸಮಸ್ಪರ್ಧಿಯಾಗಿ ನಿಂತಿದೆ ಎನ್ನಬಹುದು. ಈ ಕೃತಿಯು ನಾಟಕೀಯ ಶೈಲಿಗೆ ಒಂದು ಒಳ್ಳೆಯ ಉದಾಹರಣೆಯಾಗಿದೆ.

ಉದಾ: ಭತ್ತ : ಪರಿಮಳದ ಚಂದನದ ತರುವಿಗೆ
ಸರಿಯೆವೊಣಗಿದ ಕಾಷ್ಟಗೋವದು
ಕರೆದ ಹಾಲಿಗೆ ಕುರಿಯ ಹಾಲು ತರವೆ ಭಾವಿಸಲು
ಪರಮ ಸಾಹಸಿ ವೀರ ಹನುಮಗೆ
ಮರದ ಮೇಲಣಕಪಿಯು ತಾನು
ತರವೆ ಘಡನೀನೆನಗೆ ಸರಿಯೆ; [ಭ್ರಷ್ಟ ತೊಲಗೆಂದ] ೧

ರಾಗಿ : ಸತ್ತವರ ಪ್ರತಿಬಿಂಬರೂಪನು
[ಬಿತ್ತ]ರಿಸಿ ಪಿತೃನಾಮಗಳ ನಿನ
ಗಿತ್ತು ಮೂವರ ಪೆಸರಿನಲಿ ಕರೆಕರೆದು ದರ್ಭೆಯಲಿ
ನೆತ್ತಿಯನು ಬಡಿ ಬಡಿದು ಕಡೆಯಲಿ
ತುತ್ತನಡುವರು ಪಶುಗಳಿಗೆ ನೀ
ನೆತ್ತಿದೆಯಲೂ ತಮವ ಸುಡಬೇಕೆಂದ ನರೆದಲಗ ! ೨

ಹೀಗೆ ಅಕ್ಕಿ – ರಾಗಿ ಜಗಳದ ನೆಪದಲ್ಲಿ ಕನಕದಾಸರು ಆ ಕಾಲದ ಜನಾಂಗದವರ ನಡುವೆ ಇದ್ದ ತಾರತಮ್ಯ, ದ್ವೇಷ, ಅಸೂಯೆ ಮುಂತಾದ ಸಂಗತಿಗಳನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ಹುಟ್ಟು, ಸಾವಿನ ಆಚರಣೆಯ ವಿಧಿವಿಧಾನಗಳು, ಮದುವೆ – ಮುಂಜಿ, ಮಳೆ ಬೆಳೆ, ಬಡವ – ಶ್ರೀಮಂತ ರಾಜರ ಆಹಾರ ಸ್ವರೂಪ ಇವೇ ಮೊದಲಾದ ಸಾಮಾಜಿಕ ಸಂಗತಿಗಳ ಕಡೆಗೂ ಬೆಳಕು ಚೆಲ್ಲುವಂತಿದೆ.

ಜಾನಪದ :

ಜಾನಪದ ಸಾಹಿತ್ಯ ಸಾಮಾನ್ಯರ, ನಿರಕ್ಷಕ ಕುಕ್ಷಿಗಳ ಗ್ರಾಮೀಣರ ಅಭಿವ್ಯಕ್ತಿ. ಇದೊಂದು ಸೃಜನಶೀಲ ಕ್ರಿಯೆ, ಈ ಜನರು ತಾವು ಕಂಡ ಪ್ರೀತಿ – ಪ್ರೇಮ, ನೋವು – ನಲಿವು, ಸುಖ – ಸಂತೋಷ, ಭಕ್ತಿ – ನೀತಿ, ವ್ಯಕ್ತಿಗಳ ಸ್ತುತಿ, ಮೌಲ್ಯಗಳ ಆರಾಧನೆಗಳನ್ನು ಕಥೆ, ನಾಟಕ, ಒಗಟು, ಹಾಡು ಮೊದಲಾದ ರೂಪಗಳಲ್ಲಿ ಹೇಳಬಯಸಿದವರು. ಈ ಸಾಹಿತ್ಯ ಬಾಯಿಂದ ಬಾಯಿಗೆ ಹರಿದು ಬಂದ ಒಂದು ಅಮೂಲ್ಯ ಸಾಹಿತ್ಯವಾಗಿದೆ.

ಶ್ರೀ ಕನಕದಾಸರ ಜೀವನದ ವಿವರಗಳು ಪರಂಪರೆಯಿಂದ ಸಾಗಿ ಬಂದ ಜನಪದರ ಅನೇಕ ಹಾಡುಗಳಲ್ಲಿ ದೊರೆಯುತ್ತದೆ.

ಸಂಸಾರ ಸರಿಸ್ಯಾನ ಸುಖದಾಗ ಇಳಿದಾನ
ಸಾವಿರ ಗಾವುದ ನಡೆದಾನ ! ಕನಕಪ್ಪ
ಉಡುಪಿಯ ಹರಿಗೆ ತಾ ಮಿಗಿಲಾದ .. ೩

ವೈರಾಗ್ಯ ಹೊಂದಿದ ಕನಕದಾಸ ಉಡುಪಿಯ ಶ್ರೀ ಹರಿಗೆ ಭಕ್ತಿ – ಭಾವಪೂರ್ಣವಾಗಿ ತನ್ನನ್ನು ಸಮರ್ಪಿಸಿಕೊಂಡ ಭಾವವನ್ನು ಇಲ್ಲಿ ಕಾಣುತ್ತೇವೆ.

ನೀವೇನು ಬಲ್ಲಿರಿ ನೀವೇನು ಬಲ್ಲಿರಿ

ಕನಕದಾಸರನು ನೀವೇನು ಬಲ್ಲಿರಿ !! ಪ !!

ಹಾಲುಮತದ ಕನಕದಾಸನೂ

ಸಾಲು ಮತಗಳ ತಿಳಿದವನೂ

ಸಾಲು ಮತಗಳ ತಿಳಿದ್ಹೇಳಿದನ

ಸಾಕು ಮಾಡಬೇಕು ಜಾತಿಗಳನೂ !

ಹಲವು ಮತ ತಿಳಿದವನವನೂ

ಒಂದೇ ಒಂದು ಮತ ಎಂದವನೂ

ಒಂದೇ ಮತ ತಿಳಿದ್ಹೇಳಿದವನ

ಭೂಮಿಗೆ ಇಲ್ಲ ಜಾತಿಯನೂ ! ೪

ಜನಪದರು ಕನಕದಾಸರ ನಿಲುವನ್ನು ತಮ್ಮ ಜನಪದ ಶೈಲಿಯಲ್ಲಿ ಹೀಗೆ ತಿಳಿಸಿದ್ದಾರೆ. ಮಾನವ ಮತ ಎಂಬುದು ಹಲವಿಲ್ಲ ಅದು ಒಂದೇ, ಅದೇ 'ಮನುಜಮತ' ಎಂಬ ಸಂದೇಶವನ್ನು, ಮಾನವನನ್ನು ತಿದ್ದುವ ತತ್ವಗಳಂತೆ ನೀಡಿದ್ದಾರೆ. ಹೀಗೆ ಕವಿಕನಕದಾಸರು ಹಾಲು ಮತದಲ್ಲಿ ಜನಿಸಿ, ಮನುಜಮತ ಬೆಳೆಸಲು ಸಾಕ್ಷಿಯಾಗಿದ್ದಾರೆಂದು ಜನಪದರು ಹೇಳಿ, ಹಾಡಿ ಹೊಗಳಿದ್ದಾರೆ.

' **ರಾಮಧಾನ್ಯ ಚರಿತೆ** ' ಯಲ್ಲಿ ಕನಕದಾಸರು ಜನಪದೀಯ ಅಂಶಗಳನ್ನು ಯಾವ ತಂತ್ರದಲ್ಲಿ ಬಳಸಿದ್ದಾರೆ ಎಂದು ಗಮನಿಸಿ ನೋಡುವುದಾದರೆ, ಗಾದೆಗಳು ಮನುಷ್ಯನ ಜೀವನಕ್ಕೆ ಹಿಡಿದ ಕನ್ನಡಿಯಂತೆ. ಗಾದೆಗಳು ಅನುಭವೋಕ್ತಿಗಳು. ಜಾನಪದ ವೇದಗಳಂತೆ ಗಾದೆಗಳು. ಗಾದೆಗಳು ಸಮಾಜದ ಪ್ರತಿಬಿಂಬಗಳೂ ಆಗಿವೆ. ಸಾಮಾಜಿಕ ಮೌಲ್ಯಗಳನ್ನು ತಿಳಿಯುವಲ್ಲಿ ಗಾದೆಗಳ ಅರಿವು ಇರುವುದು ಅತ್ಯಂತ ಅಗತ್ಯವೆನಿಸಿದೆ. ಅದರಂತೆ ' ಭತ್ತ – ರಾಗಿ ' ಸಂಘರ್ಷದ ಸ್ವರೂಪಕ್ಕೆ ಗಾದೆಗಳನ್ನು ಹಿನ್ನಲೆಯಲ್ಲಿಟ್ಟು ನೋಡಿದರೆ ಕನಕದಾಸರ ಈ ಕಲ್ಪಿತ ಕಥೆ, ಕೇವಲ ಕಲ್ಪಿತವಾಗಿಯಷ್ಟೇ ತೋರದೆ ಸಮಾಜದ ವಾಸ್ತವಿಕ ಸತ್ಯವನ್ನು ತನ್ನಲ್ಲಿ ಒಳಗೊಂಡಿದೆ ಎಂಬುದರಲ್ಲಿ ಅನುಮಾನ ತೋರದು. ಹೀಗೆ ಇವುಗಳ ನಡುವಿನ ಸ್ಪರ್ಧೆಯನ್ನು ಆಧಾರವಾಗಿಟ್ಟುಕೊಂಡು ಜನಪದ ಆವರಣದ ಹಿನ್ನಲೆಯಲ್ಲಿ ರಚಿತವಾಗಿದೆ.

ಒಬ್ಬ ವ್ಯಕ್ತಿಗೆ ಸಾಮಾನ್ಯವಾಗಿ ಅಹಂಕಾರ ಬರುವುದು, ಹಣ-ಐಶ್ವರ್ಯ, ಅಧಿಕಾರ, ಪಾಂಡಿತ್ಯ, ಬಿಳಿವರ್ಣ, ಉತ್ತಮ ಜಾತಿಯಲ್ಲಿ ಹುಟ್ಟಿದ್ದೇನೆಂಬ ಕಾರಣಕ್ಕೆ ಇರಬಹುದು. ಇಲ್ಲಿ ಇವುಗಳಿಗೆಲ್ಲ ಸಂಕೇತವಾಗಿ ಭತ್ತವು ನಿಂತಿದ್ದು, ಗರ್ವದಿಂದಲೇ ರಾಗಿಯನ್ನು ಹೀಗಳಿಯುತ್ತದೆ. ಅದಕ್ಕೆ ಕಾರಣ ಬಡತನ, ಅಧಿಕಾರ ರಹಿತ, ಅಶಿಕ್ಷಿತರು, ಕಪ್ಪುವರ್ಣ, ಕೀಳು ಜಾತಿ ಇವೆಲ್ಲಕ್ಕೂ ರಾಗಿ ಸಂಕೇತವಾಗಿದೆ. " ಬಡವನ ಕೋಪ ದವಡೆಗೆ ಮೂಲ " ಎಂಬಂತೆ ಸಾಕಷ್ಟು ಸಮಯ ಮೌನದಿಂದಲೇ ಸಹಿಸಿಕೊಂಡ ರಾಗಿ ರಾಮ, ಹನುಮಂತ, ಗೌತಮರೇ ಮೊದಲಾದ ಹಿರಿಯರ ಮುಂದೆ ಜಗಳಗಂಟನಾಗಿ, ಅನುಚಿತವಾಗಿ ವರ್ತಿಸುವುದು ಸರಿಯಲ್ಲವೆಂದು ಸುಮ್ಮನ್ನಿತ್ತು. ಆದರೆ ಅಹಂಕಾರದಿಂದ ಬೇಕೂ ಎಂತಲೆ, ಕಾಲು ಕೆರೆದುಕೊಂಡು ಜಗಳಕ್ಕೆ ಬರುತ್ತಿದ್ದ ಭತ್ತದ ಬಿರುನುಡಿಗಳಿಂದ ಮನನೊಂದು ತಾಳ್ಮೆ ಕಳೆದು ಕೊಂಡ ರಾಗಿ ಸಿಡಿಲ ಘರ್ಜನೆಯಂತೆ ರೇಗಾಡುತ್ತದೆ. ಇದರಿಂದ ಬಡವ, ಕೀಳು ಜಾತಿಯವನಾದರೂ ಪ್ರತಿಯೊಬ್ಬರಿಗೂ ತನ್ನ ಮರ್ಯಾದೆ, ಗೌರವ ಕಾಪಾಡಿಕೊಳ್ಳಬೇಕೆಂಬ ಹಂಬಲ, ಸ್ವಾಭಿಮಾನ ಇದ್ದೇ ಇರುತ್ತದೆ ಎಂಬುದು ರಾಗಿಯ ಮನೋಧರ್ಮದಿಂದ ನಮಗೆ ವೇದ್ಯವಾಗುತ್ತದೆ. " ಕುಂತರೆ ಕಾಲು ಎಳೆಯುವ, ಎದ್ದರೆ ಕಾಲು ಹಿಡಿಯುವ "ಜನರೇ ಇರುವ ಈ ಸಮಾಜದಲ್ಲಿ " ಏಟಿಗೆ ಎದಿರೇಟು " ಕೊಡುವ ವ್ಯಕ್ತಿಗಳಿಗೆ ಜಯ, ಸವಲತ್ತುಗಳು ಸಿಗುತ್ತದೆ. ಇಲ್ಲದಿದ್ದರೆ ಶ್ರೀಮಂತರ ಪಾದಗಳಡಿಯಲ್ಲಿ ನಲುಗಿ ಹೋಗಬೇಕಾಗುತ್ತದೆ ಎಂಬುದಂತೂ ಸತ್ಯವಾದ ಮಾತು.

" **ರಾಗಿ ಬಲ್ಲವನಿಗೆ ರೋಗಾನೇ ಇಲ್ಲ** " ಎಂಬ ಪ್ರಸಿದ್ಧವಾದ ಗಾದೆ ಮಾತೊಂದಿದೆ. ಅದರಂತೆ ಇಂದಿನ ನಗರ-ಪಟ್ಟಣಗಳಲ್ಲಿ ವಾಸಮಾಡುವವರು ಅಕ್ಕಿ-ಅನ್ನದೂಟವನ್ನು ಮಾಡಿ ಚಿಕ್ಕವಯಸ್ಸಿನಲ್ಲೇ ಬೊಜ್ಜು, ದಢೂತಿ ದೇಹವನ್ನು ಬೆಳಸಿಕೊಂಡಿರುತ್ತಾರೆನೋ ನಿಜ ಆದರೆ ಅವರ ದೇಹದಲ್ಲಿ ಕಿಂಚಿತ್ತು ಶಕ್ತಿಯೆಂಬುದೇ ಇರುವುದಿಲ್ಲ, ಕಷ್ಟಕರವಾದ ಕೆಲಸಗಳನ್ನು ಅವರಿಂದಂತೂ ಮಾಡಲು ಸಾಧ್ಯವಾಗುವುದಿಲ್ಲ ಅಷ್ಟೇ ಏಕೆ ನಡೆದಾಡಲೂ ಕಷ್ಟಪಡಬೇಕಾಗುತ್ತದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ರಾಗಿಯನ್ನು ಬಳಸಿ ಮುದ್ದೆ ಊಟಮಾಡುವ ಜನರು ಅಧಿಕ, ಎಂಥ ಕಠಿಣ

ಕೆಲಸಗಳನ್ನು ಅವರು ಮಾಡುವಷ್ಟು ದೈಹಿಕ ಸಾಮರ್ಥ್ಯ ಅವರಿಗೆ ರಾಗಿಯ ಪದಾರ್ಥಗಳಿಂದ ಪ್ರಾಪ್ತವಾಗುತ್ತದೆ. ಅದಲ್ಲದೆ ಅವರ ದೇಹ ಗಟ್ಟಿಮುಟ್ಟಾಗಿದ್ದು, ಬೊಜ್ಜುರಹಿತವಾಗಿರುತ್ತದೆ. ಅಷ್ಟೇ ಅಲ್ಲದೆ ಅಕ್ಕಿಯನ್ನು ಊಟ ಮಾಡುವ ಜನರು ಬೇಗನೆ ಕಾಯಿಲೆಗೆ ತುತ್ತಾಗುತ್ತಾರೆ, ಕಾಯಿಲೆಯನ್ನು ತಡೆದುಕೊಳ್ಳುವ ಶಕ್ತಿಯೂ ಅವರಿಗೆ ಕಡಿಮೆ, ಆದರೆ ರಾಗಿ ತಿನ್ನುವವರ ಮೈಯಂತು ಬೆಟ್ಟದ ಹಾಗೆ ದಷ್ಟಪುಷ್ಟ. ಆಧುನಿಕ ಯುಗದ ಅನೇಕ ಕಾಯಿಲೆಗಳಿಗೆ " ರಾಗಿ " ಯು ಉತ್ತಮವಾದ ಆಹಾರ ಧಾನ್ಯವಾಗಿದೆ. ಕಾಯಿಲೆಗಳಿಗೆ ತುತ್ತಾದ ಶ್ರೀಮಂತ, ಬ್ರಾಹ್ಮಣರು ರಾಗಿಯನ್ನು ಉಪಯೋಗಿಸಲೇಬೇಕು. ಜಗತ್ತಿನಲ್ಲಿ " ಒಂದು ಹುಲ್ಲುಕಡ್ಡಿಯೂ ಆಸರೆಯಾಗಬಲ್ಲುದು" ಅಂತಹುದರಲ್ಲಿ ರಾಗಿಯಂತಹ ಧಾನ್ಯವನ್ನು ಅಷ್ಟು ಸುಲಭವಾಗಿ ತಿರಸ್ಕರಿಸುವುದು ಎಷ್ಟರಮಟ್ಟಿಗೆ ಸರಿ ಎಂಬುದು ಕನಕದಾಸರ ಅಭಿಪ್ರಾಯ.

" **ದಾಸರೆಂದರೆ ಪುರಂದರ ದಾಸರಯ್ಯ**" ಎಂದು ತಮ್ಮ ಗುರು ವ್ಯಾಸರಾಯರಿಂದ ಹೊಗಳಿಸಿಕೊಂಡ ದಾಸಶ್ರೇಷ್ಠರಾದ ಪುರಂದರದಾಸರು ಉಪದಾನಕ್ಕೆ ಬಂದಾಗ ಒಂದು ಮನೆಯಲ್ಲಿ ಅಕ್ಕಿಗೆ ಬದಲು ರಾಗಿ ದೊರಕಿತು. ಮೇಲ್ಜಾತಿಯವರಾದ ನಾವು ಅದನ್ನು ಸೇವಿಸುವುದಿಲ್ಲ ಎಂಬ ಯಾವುದೇ ಗರ್ವದ ನುಡಿಯನ್ನಾಡದ ಅವರು ಆ ಭಿಕ್ಷೆಯನ್ನು ಸಂತೋಷವಾಗಿ, ಮನ:ಪೂರ್ವಕವಾಗಿ ಒಪ್ಪಿಕೊಂಡು 'ರಾಗಿ' ಎಂಬ ಮಾತನ್ನೇ ಹಿಡಿದು ಅದರ ಸುತ್ತ ಹೆಣೆದಿರುವ ಜಾಣತನದ ಪದ ಇದು.

ರಾಗಿ ತಂದಿರಾ ಭಿಕ್ಷಕೆ ರಾಗಿ ತಂದಿರಾ
ಯೋಗ್ಯರಾಗಿ, ಭೋಗ್ಯರಾಗಿ, ಭಾಗ್ಯವಂತರಾಗಿ ನೀವು

ಅನ್ನದಾನವ ಮಾಡುವರಾಗಿ
ಅನ್ನಛತ್ರನ್ನಿಟ್ಟವರಾಗಿ
ಅನ್ಯವಾರ್ತೆಯ ಬಿಟ್ಟವರಾಗಿ
ಅನುದಿನ ಭಜನೆಯ ಮಾಡುವರಾಗಿ
ಮಾತಪಿತೃಗಳ ಸೇವಿಪರಾಗಿ
ಪಾಪ ಕಾರ್ಯದ ಬಿಟ್ಟವರಾಗಿ
ಜಾತಿಯಲಿ ಮಿಗಿಲಾದವರಾಗಿ
ನೀತಿ ಮಾರ್ಗದಲಿ ಖ್ಯಾತರಾಗಿ (೫)

ರಾಗಿ ಎಂದರೆ ಕನಿಷ್ಠ, ಕೀಳುವರ್ಗದವರು ಮಾತ್ರ ಉಪಯೋಗಿಸಬೇಕು ಎಂಬ ಸಂಕುಚಿತ ಮನೋಭಾವವನ್ನು ಬಿಟ್ಟು ಉದಾರವಾಗಿ ಎಲ್ಲಾ ಧಾನ್ಯಗಳು ಸಮ ಎಂಬಂತೆ ಕಾಣುವ ವಿಶಾಲ ಹೃದಯವಂತಿಕೆ ಇರುವವನೇ ನಿಜವಾದ ಮನುಷ್ಯ. ರಾಗಿಯ ಮಹತ್ವವನ್ನು ಸರಿಯಾಗಿ ಅರಿತುಕೊಳ್ಳದೆ ಯಾರೋ ತಿಳಿಯದ ಮೂಢರು ಅದರ ಬಗ್ಗೆ ತೋರಿದ ನಿರ್ಲಕ್ಷ್ಯವನ್ನು ನಾವು ತೋರಿಸಬಾರದು. ಆದ್ದರಿಂದ ಪುರಂದಾರದಾಸರು ರಾಗಿಯ ಮಹತ್ವವನ್ನು ಅರಿತವರಾಗಿ ಲೋಕದ ಜನತೆಗೆ 'ರಾಗಿ ಕೊಳ್ಳಿರೋ..' ಎಂದು ತಿಳಿಯ ಹೇಳಿ ಅದರ ಶ್ರೇಷ್ಠತೆಯನ್ನು ವೈವಿಧ್ಯಮವಾಗಿ ಹಾಡಿ ಹೊಗಳಿದ್ದಾರೆ.

ಅಕ್ಕಿ ಮತ್ತು ರಾಗಿಯ ಬೆಳೆ ಬೆಳೆಯುವ ವಿಧಾನಗಳನ್ನು ಒಮ್ಮೆ ಗಮನಿಸಿ ನೋಡುವುದಾದರೆ, ಅಕ್ಕಿ (ಭತ್ತ) ಯನ್ನು ಬೆಳೆಯಲು ಹೆಚ್ಚು ನೀರಿರಬೇಕು. ಸಕಾಲಕ್ಕೆ ಸಾಕಾಗುವಷ್ಟು ಮಳೆ ಬೀಳಬೇಕು, ಇಲ್ಲದಿದ್ದರೆ ಸಮರ್ಪಕವಾದ ನೀರಾವರಿ ವ್ಯವಸ್ಥೆ ಇರಬೇಕು. ಆದರೆ ಬಡರೈತರ ಸಮಸ್ಯೆಯೇ ಪ್ರಮುಖವಾಗಿ ನೀರಿನ ಪೂರೈಕೆ. ಆದ್ದರಿಂದ ಎಲ್ಲಾ ಕಾಲದಲ್ಲೂ ಭತ್ತವನ್ನು ಹೇರಳವಾಗಿ ಬೆಳೆಯಲು ಸಾಧ್ಯವಿಲ್ಲ. ಆದರೆ ರಾಗಿ ಹಾಗಲ್ಲ ಕಡಿಮೆ ನೀರಿನಲ್ಲೂ ಬೆಳೆಯಬಹುದು, ರೈತರಿಗೆ ರಾಗಿಯ ಬೆಳೆ ಬೆಳೆಯುವುದು ದೊಡ್ಡ ಸಮಸ್ಯೆಯೇನು ಆಗುವುದಿಲ್ಲ. ಬೆಳೆದ ರಾಗಿಯನ್ನು ಸೂಕ್ತವಾದ ಉಗ್ರಾಣ ವ್ಯವಸ್ಥೆಯಲ್ಲಿ ಎರಡು-ಮೂರು ವರ್ಷ ಜೋಪಾನವಾಗಿ ರಕ್ಷಿಸಿಡಬಹುದು, ಆದರೆ ಅಕ್ಕಿ ಹಾಗಲ್ಲ, ಬೆಳೆದ ಆರು ತಿಂಗಳೊಳಗೆ ಉಪಯೋಗಿಸಬೇಕು ಇಲ್ಲದಿದ್ದರೆ ಹುಳು, ಜಾಡು ತುಂಬಿ ಶಕ್ತಿಹೀನ, ಕಾಂತಿಹೀನವಾಗಿ ಬಳಸಲು ಅಯೋಗ್ಯವಾಗುತ್ತದೆ. ಮಳೆ ಇಲ್ಲದೆ ಹೋದಾಗ ಅಕ್ಕಿಯನ್ನು ಬೆಳೆಯಲು ಸಾಧ್ಯವಿಲ್ಲವಾಗುತ್ತದೆ. ಆಗ ಅಕ್ಕಿ ಯಾರ ಪಾಲಿಗೂ ದೊರಕುವುದಿಲ್ಲ. ಆದರೆ ರಾಗಿ ಹಾಗಲ್ಲ ಕ್ಷಾಮ-ಬರಗಾಲದ ಕಾಲದಲ್ಲೂ ಧೃತಿಗೆಡದೆ ಲೋಕದ ಜನರ ರಕ್ಷಕನಾಗಿ ನಿಲ್ಲುತ್ತದೆ ಎಂದು ಹೇಳುವ ಸಂದರ್ಭದಲ್ಲಿ ನಮ್ಮ ಸಮಾಜದ ಸಾಮಾಜಿಕ ಸ್ಥಿತಿಗತಿಗೆ ಕನ್ನಡಿ ಹಿಡಿದಂತಿದೆ. ಯಾವುದು ಸದಾಕಾಲ ಎಲ್ಲರ ಬೆನ್ನೆಲುಬಾಗಿ, ಸಹಕಾರ-ಪರೋಪಕಾರ ಗುಣವನ್ನು ಹೊಂದಿರುತ್ತದೆಯೋ ಅದರ ಸಾಧನೆಯೇ ಮೇಲುಗೈ, ಯಶಸ್ಸು, ಕೀರ್ತಿ, ಜನಬಲ

ಎಲ್ಲವನ್ನು ಗಿಟ್ಟಿಸಿಕೊಂಡು ಅದರ ಧ್ವಜವೆ ವಿಜಯಧ್ವಜವಾಗುತ್ತದೆ. ಏಕೆಂದರೆ ಅದು ನಿಸ್ವಾರ್ಥ ಮನೋಭಾವದಿಂದ ಸರ್ವೋದ್ಧಾರದ ಹಂಬಲವನ್ನೊತ್ತು, ಜನರಿಗಾಗಿ, ಜನರಿಗೋಸ್ಕರ ಮತ್ತು ಜನರ ನಡುವೆಯೇ ಸಾಕಾರವಾಗಿರುತ್ತದೆಯೇ ಹೊರತು ಅವರನ್ನು ಎಂದಿಗೂ ಕಡೆಗಣಿಸುವುದಿಲ್ಲ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮ
ದೇವನೆಂತೊಲಿವನಯ್ಯಾ ೬

ಈ ಮೇಲಿನ 'ನುಡಿ' ಅಥವ 'ಮಾತಿನ' ಮಹತ್ವನ್ನು ಸಾರುವಂತದ್ದಾಗಿದೆ. ಅದರಂತೆ " ಮಾತು ಆಡಿದರೆ ಹೋಯ್ತು, ಮುತ್ತು ಹೊಡೆದರೆ ಹೋಯ್ತು " ಆಡಿದ ಮಾತು, ಕೈಜಾರಿದ ಮುತ್ತು ಎರಡೂ ಒಂದೆ. ಒಬ್ಬರನ್ನು ಕುರಿತು ಮಾತನಾಡುವ ಮುನ್ನ ನೂರು ಭಾರಿ ಚೆನ್ನಾಗಿ ಯೋಚಿಸಿ, ನನ್ನ ಮಾತುಗಳಿಂದ ಬೇರೆಯವರ ಮನಸ್ಸಿಗೆ ನೋವಾಗುವುದಿಲ್ಲವೆಂದು ತಿಳಿದು, ಅನಂತರ ಮಾತನಾಡಬೇಕು, ಏಕೆಂದರೆ ನಮ್ಮ ನಾಲಗೆ ನಮ್ಮ ಕುಲವನ್ನು ತಿಳಿಸುತ್ತದೆ ಅಂದರೆ ನಮ್ಮ ಮಾತು, ವರ್ತನೆ – ನಮ್ಮ ಸಂಸ್ಕೃತಿ, ಆಚಾರ ವಿಚಾರಗಳನ್ನು ಗುರುತಿಸುತ್ತದೆ. ಆದರೆ 'ರಾಮಧಾನ್ಯ ಚರಿತ್ರೆ' ಯಲ್ಲಿ ಅಕ್ಕಿ–ರಾಗಿಯ ಸಂಭಾಷಣೆಯಲ್ಲಿ ಮೊದಲಿಗೆ ಅಕ್ಕಿಯೇ ರಾಗಿಯನ್ನು ಕುರಿತು ನಿಂದಿಸಿತು. ಕಾಲು ಕೆರೆದುಕೊಂಡು ಜಗಳಕ್ಕೆ ಬರುವಂತೆ " ಏನೆಲವೊ ನರೆದಲೆಗ ನೀನು ಸಮಾನವೇ ಯೆನಗಿಲ್ಲಿ "... ಎಂದು ಗರ್ವದಿಂದ ನುಡಿಯುವ ಭತ್ತಕ್ಕೆ, ಬಸವಣ್ಣನವರ " ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ " ಎಂಬ ನೀತಿಯುಕ್ತ ಮಾತುಗಳ ಪರಿಚಯವಿಲ್ಲವೆನಿಸುತ್ತದೆ. " ಮಾತು ಬೆಳ್ಳಿ ಮೌನ ಬಂಗಾರ " ಎಂಬ ಗಾದೆ ಮಾತಿನಂತೆ ಮೌನವನ್ನೆ ಬಹಳಹೊತ್ತು, ಕಾಪಾಡಿಕೊಂಡು ಬಂದ ರಾಗಿ ಪರಿಸ್ಥಿತಿ ಕೈಮೀರಿದಾಗ, " ಜಾಣನಿಗೆ ಮಾತಿನ ಪೆಟ್ಟು, ದಡ್ಡನಿಗೆ ದೊಣ್ಣೆಪೆಟ್ಟು " ಎಂಬಂತೆ " ನುಡಿಗೆ ಹೇಸದ ಭಂಡ ನಿನ್ನೊಳು ಕೊಡುವರೇ ಮಾರುತ್ತರವ

ಕಡುಜಡನಲಾ ನಿನ್ನೊಡನೆ ಮಾತೇಕೆಂದ ನರೆದಲಗ " ನ ಮಾತುಗಳು ಸಭೆಯಲ್ಲಿ ಭತ್ತಕ್ಕೆ ನಿಜವಾಗಿ ದೊಣ್ಣೆಪಟ್ಟೇ ಆದವು. ಅಲ್ಲದೆ " ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ " ವೆಂಬ ಮಾತಿನಂತೆ ರಾಗಿಯು ಶ್ರೇಷ್ಠವೇ ಸರಿ.

ಕಥೆಯ ಭಾಗವು ಮೂಲ ರಾಮಾಯಣದ್ದಾಗಿರದೆ ಕನಕದಾಸರ ಸ್ವಂತ ಸೃಷ್ಟಿಯಾಗಿದೆ. ಈ ಪರಿಕಲ್ಪನೆ ಯಕ್ಷಗಾನದಿಂದಲೂ ಬಂದಿರಲೂಬಹುದು, ಜನಪದ ಸಾಹಿತ್ಯದಿಂದ ಬಂದಿರಲೂ ಬಹುದು. ಯಕ್ಷಗಾನ ಧೂಮ್ರ ಪತ್ರ ಪ್ರಸಂಗ, ಪಲಾಂಡು ಚರಿತೆ ಹೊಗೆಸೊಪ್ಪು ಮತ್ತು ಈರುಳ್ಳಿ ಬಗಿಗಿನ ಕಥೆಗಳನ್ನು ಉದಾಹರಣೆಗೆ ನೋಡಬಹುದು. ಜಾನಪದ ಸಾಹಿತ್ಯದಲ್ಲಿ ಆಹಾರಧಾನ್ಯಗಳು ನಾಯಕರಾಗುವ ಅನೇಕ ಉದಾಹರಣೆಗಳು ದೊರೆಯುತ್ತದೆ. ಅವರೆಯನ್ನು ಪಾಂಡವರೆ ಭಿತ್ತಿ ಅದರ ರೂಪದಲ್ಲಿ ಉಳಿದಿದ್ದಾರೆ ಮುಂತಾದ ಕಲ್ಪನೆಗಳನ್ನು ನೋಡಬಹುದು. ೭

ಪೌರಾಣಿಕ:

ಹರಿದಾಸ ಸಾಹಿತ್ಯ ಶ್ರೀ ವೈಷ್ಣವ ಧರ್ಮದಿಂದ ಪ್ರಭಾವಿತರಾಗಿ, ವಿಷ್ಣುಭಕ್ತಿ, ಭಗವಂತನ ಮಹಿಮೆ, ಸಮಾಜದ ರೀತಿ–ನೀತಿಗಳನ್ನು ತಮ್ಮ ಕೀರ್ತನೆಗಳಲ್ಲಿ ಹಾಡಿ ಹೊಗಳಿದ್ದಾರೆ. ಅವರ ಸಾಹಿತ್ಯ ರಚನೆಯ ಹಿಂದೆ ಪೌರಾಣಿಕ ಅಂಶವು ಪ್ರಧಾನವಾಗಿಯೇ ಇದೆ. ಆದ್ದರಿಂದ " ದಾಸರ ಅಂತರಂಗ ಮತ್ತು ಬಹಿರಂಗ ಜೀವನವನ್ನೆಲ್ಲ ಪೌರಾಣಿಕ ವಿಷಯಗಳು ಆವರಿಸಿದ್ದವು. ಅವರ ಜೀವನ ಧೋರಣೆಗಳಿಗೂ ಸಹ ಪುರಾಣ ಮಾಧ್ಯಮವಾಯಿತು. " ೮

ಕನಕದಾಸರ " ರಾಮಧಾನ್ಯ ಚರಿತ್ರೆ "ಯು ಪೌರಾಣಿಕ ಹಿನ್ನಲೆಯನ್ನು ಹೊಂದಿರುವ ಕೃತಿಯಾಗಿದೆ. ಇಲ್ಲಿ ಸಮಾಜದ ಸಮಕಾಲೀನ ಬದುಕು ಪುರಾಣ ಪ್ರಜ್ಞೆಯಲ್ಲಿಯೂ ಅಭಿವ್ಯಕ್ತಿಯನ್ನು ಪಡೆದಂತಿದೆ. ಶ್ರೀರಾಮನು ರಾವಣನನ್ನು ಕೊಂದು ವಿಭೀಷಣನಿಗೆ ಲಂಕೆಯ ಪಟ್ಟವನ್ನು ಕಟ್ಟಿ, ಸೀತೆ, ಲಕ್ಷ್ಮಣ, ಹನುಮ, ಕಪಿಸೈನ್ಯದೊಂದಿಗೆ, ರಾಮೇಶ್ವರದಲ್ಲಿ ಶಿವನನ್ನು ಭಕ್ತಿಯಿಂದ ಪೂಜಿಸಿ ಅಯೋಧ್ಯೆಯ ಕಡೆಗೆ ಪ್ರಯಾಣ ಮಾಡುತ್ತಾ ದಾರಿಯಲ್ಲಿ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಆಗಮಿಸಿದರು. ತಪಸ್ಸಿನ ಫಲವಾಗಿ ಅಪೂರ್ವವಾದ ತೇಜಸ್ಸಿನಿಂದ ಕಂಗೊಳಿಸುತ್ತಿದ್ದ ಕೌಶಿಕ, ಜಮದಗ್ನಿ, ಜಹ್ನು, ಪರಾಶರ, ಜಾಬಾಲಿ, ಭೃಗು, ದುರ್ವಾಸ, ಗೌತಮರೇ ಮೊದಲಾದ ಮುನಿಶ್ರೇಷ್ಠರು

ದಶರಥ ಶ್ರೀರಾಮಚಂದ್ರನನ್ನು ನೋಡಿ, ಹರಸಲೆಂದು ಬಂದಿರುವರು. ಆದರೆ ಇಲ್ಲಿ ಪ್ರಮುಖವಾಗಿ ಒತ್ತುಕೊಟ್ಟಿರುವುದು ಮಾತ್ರ 'ಭತ್ತ-ರಾಗಿ' ಗಳ ಸಂಘರ್ಷಕ್ಕೆ ! ಏಕೆಂದರೆ ಇಲ್ಲಿನ ಭತ್ತ-ರಾಗಿಗಳು ಸಮಾಜದ ಮೇಲು-ಕೀಳು ವರ್ಗಗಳ ಸಂಕೇತವಾಗಿ ನಿಂತಿದೆ.

ಭತ್ತ ಮತ್ತು ರಾಗಿಗಳ ವಾದ ವಿವಾದಗಳನ್ನು ಕೇಳಿದ ಶ್ರೀರಾಮ ತೀರ್ಪನ್ನು ಮುಂದಕ್ಕೆ ಕಾಯ್ದಿರಿಸಿದ. ಅವಧಿ ಪೂರ್ಣವಾದ ಮೇಲೆ ಇವರ ಮಹಾಕಲಹವನ್ನು ಪರಿಹರಿಸಲು ಸಾಮಾನ್ಯರಿಗೆ ಸಾಧ್ಯವಿಲ್ಲವೆಂದು ಹೇಳಿ ಇಂದ್ರ, ಶಿವ, ಬ್ರಹ್ಮಾದಿದೇವತೆಗಳು, ನಾರದ ಮಹರ್ಷಿಗಳನ್ನು ಕರೆಸಿ ನಿಷ್ಪಕ್ಷಪಾತವಾಗಿ 'ರಾಗಿಯೇ ಶ್ರೇಷ್ಠ ಧಾನ್ಯ' ವೆಂದು ಹೇಳಿ, 'ರಾಘವ' ಎಂಬ ಬಿರುದನ್ನು ನೀಡಿದರಿಂದ, ಅದು ಅಂದಿನಿಂದ ರಾಮಧಾನ್ಯವಾಯಿತು. ಇಲ್ಲಿ ರಾಮ, ಇಂದ್ರಾದಿ ದೇವೆಗಳೆಲ್ಲಾ ಒಂದೇ ಮನಸ್ಸಿನಿಂದ ರಾಗಿಯನ್ನು ಒಪ್ಪಿಕೊಳ್ಳುವುದರಿಂದ ರಾಗಿಗೆ ಮಾನ್ಯತೆ ಸಿಕ್ಕಿತು. ಸಾಮಾನ್ಯ ಮನುಷ್ಯರು ಹಣದಾಸೆಗೆ ನ್ಯಾಯದಲ್ಲಿ ಪಕ್ಷಪಾತ ತೋರಿ, ಅನ್ಯಾಯವೆಸಗಬಹುದು. ಆದರೆ ದೇವತೆಗಳು ನ್ಯಾಯವಾದಿಗಳು, ಅವರಲ್ಲಿ ಪಕ್ಷಪಾತ-ಭೇದ ಸಲ್ಲದು, ಕಣ್ಣುಕಟ್ಟಿದ ನ್ಯಾಯದೇವತೆಯಂತೆ ನ್ಯಾಯಕ್ಕೆ ಜಯ ಒದಗಿಸುವಂತಹವರು.

ಕನಕದಾಸರ ರಾಮಧಾನ್ಯ ಚರಿತ್ರೆಯು "ಎಂಥ ಲೌಕಿಕ ವಸ್ತುವನ್ನಾರಿಸಿಕೊಂಡರೂ ಅದನ್ನು ಪೌರಾಣಿಕ ಅಥವ ಇತಿಹಾಸ ಪ್ರಸಿದ್ಧವಾದ ಕಥೆಯ ಪ್ರಣಾಳಿಯಲ್ಲಿ ಹಾಯಿಸಬೇಕೆನ್ನುವ ಚಟ ಯಾವ ಕವಿಯನ್ನು ಬಿಟ್ಟಿದ್ದಲ್ಲ. ಕೃತಿಯ ನಾಮಕರಣದಿಂದಲೇ ಅದರ ಪ್ರಧಾನ ಕಥೆ ಯಾವುದು, ಕವಿಯ ಮುಖ್ಯೋದ್ದೇಶವೇನೆಂಬುದು ನಿರ್ಣಯವಾಗುತ್ತದೆ. ಕವಿ ಸಹಜವಾಗಿ ಕ್ರಾಂತಿಮತಿಯಾದರೂ ಸನ್ನಿವೇಶ ವಾತಾವರಣ ಬದ್ಧನಾಗಿ ಸಂಪ್ರದಾಯನಿಷ್ಠನಾಗುತ್ತಾನೆ; ಸಾಮಾಜಿಕ ವಿಷಯ ಕಥಾವಸ್ತುವಾದರೂ ಪೌರಾಣಿಕ ಪ್ರಜ್ಞೆ ಭಕ್ತ ಕವಿಯ ಮನಸ್ಸನ್ನು ಸದಾ ಆಕ್ರಮಿಸಿಕೊಂಡಿದೆ ". ೯

ಕನಕದಾಸರು ಈ ಕೃತಿಯಲ್ಲಿ ಮೇಲು – ಕೀಳು ತಾರತಮ್ಯವನ್ನು ಭತ್ತ – ರಾಗಿಯ ಮೂಲಕ ಸಾಂಕೇತಿಕವಾಗಿ ತಿಳಿಸುತ್ತಾ, ಕೊನೆಗೆ ರಾಗಿಯ ಮಹತ್ವವನ್ನು ಎತ್ತಿ ಹಿಡಿಯುವ ಉದ್ದೇಶದಿಂದಲೇ ಈ ಕಾವ್ಯ ಸೃಷ್ಟಿಸಿದಂತೆ ತೋರುತ್ತದೆ. ಆ ಮೂಲಕ ಕೆಳವರ್ಗವನ್ನು ಉನ್ನತ ಸ್ಥಾನಕ್ಕೇರಿಸಿ ನೋಡುವ ಹಂಬಲ ಎದ್ದು ಕಾಣುವಂತಿದೆ. ಹೀಗಿದ್ದರೂ ಆ ಕಾವ್ಯಕ್ಕೆ ಪುರಾಣದ ಚೌಕಟ್ಟನ್ನು ಒದಗಿಸಿರುವುದರಿಂದ ಅದರ ಬೆಲೆ ಮತ್ತಷ್ಟೂ ಹೆಚ್ಚಿ, ಉತ್ತಮವಾಗಿ ಮೂಡಿಬಂದಿದೆ. ಅಲ್ಲದೆ ಪುರಾಣ ಪುರುಷ ರಾಮನು ನೀಡಿದ ಅಭಯದಿಂದ ರಾಗಿಯ ಕೀರ್ತಿ ಸರ್ವಕಾಲಕ್ಕೂ ಸಲ್ಲುವಂತದ್ದಾಗಿ, ಅದು ಶ್ರೇಷ್ಠ ಸ್ಥಾನವನ್ನು ಗಳಿಸಿದೆ ಎಂಬುದರಲ್ಲಿ ಅನುಮಾನವಿಲ್ಲ. " ರಾಮತ್ವವನ್ನು ಪಡೆಯುವ ರಾಗಿಯ ಪುರಾಣ ಅಥವಾ ಚರಿತ್ರೆಯೇ ರಾಮ ಧಾನ್ಯ ಚರಿತ್ರೆ " ಯಾಗಿದೆ.

ಬಂಡಾಯ ಧ್ವನಿ:–

ಸಮಾಜವಾದಿ ನೆಲೆಯಲ್ಲಿ ಆಲೋಚಿಸಿ, ಬರೆದು, ಬದುಕುವ ಒಂದು ಸಮಾಜಮುಖಿ ಜನಾಂಗವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಹೊರಟ ಒಬ್ಬ ಬರವಣಿಗೆಗಾರನ ಮನೋಭಾವವೇ ಬಂಡಾಯ. ಸಮಾಜದ ರೀತಿ – ನೀತಿ, ಬದುಕು ಬವಣೆಗಳಿಂದ ರೊಚ್ಚಿಗೆದ್ದ ವ್ಯಕ್ತಿಯ ಸಿಟ್ಟು, ಆಕ್ರೋಶಗಳಿಂದ ಅವಮಾನವನ್ನು ಹೊರಹಾಕಿ, ಸಮಾನತೆಗಾಗಿ ಹೋರಾಟ ಮಾಡುವ ಅಬ್ಬರದ ಸ್ಥಿತಿಯೇ ಈ ಬಂಡಾಯ ಸಾಹಿತ್ಯ . ಬಂಡಾಯ ಸಾಹಿತ್ಯ, ಬರವಣಿಗೆ ಮತ್ತು ಸಂಘಟನೆ ಈ ಎರಡು ರೂಪಗಳಲ್ಲಿ ಸಾಮಾನ್ಯವಾಗಿ ಪ್ರಕಟಗೊಳ್ಳುತ್ತದೆ. " ಬಂಡಾಯ ಒಂದು ಪದ್ಧತಿಯೂ ಅಲ್ಲ ಮೌಲ್ಯವೂ ಅಲ್ಲ, ಅದೊಂದು ಪ್ರವೃತ್ತಿ, ಗತಿಶೀಲತೆಯನ್ನು ಕಳೆದುಕೊಂಡ ಮತ್ತು ಚಲನಶೀಲ ಸಮಾಜವೊಂದರ ನಿರೀಕ್ಷಣೆಯ ಮಧ್ಯೆ ತಾತ್ಕಾಲಿಕವಾಗೊ, ಬಹಳ ಕಾಲದವರೆಗೂ ಹುಟ್ಟಿದ ಒಂದು ನಡತೆ "[೧೦] ಯಾಗಿದೆ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನಕಾರರ ಚಳುವಳಿ ಸಾಮಾಜಿಕ – ಧಾರ್ಮಿಕ – ಸಾಂಸ್ಕೃತಿಕ ಸಮಾನತೆಯ ಆಧಾರದ ಮೇಲೆ ಹುಟ್ಟಿ, ತನ್ನ ಕಾರ್ಯ ಸಾಧನೆಗಾಗಿ ಹೋರಾಡಿದ ಒಂದು ಪ್ರಬಲ ವರ್ಗ. ಅದರಂತೆ ಕೀರ್ತನ ಸಾಹಿತ್ಯವು ಬಂಡಾಯ ಮನೋಧರ್ಮವನ್ನು ತಳೆದರೂ ವಚನಕಾರರಷ್ಟು ಪ್ರಖರವಾಗಿರಲಿಲ್ಲ ಎಂದು ಹೇಳುವುದಕ್ಕೆ ನಮಗೆ ಸಾಕ್ಷಿ ಆಧಾರ ಲಭ್ಯವಿದೆ. ಇಲ್ಲಿ ಕನಕದಾಸರ ' ರಾಮಧಾನ್ಯ ಚರಿತ್ರೆ 'ಯಲ್ಲಿ ಮಾತ್ರ ಬಂಡಾಯ ಮನೋವೃತ್ತಿಯನ್ನು ಹುಡುಕಿ ಹೇಳುವುದು ಅಷ್ಟೊಂದು ಸಮಂಜಸವಲ್ಲ ಅಲ್ಲದೆ ಅದು ಪರಿಪೂರ್ಣ ನಿರ್ಧಾರವೂ ಅಲ್ಲ. ಹಾಗೆ ನೋಡಿದರೆ ಅದು ನಮ್ಮ ಸಂಕುಚಿತ ಮನೋಭಾವವಾಗುತ್ತದೆ. ಆದ್ದರಿಂದ ಅವರ ಕೀರ್ತನೆಗಳು, ಒಟ್ಟು ಬದುಕಿನಲ್ಲಿನ ಬಂಡಾಯ ಮನೋವೃತ್ತಿ ಗಮನಿಸಿ ನೋಡಿದಾಗ ಮಾತ್ರ ಅದು ಅರ್ಥಪೂರ್ಣವೆನಿಸುತ್ತದೆ.

ಕನಕದಾಸರ ಬಹುಪಾಲು ಕೀರ್ತನೆಗಳು ಭಕ್ತಿ ಪ್ರಧಾನವಾದದ್ದು. ಆದರೆ ಕೆಲವೊಂದು ಕೀರ್ತನೆಗಳು ಜಾತಿ ಅಸಮಾನತೆಯ ವಿರುದ್ಧ ಪ್ರತಿಭಟನೆಯನ್ನು ತೋರುವಂತೆ ಕಾಣುತ್ತದೆ.

೧. " ಕುಲಕುಲ ಕುಲವೆನ್ನುತಿಹರೊ!
ಕುಲವಾವುದು ಸತ್ಯ ಸುಜನರಿಗೆ
ಕೆಸರೊಳು ತಾವರೆ ಪುಟ್ಟಲು ಅದತಂದು
ಕುಸುಮನಾಭನಿಗೆ ಅರ್ಪಿಸರೇನಯ್ಯ
ಪಶುವಿನ ಮಾಂಸದೊಳುತ್ಪತ್ತಿಕ್ಷೀರವ
ವಸುದೆಯೊಳಗೆ ಭೂಸುರರುಣರೇನಯ್ಯ
________________________ ೧೧

೨. ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ? "

ರಾಮಧಾನ್ಯಚರಿತ್ರೆಯಲ್ಲಿ ಭತ್ತವು ರಾಗಿಗೆ ಕುಲಹೀನ, ಮತಿಹೀನ, ಶೂದ್ರಾನ್ನ, ಅಶುಭ, ಅಯೋಗ್ಯ, ಭ್ರಷ್ಟ ಎಂಬ ಶಬ್ದಗಳಿಂದ ಬೈಯುವುದಲ್ಲದೆ, ಅದನ್ನು ಕಟ್ಟಿಗೆ, ಕುರಿಹಾಲು, ಕಪಿ, ಹಳ್ಳದ ನೀರು, ಹದ್ದು, ಬಕ, ಕಾಗೆ ಯಂತಹ ನಿರ್ಲಕ್ಷ್ಯ ಸಮೂಹಕ್ಕೆ ಹೋಲಿಸುತ್ತದೆ. ತನ್ನನ್ನು ಮಾತ್ರ ರಾಜರ ಅರಮನೆಯಲ್ಲಿ, ಬ್ರಾಹ್ಮಣ ಸೇವನೆಗೆ ಯೋಗ್ಯವಾದುದು, ಗಂಧಾಕ್ಷತೆ ಒಟ್ಟಾರೆ ಮಂಗಳ ಕಾರ್ಯದಲ್ಲಿ ಭಾಗಿಯಾಗುವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಇವುಗಳಿಂದ ಸಿಡಿಮಿಡಿಗೊಂಡ ರಾಗಿಯು ಪ್ರತಿಯಾಗಿ ಭತ್ತಕ್ಕೆ ಭಂಡ, ಕಡುಜಡ, ಸತ್ವಹೀನ, ಬಡವರ ವಿರೋಧಿ, ಪಥ್ಯಾನ್ನ, ಹೆಣದ ತುತ್ತು, ಪಿಂಡದ ರೂಪದಲ್ಲಿ, ದುರಾತ್ಮ, ನಿರ್ದಯಿ, ಮಧುಪಾನ, ದುರ್ಮತಿಗೇಡಿ ಮತ್ತು ನಪುಂಸಕ ಎಂಬ ಕಟು ಮಾತಿನಿಂದ ನುಡಿಯುವ ಸ್ವರೂಪದಲ್ಲಿ, ರಾಗಿಯ ಸಿಟ್ಟು, ಆವೇಶ – ರೊಚ್ಚು, ಪ್ರತಿಭಟನೆ, ಬಂಡಾಯದ ಅಂಶಗಳು ಅಡಗಿದೆ.

ಇಲ್ಲಿ ರಾಗಿಯು ತಾನು ಮೇಲಿನ ಸ್ಥಾನಕ್ಕೆ ಹೋಗಿ, ಉತ್ತಮನೆನಿಸಿಕೊಂಡು ಭತ್ತವನ್ನು ಕೆಳಗೆ ದಬ್ಬಬೇಕು ಎಂಬ ಮನೋಧರ್ಮವಿಲ್ಲ. ಬದಲಿಗೆ ಸಮಾಜದಲ್ಲಿ ನಾನು ಎಲ್ಲರ ಸಮಾನನಂತೆ ಬಾಳಿ ಬದುಕಬೇಕಾದರೆ ಕಳೆದುಕೊಂಡಿರುವ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಹಕ್ಕುಗಳನ್ನು ಪಡೆದುಕೊಳ್ಳಬೇಕೆಂಬ ಹಂಬಲ ವಿದೆಯೇ ಹೊರತು, ತಾನೇ ಸರ್ವಶ್ರೇಷ್ಠನಂತೆ ಮೆರೆಯಬೇಕೆಂಬ ಅಹಂಕರ ಮನೋಭಾವ ಕಾಣದು. ಆದ್ದರಿಂದ ಸಮಾನತೆಗಾಗಿ ರಾಗಿಯು ಬಂಡಾಯ ಧ್ವನಿಯನ್ನು ಎತ್ತಿದೆ ಎಂಬುದು ಈ ಕಾವ್ಯದಿಂದ ನಮಗೆ ತಿಳಿದುಬರುತ್ತದೆ. ಕನಕದಾಸರು ನರೆದಲೆಗನನ್ನು ಮುಂದಿಟ್ಟುಕೊಂಡು ಇಲ್ಲಿ ಒಂದು ಧರ್ಮಯುದ್ಧವನ್ನೇ ಏರ್ಪಡಿಸಿದ್ದಾರೆ. ವಾಸ್ತವದಲ್ಲಿ ಮೇಲುವರ್ಗದೊಡನೆ ನಡೆಸಿದ ಧರ್ಮಸಮಾನತೆಯ ಬಂಡಾಯ ಇದು.

ಸಮಾನತೆಗಾಗಿ ಹೋರಾಡುವ ಕನಕದಾಸರು ತಮ್ಮ ರಾಮಧಾನ್ಯ ಚರಿತ್ರೆಯಲ್ಲಿ ಕ್ರಾಂತಿಯ ಮುನ್ಸೂಚನೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಆ ಕ್ರಾಂತಿಗೆ ಅವರು ಖಡ್ಗ, ಯುದ್ಧ, ರಕ್ತಪಾತಗಳಂತಹ ಭೀಕರ ಹೋರಾಟಕ್ಕೆ ಇಳಿಯದೆ ಲೇಖನಿ, ಸೂಕ್ಷ್ಮ – ಚುರುಕು ಬುದ್ಧಿವಂತಿಕೆಯಿಂದ ಕಾರ್ಯಸಾಧನೆ ಮಾಡಿಕೊಳ್ಳಲು ಹವಣಿಸುತ್ತಾರೆ. ಆದ್ದರಿಂದ ಇವರ ಹೋರಾಟ ಅಹಿಂಸಾತ್ಮಕ ಸ್ವರೂಪದ್ದು, ಅದು ಉಗ್ರ ರೂಪವನ್ನು ತಾಳದೆ ಶಾಂತಿಮಯವಾಗಿಯೇ ನಡೆದಿತ್ತು.

ಜಾತಿ, ಮಡಿ – ಮೈಲಿಗೆ ಮುಂತಾದವುಗಳ ಹೆಸರಿನಲ್ಲಿ ಬ್ರಾಹ್ಮಣರು ಕೆಳಜಾತಿಯವರನ್ನು ದೇವಸ್ಥಾನ, ಧಾರ್ಮಿಕ ವಿಧಿ ವಿಧಾನಗಳಿಂದ ದೂರವಿಟ್ಟಿದ್ದರು. ಆದರೆ ಕನಕದಾಸರಿಗೆ ದೇವಸ್ಥಾನದ ಒಳಗೆ ತಾನು ಹೋಗಿ, ಕೇಶವನನ್ನು ನೋಡಬೇಕು, ವ್ಯಾಸರಾಯರ ಸಭೆಯಲ್ಲಿ ನಡೆಯುವ ಜಿಜ್ಞಾಸೆಯಲ್ಲಿ ತಾನು ಪಾಲ್ಗೊಳ್ಳಬೇಕು ಎಂಬ ಉತ್ಕಟ ಬಯಕೆ ಇದ್ದಂತೆ ತೋರುತ್ತದೆ. ಕೆಳಜಾತಿಗಳು ಸಮಾಜದಲ್ಲಿ ಉನ್ನತ ಅಂತಸ್ತನ್ನು ಗಳಿಸುವ ಕಡೆಗೆ ಸಾಗುವ ಚಲನಶೀಲ ಪ್ರಕ್ರಿಯೆಯನ್ನು ' ಸಂಸ್ಕೃತಾನುಕರಣ ' ಎನ್ನುತ್ತೇವೆ ಮತ್ತು ಕೆಳಜಾತಿಯವರು ಬ್ರಾಹ್ಮಣರ ಜೀವನಕ್ರಮವನ್ನು ಅನುಕರಣೆ ಮಾಡಿ, ತಮ್ಮ ಸಾಮಾಜಿಕ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವ ಕೆಳಜಾತಿಗಳ ಪ್ರಯತ್ನವನ್ನು ' ಬ್ರಾಹ್ಮಣೀಕರಣ ' ಎನ್ನುತ್ತೇವೆ ಎಂಬ ಪರಿಕಲ್ಪನೆಯನ್ನು ಎಂ.ಎನ್. ಶ್ರೀನಿವಾಸ್‌ರವರು ೧೨ ನೀಡಿದ್ದಾರೆ. ಇಲ್ಲಿ ಕೀರ್ತನಾ ಸಾಹಿತ್ಯ ಕಾಲದಲ್ಲಿ ಸಮಾಜದ ಏರುಪೇರುಗಳಿಂದ ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾದ ಕನಕದಾಸರನ್ನೊಳಗೊಂಡಂತೆ ಹಲವರು ಉನ್ನತಸ್ಥಾನವನ್ನು ಗಿಟ್ಟಿಸಿಕೊಳ್ಳುತ್ತಿರುವ ಯತ್ನ ನಡೆಸುತ್ತಿದ್ದಾರೆ ಎಂದೆನಿಸುತ್ತದೆ.

ವಿಡಂಬನೆ:

ಸಮಾಜ ಮತ್ತು ಮನುಷ್ಯನ ವಕ್ರಗುಣಗಳನ್ನು ತಿದ್ದುವುದಕ್ಕೆ "ವಿಡಂಬನೆ " ಒಮ್ಮೊಮ್ಮೆ ಸಮರ್ಥ ಅಸ್ತ್ರವಾಗಬಲ್ಲದು ಎಂಬುದು ಹಲವರ ನಂಬಿಕೆ. ಅಲ್ಲದೆ ಈ ಮೂಲಕ ಆರೋಗ್ಯವಂತ ಸಮಾಜವನ್ನು ಸೃಷ್ಟಿಮಾಡುವುದು ವಿಡಂಬಕನ ಗುರಿಯೂ ಆಗಿರುತ್ತದೆ. " ವಿಡಂಬನೆ ಸೂಕ್ಷ್ಮಜ್ಞನ ಸಹಜ ಪ್ರವೃತ್ತಿ. ಸಮಸ್ತ ದೋಷಗಳು

ವಿಡಂಬಕನ ಬತ್ತಳಿಕೆಯ ಅಸ್ತ್ರಗಳು. ಈ ಅಸ್ತ್ರಗಳಲ್ಲಿ ರೊಚ್ಚಿನ ಕಾವಿರುತ್ತದೆ; ಹಾಸ್ಯದ ಹೊನಲಿರುತ್ತದೆ; ವ್ಯಂಗ್ಯದ ಮೊನೆಚಿರುತ್ತದೆ; ಮಾರ್ಮಿಕ ಸತ್ಯದ ಧ್ವನಿಯಿರುತ್ತದೆ, ವಿಡಂಬಕ ಕವಿಮನದವನಾಗಿದ್ದರಂತೂ ಅದಕ್ಕೊಂದು ಹೊಸ ಛಾಪು, ಹುರುಪು, ತೀಕ್ಷ್ಣತೆಯ ಸೊಗಸು ಬರುತ್ತದೆ. ಯಶಸ್ವಿ ವಿಡಂಬನೆಯಲ್ಲಿ ಕಲಾವಂತಿಕೆ, ನ್ಯಾಯಬುದ್ಧಿ, ಆತ್ಮಶೋಧನೆಯ ಗುಣ ಇರುತ್ತದೆ. " ೧೩

ಈ ಮೇಲಿನ ದೃಷ್ಟಿಕೋನದಂತೆ ಕನಕದಾಸರ ' ರಾಮಧಾನ್ಯ ಚರಿತ್ರೆ ', ನಿಜಕ್ಕೂ ಒಂದು ಉತ್ತಮವಾದ ವಿಡಂಬನ ಕಾವ್ಯ. ಸ್ವಾರ್ಥಿ, ಅಹಂಕಾರಿಗಳೂ ತನ್ನ ಮುಂದೆ ಇತರರ ಏಳಿಗೆಯನ್ನು ಎಂದಿಗೂ ಸಹಿಸುವುದಿಲ್ಲ ಎಂಬಂತೆ ಭತ್ತವು ರಾಗಿಯ ಪರವಾದ ಗೌತಮರ ಒಳ್ಳೆಯ ಮಾತುಗಳನ್ನು ಕೇಳಿ ರಾಗಿಯನ್ನು ಹೀನಾಯವಾಗಿ ತೆಗಳಿತು. ಇದರಿಂದ ಕೆರಳಿದ ರಾಗಿಯು ಭತ್ತದ ಕುಟೀಲಾತ್ಮಕ ಬುದ್ಧಿಯನ್ನು ಹಾಸ್ಯ, ವ್ಯಂಗ್ಯದ ಮೂಲಕ ಪರಿಚಯ ಮಾಡಿಸುವ ಅದರ ಮಾತುಗಳಲ್ಲಿ ವಿಡಂಬನೆಯು ಅಡಗಿದೆ ಎಂಬುದನ್ನು ಗುರುತಿಸಲು ಅವಕಾಶವಿದೆ. ಇಲ್ಲಿನ ರಾಗಿಯ ಮಾತುಗಳಲ್ಲಿ ಆತ್ಮಾಭಿಮಾನ, ಕೆಚ್ಚೆದೆ, ಹೋರಾಟ ಮನೋಭಾವ, ಸತ್ಯ, ನ್ಯಾಯ ಮುಂತಾದ ಆದರ್ಶಗಳು ಸರ್ವಕಾಲಕ್ಕೂ ಸಲ್ಲುವ ಮೌಲ್ಯಗಳಾಗಿವೆ. ಇಲ್ಲಿ ಕೇವಲ ರಾಗಿಯೊಂದು ಮೇಲ್ನೋಟಕ್ಕೆ ಕಾಣಿಸಿಕೊಳ್ಳುವ ಧಾನ್ಯ ಆದರೆ ಅದರ ವಿಡಂಬನೆ ಇರುವುದು ವರ್ಗದ ಬಗೆಗೆ ಎಂಬುದು ಸ್ಪಷ್ಟ. ಕನಕದಾಸರ ವಿಡಂಬನೆಯಲ್ಲಿ ' ಕಹಿಯಿದೆ ವಿಷವಿಲ್ಲ, ಮೊನಚಿದೆ ನೋವಿಲ್ಲ, ಹಠವಿದೆ ದ್ವೇಷವಿಲ್ಲ, ಕಾವಿದೆ ತಾಪವಿಲ್ಲ, ಕೋಪವಿದೆ ವೈರವಿಲ್ಲ, ಚುರುಕಿದೆ ಉರಿಯಿಲ್ಲ. ಎಲ್ಲಿಯೂ ಬ್ರಹ್ಮಶಿವರ ವೃತ್ತಿವಿಲಾಸರ ಮತಾಂಧತೆಯ ದೋಷ ಲೇಪವಿಲ್ಲ. ಕರ್ತವ್ಯ ಪ್ರಜ್ಞೆ, ಸತ್ಯ ನಿಷ್ಠೆ, ಲೋಕ ಕಾರುಣ್ಯ, ನೈತಿಕ ಶ್ರದ್ದೆ, ಧರ್ಮಕೋಪ ಇವು ಆ ವಿಡಂಬನೆಯ ಹಿಂದಿರುವ ಮೂಲ ಭೂತವಾದ ಪ್ರೇರಕ ಪ್ರವೃತ್ತಿ '೧೪ ಗಳಾಗಿ ಸಮಾಜವನ್ನು ಎಚ್ಚರಿಸಿದ್ದಾರೆ.

ರಾಮಭಕ್ತಿ:

ರಾಮಧಾನ್ಯ ಚರಿತ್ರೆಯಲ್ಲಿ ' ಭತ್ತ – ರಾಗಿ 'ಜಗಳದ ಪರಿಕಲ್ಪನೆಯ ಮೂಲಕ ಭತ್ತ ನಿರ್ದಯಿ, ಸತ್ವಹೀನ ಆದ್ದರಿಂದ ರಾಗಿ ಶಕ್ತಿ ಶಾಲಿ, ಸತ್ವಯುತ ಬಡವರ ಬಂಧು ಎಂದೆಲ್ಲಾ ರಾಮನಿಂದ ಹೊಗಳಿಸಿಕೊಂಡು, ಆತನಿಂದ ' ರಾಘವ 'ನೆಂಬ ಬಿರುದನ್ನು

ಪಡೆದ ರಾಗಿಗೆ ರಾಮನಕೃಪೆ, ಆಶೀರ್ವಾದ ಎಲ್ಲವೂ ದೊರೆಯಿತು. ಇಲ್ಲಿನ ರಾಮನು ದೈವಾಂಶದ ಪ್ರತಿರೂಪ, ಹಿರಿಯ ನ್ಯಾಯಮೂರ್ತಿ, ಅವನ ಎದುರಿನಲ್ಲಿ ಧಾನ್ಯಗಳ ಜಗಳ, ಪರೀಕ್ಷೆ, ನ್ಯಾಯ ತೀರ್ಮಾನವಾಗಿ ಕೊನೆಗೆ ರಾಗಿಯ ಪರವಾದ ಆತನ ಒಲವು, ಎಲ್ಲಾ ಕೀಳು ಜಾತಿ, ಬಡವ ದೀನದಲಿತ, ಕನ್ನಡ ಭಾಷೆಗೆ ಮಾನ್ಯತೆ ಸಿಕ್ಕಿದಂತಾಯಿತು. ಇಲ್ಲಿ ರಾಮನು ರಾಗಿಯನ್ನು ಮೆಚ್ಚಿದ ಮೇಲೆ ಇತರರೂ ಮೆಚ್ಚಲೇಬೇಕೆಂಬ ಧೋರಣೆ ಒಂದೆಡೆ ಕಾಣಿಸಿದರೆ, ಮತ್ತೊಂದೆಡೆ ಹಿರಿಯ, ದೈವ ಸ್ವರೂಪಿ ರಾಮನು ರಾಗಿಯನ್ನು ಒಪ್ಪಿಕೊಂಡ ಮೇಲೆ ಬೇರೆಯವರು ಒಪ್ಪಲಿ, ಬಿಡಲಿ ಅವೆಲ್ಲಾ ಸಮಾಜದಲ್ಲಿ ಲೆಕ್ಕಕ್ಕೆ ಬರುವುದಿಲ್ಲ. ಇಲ್ಲಿ ರಾಮನು ರಾಗಿಯ ಶ್ರೇಷ್ಠತೆಯನ್ನು ಎತ್ತಿ ಹಿಡಿದು, ಅದರ ಗುಣ, ಬೆಲೆ, ಗೌರವ ಎಲ್ಲವೂ ಹೆಚ್ಚಿದಂತಾಯಿತು. ಆದ್ದರಿಂದ ಇದು " 'ರಾಮ' ಧಾನ್ಯ ಚರಿತ್ರೆ "ಎಂಬ ಶೀರ್ಷಿಕೆ ಈ ಕಾವ್ಯಕ್ಕೆ ಭೂಷಣಪ್ರಾಯವಾಗಿದೆ. ಒಟ್ಟಿನಲ್ಲಿ ಸಮಾಜದ ಓರೆ – ಕೋರೆಗಳನ್ನು ತಿದ್ದುವುದಕ್ಕೆ ಸಾಕ್ಷಾತ್ ಹರಿಯ ರೂಪವಾದ ಶ್ರೀ ರಾಮರನ್ನು ನೇರವಾಗಿ ಬಳಸಿಕೊಂಡು, ಪಂಡಿತ ಪಾಮರೋತ್ತರನ್ನೂ ಬೆರಗುಗೊಳಿಸುವಂತೆ ರಚಿಸಿದ ಈ ಕಾವ್ಯ, ದೈವ ಬಲವನ್ನು ಸಂಪಾದಿಸಿದ ರಾಗಿಯ ಶ್ರೇಷ್ಠತೆಯನ್ನು ಸಾರಿ ಹೇಳುವ ಒಂದು ಅತ್ಯುತ್ತಮ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ.

ಅಡಿ ಟಿಪ್ಪಣಿಗಳು

೧. ರಾಮಧ್ಯಾನ ಚರಿತ್ರೆ : ಸಂ.ದೇ.ಜವರೇಗೌಡ, ಶ್ರೀ ಕನಕದಾಸ ೪ನೇಯ ಶತಮಾನೋತ್ಸವ ರಾಜ್ಯ ಸಮಿತಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು. ಪು.ಸಂ.೨೬, ಪದ್ಯ ಸಂಖ್ಯೆ – ೪೨.

೨. ರಾಮಧ್ಯಾನ ಚರಿತ್ರೆ : ಸಂ.ದೇ.ಜವರೇಗೌಡ, ಶ್ರೀ ಕನಕದಾಸ ೪ನೇಯ ಶತಮಾನೋತ್ಸವ ರಾಜ್ಯ ಸಮಿತಿ, ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು ಪು.ಸಂ.೨೮, ಪದ್ಯ ಸಂಖ್ಯೆ – ೫೧.

೩. ಕನಕ ಸಾಹಿತ್ಯ ದರ್ಶನ ಸಂಪುಟ–೧ – ಸಂ.ಡಾ॥ ದೇ.ಜವರೇಗೌಡ, ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು, ೧೯೯೦, ಪು.ಸಂ.೧೦೮.

೪. ಕನಕ ಸಾಹಿತ್ಯ ದರ್ಶನ: ಸಂ.ಡಾ॥ ದೇ.ಜವರೇಗೌಡ, ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು, ೧೯೯೦, ಪು.ಸಂ.೧೧೦.

೫. ಪುರಂದರ ಸಾಹಿತ್ಯದರ್ಶನ ಸಂಪುಟ–೧ : ಸಂ. ಸಾ.ಕೃ.ರಾಮಚಂದ್ರರಾವ್, ಶ್ರೀ ಪುರುಂದರ ೫ನೇ ಶತಮಾನೋತ್ಸವ ಸಂದರ್ಭ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು–೧೯೮೫. ಪು.ಸಂ. ೧೩೭

೬.. ಬಸವಣ್ಣನವರ ವಚನ ಸಂಪುಟ–೧ : ಸಂ. ಡಾ॥ ಎಂ.ಎಂ.ಕಲಬುರ್ಗಿ, ಬೆಂಗಳೂರು, ೧೯೯೩.

೭. ಕನಕ ಸಾಹಿತ್ಯ ದರ್ಶನ, ಸಂಪುಟ–೧ : ಸಂ. ಡಾ॥ ದೇ.ಜವರೇಗೌಡ, ಶ್ರೀಮೀರಾ ಪ್ರಿಂಟರ್ಸ್, ಮೈಸೂರು, ೧೯೯೦, ಕನಕದಾಸರ ರಾಮಧಾನ್ಯ ಚರಿತ್ರೆ – ಜಿ.ಕೆ. ರಾಜೇಗೌಡ, ಪು.ಸಂ.೫೭೧

೮. ಕನಕ ಸಾಹಿತ್ಯ ದರ್ಶನ, ಸಂಪುಟ–೧ : ಸಂ.ಡಾ॥ ದೇ.ಜವರೇಗೌಡ, ಶ್ರೀಮೀರಾ ಪ್ರಿಂಟರ್ಸ್, ಮೈಸೂರು, ೧೯೯೦, ಕನಕದಾಸರಲ್ಲಿ ಪೌರಾಣಿಕ ಪ್ರಜ್ಞೆ – ಮಳಲಿ ವಸಂತಕುಮಾರ್.

೯. ಕನಕ ಕಿರಣ : ಸಂ.ಕಾ.ತ.ಚಿಕ್ಕಣ್ಣ, ಕಾಳಿದಾಸ ಸಾಂಸ್ಕೃತಿಕ ಸಂಘ, ಬೆಂಗಳೂರು, ೧೯೮೨ 'ರಾಮಧಾನ್ಯ ಚರಿತ್ರೆ 'ಒಂದು ಅಣುಕು ಮಹಾಕಾವ್ಯ' – ಡಾ॥ ದೇ.ಜ.ಗೌ, ಪು.ಸಂ.೮೫.

೧೦. ಕನಕ ಸಾಹಿತ್ಯದರ್ಶನ ಸಂಪುಟ–೧ : ಸಂ.ಡಾ॥ದೇ.ಜವರೇಗೌಡ, ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು, ೧೯೯೦, 'ಕನಕದಾಸರಲ್ಲಿ ಬಂಡಾಯ ಧ್ವನಿ' – ಡಾ॥ ಹಿ.ಶಿ. ರಾಮಚಂದ್ರೇಗೌಡ, ಪು.ಸಂ.೬೬೦

೧೧. ಸಮಗ್ರ ದಾಸ ಸಾಹಿತ್ಯ ಸಂ.೫, ಭಾಗ–೧ : ಸಂ.ಪ್ರೊ॥ ಸುಧಾಕರ್, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ಪು.ಸಂ.೧೮೯. (ಕನಕದಾಸರ ಕೀರ್ತನೆಗಳು)

೧೨.ಭಾರತೀಯ ಸಮಾಜ (ಸಂರಚನೆ ಮತ್ತು ಪರಿವರ್ತನೆ) : ಚ.ನ.ಶಂಕರ್ ರಾವ್, ಜೈಭಾರತ್ ಪ್ರಕಾಶನ, ಮಂಗಳೂರು, ೨೦೦೫, ಪು.ಸಂ.೨೭೪.

೧೩. ಕನಕ ಸಾಹಿತ್ಯ ದರ್ಶನ ಸಂಪುಟ–೧ : ಸಂ.ದೇ.ಜವರೇಗೌಡ, ಶ್ರೀಮೀರಾ ಪ್ರಿಂಟರ್ಸ್, ಮೈಸೂರು, ೧೯೯೦, ' ಕನಕದಾಸ ಕೃತಿಗಳಲ್ಲಿ ವಿಡಂಬನೆ ' – ಡಾ॥ ಪದ್ಮಾಶೇಖರ್, ಪುಟ ಸಂ.೬೨೮.

೧೪. ರಾಮಧಾನ್ಯ ಚರಿತ್ರೆ : ಸಂ.ದೇ.ಜವರೇಗೌಡ, ಶ್ರೀ ಕನಕದಾಸ ೪ನೇ ಶತಮಾನೋತ್ಸವ ರಾಜ್ಯ ಸಮಿತಿ, ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು ಪೀಠಿಕೆ, ಪು.ಸಂ.೧೦.

ಅಧ್ಯಾಯ – ೫

<u>ಉಪ ಸಂಹಾರ</u>

ಮಧ್ಯಕಾಲೀನ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ತಿರುವನ್ನು ಕೊಟ್ಟ ದಾಸ ಸಾಹಿತ್ಯದಲ್ಲಿ ಕನಕದಾಸರ ಸಾಹಿತ್ಯ ಶಕ್ತಿಯನ್ನು ಇಂದು ವಿಭಿನ್ನ ದೃಷ್ಟಿಕೋನದಿಂದ ನೋಡುವ ಅಗತ್ಯವಿದೆ. ಅದರಂತೆ,

'ರಾಮಧಾನ್ಯ ಚರಿತೆ' ಯಲ್ಲಿನ ರಾಗಿಯ ಪ್ರಸಂಗಕ್ಕೂ ಕನಕದಾಸರ ಜೀವನಕ್ಕೂ ನಿಕಟವಾದ ಹೋಲಿಕೆಯಿರುವುದನ್ನು ಕಾಣಬಹುದು. ಹಿಂದುಳಿದ ವರ್ಗದಲ್ಲಿ ಹುಟ್ಟಿ, ಅವರ ಏಳಿಗೆಗಾಗಿ ಪರಿಶ್ರಮಿಸಿದ ಕನಕದಾಸರ ಧೈರ್ಯ, ಸಾಹಸ ಮೆಚ್ಚತಕ್ಕದ್ದು. ಏಕೆಂದರೆ ಶೋಷಕರ ವಿರುದ್ಧ ಅವರು ತಾಳಿದ ಬಂಡಾಯ ಧ್ವನಿ ಏಕಾಂಗಿತನದಿಂದ ಕೂಡಿದುದು. ಅದರಂತೆ ಇವರ ಕ್ರಾಂತಿ ರೂಪ ದೀರ್ಘ ಪ್ರಚಾರ ಪಡೆಯದೆ, ಗುಪ್ತವಾಗಿ ಜನಜೀವನದ ನಡುವೆಯೇ ಇತ್ತು. ಅವಕಾಶ ದೊರೆತಾಗ ಮಾತ್ರ ಮನಸ್ಸಿನ ನೋವನ್ನು ಸೂಕ್ತ ರೀತಿಯಲ್ಲಿ ಹೊರಹಾಕಿದ್ದಾರೆ ಎಂಬುದಕ್ಕೆ ಸಾಕ್ಷಿ ಎಂಬಂತೆ ಅವರ ಈ ಕೃತಿ ಮೂಡಿಬಂದಂತಿದೆ. ೧

ಜಾತೀಯತೆ ಹಾಗೂ ಅಸ್ಪೃಶ್ಯತೆ ಈ ದೇಶಕ್ಕೆ ಸಾಮಾಜಿಕ ಪಿಡುಗು ಇಲ್ಲವೆ ಶಾಪವಿದ್ದಂತೆ. ಇದರ ಅನುಸರಣೆಯಿಂದ ದೇಶದ ಏಕತೆಗೆ ಮಾರಕವಾಗಿ ಅದರ ಭವಿಷ್ಯಕ್ಕೆ ಪೆಟ್ಟಾಗುತ್ತದೆ. ಜಾತೀಯತೆಯಿಂದ ಹಿಂದೂಧರ್ಮದಲ್ಲಿ ಒಡಕು ಮೂಡಿ, ಸಮಾಜ ವ್ಯವಸ್ಥೆ ಛಿದ್ರವಾಗುತ್ತಿದ್ದ ಸಮಯದಲ್ಲಿ ಬಸವಣ್ಣಾದಿಗಳು ನಡೆಸಿದ ಕ್ರಾಂತಿ ಐತಿಹಾಸಿಕ ಪ್ರಸಿದ್ಧವಾದುದು. ನಂತರ ಕೀರ್ತನಾ ಸಾಹಿತ್ಯ ಕಾಲದಲ್ಲಿ ಸಾಮಾಜಿಕ ಲೋಪದೋಷಗಳನ್ನು ಬಯಲಿಗೆಳೆದು ವಿಡಂಬನೆಯ ಮೂಲಕ ಬಂಡಾಯ ಧ್ವನಿ ಎತ್ತಿದ ಕನಕದಾಸರ 'ರಾಮಧಾನ್ಯ ಚರಿತ್ರೆ' ಪೌರಾಣಿಕ ಮಾರ್ಗದಲ್ಲಿ, ಜನಪದ ಶೈಲಿಯಲ್ಲಿ ಸಾಗುವ ಒಂದು ರೂಪಕ ಕವಿತೆ. ಇಲ್ಲಿ ರಾಮ ಮಹಿಮೆಯ ಮೂಲಕ ಹಿಂದುಳಿದವರ, ದೀನ–ದಲಿತರ, ಬಡವರ ಅಂತರಾಳದ ನೋವನ್ನು ಸಾಹಿತ್ಯದಲ್ಲಿ ಮೂಡಿಸಿರುವ ಕನಕದಾಸರ ಕುಶಲತೆ ನಿಜಕ್ಕೂ ಜನತೆಗೆ ಅಚ್ಚರಿ ಮೂಡಿಸುವಂತದ್ದು, ಅಲ್ಲದೆ ಹೆಚ್ಚು ಜನಪರಿಚಿತವಾದ ಕಾವ್ಯವೂ ಹೌದು.

ವಿಶ್ವದಲ್ಲಿ ಬಹು ದೀರ್ಘಕಾಲದಿಂದಲೂ ' ವರ್ಣವ್ಯವಸ್ಥೆ ' ಬೃಹದಾಕಾರವಾಗಿ ಬೆಳೆದಿದೆ ಎಂಬುದು ಇತಿಹಾಸಗಳಿಂದ ನಮಗೆ ಸ್ಪಷ್ಟವಾಗುತ್ತದೆ. ಬಿಳಿ ವರ್ಣದಿಂದ ಕೂಡಿದವರು ತಮ್ಮನ್ನು ತಾವು ಶ್ರೇಷ್ಠರೆಂದು ಕರೆದುಕೊಂಡು, ಕಪ್ಪುಬಣ್ಣದವರನ್ನು ಕನಿಷ್ಠರೆಂದು ಪರಿಗಣಿಸಿ, ಜನಾಂಗೀಯ ದ್ವೇಷದ ಹಿನ್ನಲೆಯಲ್ಲಿ ಅವರನ್ನು ತೆಗಳಿ, ದೂರ ಇಟ್ಟರು. ಕಪ್ಪುವರ್ಣದವರನ್ನು ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನಗಳಿಂದ ವಂಚಿತರನ್ನಾಗಿಸಿದರು. ಅಲ್ಲದೆ ಅವರನ್ನು ಅಪಹರಿಸಿ, ಗುಲಾಮಗಿರಿಯಲ್ಲಿರಿಸಿ ಹಿಂಸಿಸುತ್ತಿದ್ದರು, ಇಲ್ಲವೆ ಮಾರಾಟ ಮಾಡುತ್ತಿದ್ದರು.

ಈ ಹಿನ್ನಲೆಯಿಂದ ' ರಾಮಧಾನ್ಯ ಚರಿತ್ರೆ ' ಯನ್ನು ಗಮನಸಿದರೂ ನಮಗೆ ಸೂಕ್ತ ಆಧಾರಗಳು ದೊರೆಯುವಂತಿದೆ. ಇಲ್ಲಿನ ಅಕ್ಕಿಯ ಬಣ್ಣ 'ಬಿಳಿ', ರಾಗಿಯ ಬಣ್ಣ 'ಕಪ್ಪು' – ಅದರಂತೆ ಅಕ್ಕಿ ತಾನು ಶ್ರೇಷ್ಠ ಎಂದು ಮೆರೆದು ರಾಗಿಯನ್ನು ತುಚ್ಚವಾಗಿ ಹೀಯಾಳಿಸಿತು. ಇಲ್ಲಿ ರಾಗಿಯ ವಿಜಯವು 'ಕಪ್ಪುವರ್ಣದವರ' ಪರವಾಗಿಯೂ ಸ್ವೀಕರಿಸಲು ಸಾಧ್ಯತೆಗಳಿವೆಯೆಂಬಂತೆ ಕನಕದಾಸರ ಈ ಕೃತಿಯನ್ನು ಸೂಕ್ಷ್ಮವಾಗಿ ಗಮನಿಸಬಹುದು.

ನಮ್ಮ ಸಮಾಜದಲ್ಲಿ ಕಪ್ಪು ವರ್ಣದವರನ್ನು ಕೀಳಾಗಿ ಕಾಣುವ ಮನೋಭಾವವಿದೆ. ಮನುಷ್ಯರ ಬಣ್ಣವನ್ನು ನೋಡಿ ಅವನನ್ನು ಅಳೆಯಬಾರದು. ಬಣ್ಣಕ್ಕಿಂತ ಆ ವ್ಯಕ್ತಿಯ ಗುಣಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ' ಬೆಳ್ಳಗಿರುವುದೆಲ್ಲಾ ಹಾಲಲ್ಲ ' ಎಂಬಂತೆ, ನೋಡಲು ಬೆಳ್ಳಗೆ – ಸುಂದರವಾಗಿರುವವರೆಲ್ಲ ಉತ್ತಮ ಗುಣವನ್ನು ಹೊಂದಿರುತ್ತಾರೆ ಎಂಬುದು ಸತ್ಯವೂ ಅಲ್ಲ. ಆದ್ದರಿಂದ ಮನುಷ್ಯನ ಅಂತರಂಗ ಸೌಂದರ್ಯವೇ ಬಹಿರಂಗ ಸೌಂದರ್ಯಕ್ಕಿಂತ ಮೇಲು ಎಂಬುದನ್ನು ಎಲ್ಲರು ತಿಳಿದಿರಬೇಕು. ಅದರಂತೆ ರಾಗಿಯು ಮೇಲ್ನೋಟಕ್ಕೆ ಕಪ್ಪಿದ್ದರೂ ಅದು, ಸತ್ವಯುತ–ಶಕ್ತಿಶಾಲಿ–ಪುಷ್ಠಿದಾಯಕವಾಗಿ, ಎಲ್ಲಾ ಕಾಲಗಳಲ್ಲಿಯೂ ಎಲ್ಲರನ್ನೂ ರಕ್ಷಿಸುವಂತಹ ಬಡವರ ಬಂಧುವಾಗಿದೆ. ಆದರೆ ಅಕ್ಕಿ–ಬಿಳಿ, ಸುಂದರ, ಆಕರ್ಷಕತೆಯಿಂದ ಕೂಡಿದೆ ಆದರೆ ಒಳಗೆ ಟೊಳ್ಳು, ಸತ್ವಹೀನ !.

ರಾಮನ ಮುಂದೆ 'ಭತ್ತ-ರಾಗಿ'ಗಳ ಜಗಳ, ವಾದವಿವಾದಗಳು ಈಗಿನ ಪ್ರಸ್ತುತ ನ್ಯಾಯಾಲಯವನ್ನು ಹೋಲುವಂತೆ ಚಿತ್ರಿಸಿದ್ದಾರೆ. ಮುಖ್ಯನ್ಯಾಯಾಧೀಶನ ಸ್ಥಾನದಲ್ಲಿ 'ಶ್ರೀರಾಮ' ರನ್ನು ಊಹಿಸಿಕೊಳ್ಳಬಹುದು. ಅಪರಾಧಿ, ನಿರಪರಾಧಿಗಳು ಕಟಕಟೆಯ ಎರಡು ಬದಿಗಳಲ್ಲಿ ನಿಂತಿದ್ದು, ಅವರುಗಳ ಪರ, ವಿರೋಧ - ವಾದಿಸುವ ವಕೀಲರು ತಮ್ಮ ತಮ್ಮ ವಾದಗಳನ್ನು ಮಂಡಿಸುತ್ತಾರೆ. ಆದರೆ ಇಲ್ಲಿ 'ಅಕ್ಕಿ-ರಾಗಿಗಳು' ಮೇಲು-ಕೀಳು ಸ್ಥಾನದಲ್ಲೆಂಬಂತೆ ನಿಂತು ತಮ್ಮ ವಾದ ಪ್ರತಿವಾದಗಳನ್ನು ತಾವೇ ವಕೀಲರಂತೆ ಸಮರ್ಥವಾಗಿ ಮಂಡಿಸಿದರು. ಚಾತುರ್ಯದ ಎರಡು ವಸ್ತುಗಳು ಮನುಷ್ಯರಂತೆ ವಾದಿಸುವ ವೈಖರಿ ನಿಜಕ್ಕೂ ಅದ್ಭುತವಾಗಿದೆ. ಇವರ ಮಾತುಗಳನ್ನು ಸಂಪೂರ್ಣವಾಗಿ ಗಮನಿಸಿ ತೀರ್ಪನ್ನು ಕಾಯ್ದಿರಿಸಿ, ಆರು ತಿಂಗಳ ಕಾಲ ಸಮನಾಗಿ ಇಬ್ಬರನ್ನೂ ಸೆರೆವಾಸದಲ್ಲಿರಿಸಿ, ನಂತರ ಆಧಾರ ಸಹಿತ ' ರಾಗಿ ' ಯೇ ಉತ್ತಮ ಧಾನ್ಯವೆಂದು ರಾಮರು ಒಪ್ಪಿ ತನ್ನ ಹೆಸರನ್ನೇ ರಾಗಿಗೆ ಕೊಟ್ಟನು. ಇದು ನಿರ್ಲಕ್ಷ್ಯಕ್ಕೆ ಒಳಗಾಗಿರುವ ಶ್ರೀಸಾಮಾನ್ಯನ ವಿಜಯವಾಗಿದೆ ಎಂದು ಹೇಳುಬಹುದು. ಸಾಮಾಜಿಕವಾಗಿ ಕಲಹವಿರುವ ಈ ಸಂದರ್ಭದಲ್ಲಿ ಕನಕದಾಸರು ಅಂದು ಪ್ರತಿಪಾದಿಸಿರುವ ಸಮನ್ವಯ ಮನೋಭಾವವನ್ನು ಇಂದು ವ್ಯಕ್ತಪಡಿಸುವುದು ಅಗತ್ಯವಿದೆ. ಈ ಹಿನ್ನಲೆಯಲ್ಲಿ ಅಧ್ಯಯನ ಉದ್ದೇಶ ಸಾಗಿ ಬಂದಿದೆ.

ಒಟ್ಟಿನಲ್ಲಿ ಕನಕದಾಸರು ತಮ್ಮ ಸಮಕಾಲೀನ ಒಟ್ಟು ಸಮಾಜದ ಎಲ್ಲಾ ನೆಲೆಗಳ ಪ್ರಾಮಾಣಿಕ ಅನ್ವೇಷಣೆಗೆ ತೊಡಗಿ, ಆ ಎಲ್ಲಾ ನೆಲೆಗಳ ಸ್ವರೂಪವನ್ನು ಒಟ್ಟು ಸಾಂಸ್ಕೃತಿಕ ಹಾಗೂ ಮಾನವೀಯ ಪ್ರಜ್ಞೆಯ ಹಿನ್ನಲೆಯಲ್ಲಿ ತಮ್ಮ ಪ್ರತ್ಯಕ್ಷ ಅನುಭವ-ಚಿಂತನೆ, ಕಳಕಳಿ-ಕಾಳಜಿಗಳ ಮೂಲಕ ಒಂದು ಘನವಾದ ಉದ್ದೇಶಕ್ಕಾಗಿ ಶೋಧಿಸಿಕೊಟ್ಟಿರುವುದರಿಂದ, ಅವರ ಈ ಕೃತಿಯು ಇಂದಿಗೂ ಪ್ರಸ್ತುವೆನಿಸುತ್ತವೆ.

ಕನಕದಾಸರ ರಾಮಧಾನ್ಯ ಚರಿತೆಯು, ೧೫ನೇ ಶತಮಾನದ ಒಂದು ಸಾಮಾಜಿಕ ಆಂದೋಲನದ ಜೀವಂತ ಪ್ರತಿನಿಧಿಯಾಗಿ ನಿಲ್ಲುತ್ತದೆಂಬುದರಲ್ಲಿ ಸಂದೇಹವಿಲ್ಲ. ಕನಕದಾಸರ ಸಾಮಾಜಿಕ ಚಿಂತನೆಯು ಇಂದಿನ ಸಮಾಜಕ್ಕೆ ಮಾರ್ಗದರ್ಶನವನ್ನು ನೀಡುತ್ತದೆ. ವರ್ಣ, ವರ್ಗ, ಜಾತಿ-ಸಂಘರ್ಷ, ಅನೀತಿ,

ಪಕ್ಷಪಾತ-ಇತ್ಯಾದಿಗಳಿಂದ ತತ್ತರಿಸುತ್ತಿದ್ದ ಸಮಾಜಕ್ಕೆ ಸಮಾನತೆ, ಮಾನವೀಯತೆ ಮತ್ತು ಹೊಂದಾಣಿಕೆಗಳು ಅವಶ್ಯಕವೆನಿಸಿವೆ. ಈ ಹಿನ್ನಲೆಯಲ್ಲಿ ಕನಕದಾಸರು ತಮ್ಮ ಸಮಕಾಲೀನ ಸಮಾಜದ ಒಟ್ಟು ನೆಲೆಗಳನ್ನು ಪ್ರಾಮಾಣಿಕವಾಗಿ ಗಮನಿಸಿ, ಅದರೊಂದಿಗೆ ತಮ್ಮ ಅನುಭವಗಳನ್ನು ವ್ಯಕ್ತಪಡಿಸುವ ಅವರ ಸಾಹಿತ್ಯದರ್ಶನ ಇಂದಿಗೆ ಪ್ರಸ್ತುತವೆನಿಸಿದೆ.

ಕನಕದಾಸರು ಕ್ರಿ.ಶಿ.೧೫ನೇ ಶತಮಾನದಲಿಯೇ "ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು"ಎಂಬ ಸತ್ವಸಾರವನ್ನು ತಮ್ಮ ನಿಲುವನ್ನಾಗಿ ಸ್ವೀಕರಿಸಿ ಕೊಂಡಿದ್ದಾರೆ ಎನ್ನಬಹುದು. ತಾರತಮ್ಯ, ಭೇದ-ಭಾವ, ಮಾನವತೆಗೆ ಮಾರಕ ಎಂಬುದು ಅವರ ಬಾಳಿನ ಸೂತ್ರ, ಸಮಾಜದಲ್ಲಿ ಬೇರು ಬಿಟ್ಟಿರುವ ಮೇಲು-ಕೀಳು, ಶ್ರೀಮಂತ-ಬಡವ ಎಂಬ ವರ್ಣ - ವರ್ಗ ತಾರತಮ್ಯ ಹೋಗಬೇಕು ಎಂಬುದೇ ಅವರ ಗುರಿಯಾಗಿತ್ತು. ಅವರ ರಾಮಧಾನ್ಯ ಚರಿತ್ರೆ ಇದೇ ನಿಲುವನ್ನು ಪ್ರತಿಪಾದಿಸುತ್ತದೆ.

" ಕನಕದಾಸರು ಯಾವುದೇ ಒಂದು ಮತಕ್ಕೆ ಕಟ್ಟುಬಿದ್ದವರಲ್ಲ. ಎಲ್ಲ ಮತಧರ್ಮಗಳ ಒಳಿತನ್ನು ಸ್ವೀಕರಿಸಿ ಸ್ವತಂತ್ರ ವ್ಯಕ್ತಿತ್ವವನ್ನು ಬೆಳಿಸಿಕೊಂಡು ಬಾಳಿದವರು, ಉಳಿದವರಿಗೂ ಹಾಗೆ ಬಾಳುವಂತೆ ಹೇಳಿದವರು. ಜನಹಿತ, ಬಾಳಿನುದ್ದಕ್ಕೂ ಜೀವ ತೇದವರು. ತಮ್ಮ ವಿಚಾರಧಾರೆಯ ಸನ್ನೆಗೋಲಿನಿಂದ ಸುಲಿಗೆಗೊಳಗಾದ ಶೋಷಿತರನ್ನು ಮೇಲೆತ್ತಲು ಪ್ರಯತ್ನಿಸಿದಂತೆಯೇ (ಜಾತಿ ಜಾತಿಗಳ ತಿರಸ್ಕಾರರಾದವರಿಗೆ ಪುರಸ್ಕಾರ ಕೊಟ್ಟವರು ಕನಕದಾಸರು ಎಂಬ ಬೇಲೂರು ಕೇಶವ ದಾಸರ ಮಾತು ಸ್ಮರಣೀಯ) ಸುಲಿಗೆ ಮಾಡುವ ಶೋಷಕರಿಗೆ ಶಂಕರ ರಾಮಾನುಜ ಮದ್ವಧರ್ಮಗಳಿಗಿಂತ ಮಾನವಧರ್ಮ ದೊಡ್ಡದು ಎಂದು ಹೇಳಿ, ಅವರ ಕಣ್ಣಿನ ಮೇಲಿನ ಪೊರೆ ತೆಗೆಯಲು ಶಸ್ತ್ರಚಿಕಿತ್ಸೆಗೆ ಕೈ ಹಾಕಿದವರು ಅದಕ್ಕೆ ಅವರ ' ರಾಮಧಾನ್ಯ ಚರಿತ್ರೆ ' ಸಾಕ್ಷ್ಯ ಒಂದಗಿಸುವಂತಿದೆ ". ೨

ಹೀಗೆ ಕನಕದಾಸರ ರಾಮಧಾನ್ಯ ಚರಿತೆಯ ಅಧ್ಯಯನ, ನಮ್ಮ ಸಮಕಾಲೀನ ಸಾಮಾಜಿಕ ಹಾಗೂ ಸಾಹಿತ್ಯಿಕ ಸಂದರ್ಭದ ಹಿನ್ನಲೆಯಲ್ಲಿಯೂ ಹೊಸ ಹೊಸ ಅರ್ಥವನ್ನು ವ್ಯಕ್ತಪಡಿಸುತ್ತಲೇ ಅದರ ಹೆಚ್ಚಿನ ಹುಡಕಾಟಕ್ಕೆ ನಮ್ಮನ್ನು ಪ್ರೇರೇಪಿಸುತ್ತದೆ. 'ಭತ್ತ-ರಾಗಿ' ಗಳ ಜಗಳದ ಸರಳ ಕಥೆಯನ್ನು ತುಳಿತಕ್ಕೊಳಗಾದ ಜನತೆಯ ಸಾಮಾಜಿಕ ಪ್ರತಿಭಟನೆಯ ಧ್ವನಿಯಾಗಿ ರೂಪಿಸಿರುವ ಹಿನ್ನಲೆಯನ್ನು ನೋಡಿದಾಗ, ' ವರ್ಗ-ವರ್ಣ-ಜಾತಿ-ಭಾಷೆ ' ಸಂಘರ್ಷ ಸ್ವರೂಪವನ್ನು ಕಾಣಬಹುದು. ಇದು ಕನಕದಾಸರ ಸಾಮಾಜಿಕ ಚಿಂತನೆಯ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ.

ಅಡಿ ಟಿಪ್ಪಣಿಗಳು

೧.	ಕನಕ ದರ್ಶನ	–	ದೇಜಗೌ, ತನುಮನು ಪ್ರಕಾಶನ, ಮೈಸೂರು, ೨೦೦೩.
೨.	ಸಮಗ್ರ ದಾಸ ಸಾಹಿತ್ಯ (ಕನಕದಾಸರ ಕೀರ್ತನೆಗಳು ಭಾಗ–೨)	–	ಸಂ. ಪ್ರೊ॥ ಸುಧಾಕರ್, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್. (ಪ್ರಸ್ತಾವನೆ ನುಡಿ)

ಪರಾಮರ್ಶನ ಗ್ರಂಥಗಳು

೧. ಹರಿದಾಸ ಆಂದೋಲನ – ಡಾ॥ ಎನ್.ಕೆ.ರಾಮಶೇಷನ್, ಮಿತ್ರ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು.

೨. ಶ್ರೀಕನಕದಾಸರು – ಕೊರಟಿ ಶ್ರೀನಿವಾಸರಾವ್, ಭಾಗ್ಯಲಕ್ಷ್ಮಿ ಪ್ರಕಾಶನ, ಬೆಂಗಳೂರು. ೧೯೯೨.

೩. ವಚನ ಸಾಹಿತ್ಯ:ವೈಚಾರಿಕ ಅಧ್ಯಯನ – ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭.

೪. ದಾಸ ಸಾಹಿತ್ಯ ದರ್ಶನ – ಸಂ. ಎಚ್ಚೆಸ್ಕೆ, ಮಂಗಳಭಾರತಿ ಪ್ರಕಾಶನ, ಮೈಸೂರು, ೧೯೮೪.

೫. ಕನಕದರ್ಶನ – ದೇಜಗೌ, ತನುಮನು ಪ್ರಕಾಶನ, ಮೈಸೂರು, ೨೦೦೩.

೬. ಕನಕ ಸಾಹಿತ್ಯದರ್ಶನ ಸಂಪುಟ–೧ – ಸಂ. ಡಾ॥ ದೇ.ಜವರೇಗೌಡ, ಶ್ರೀ ಮೀರಾ ಪ್ರಿಂಟರ್ಸ್, ಮೈಸೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೦.

೭. ಕನಕ ಸಾಹಿತ್ಯ ದರ್ಶನ ಸಂಪುಟ–೨ – ಸಂ. ಡಾ॥ ಸಾ.ಶಿ.ಮರುಳಯ್ಯ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ೧೯೯೧.

೮. ವಚನಾನುಶೀಲನ – ಡಾ॥ ಎಸ್.ವಿದ್ಯಾಶಂಕರ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೮೯.

೯. ಹರಿಭಕ್ತ ಕನಕದಾಸರ ಪದಗಳು – ಸಂ.ಕೆ.ಆರ್.ಕೆ.ಮೂರ್ತಿ, ಜನಪದ ಪ್ರಕಾಶನ, ಬೆಂಗಳೂರು.

೧೦. ಸರ್ವಜ್ಞನ ಪದಗಳು – ಸಂ. ಚನ್ನಪ್ಪ ಉತ್ತಂಗಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೦೪.

೧೧. ಕನಕ ಕಿರಣ – ಸಂ.ಕಾ.ತ.ಚಿಕ್ಕಣ್ಣ, ಬೆಂಗಳೂರು, ೧೯೮೨.

೧೨. ರಾಮಧಾನ್ಯ ಚರಿತ್ರೆ – ಸಂ.ದೇ.ಜವರೇಗೌಡ

೧೩. ಭಾರತೀಯ ಸಮಾಜ (ಸಂರಚನೆ –ಮತ್ತು ಪರಿವರ್ತನೆ) – ಚ.ನ.ಶಂಕರ್‌ರಾವ್, ಜೈಭಾರತ್ ಪ್ರಕಾಶನ, ಮಂಗಳೂರು. ೨೦೦೪

೧೪. ಬಸವ ವಚನಾಮೃತ – ಡಾ। ಎಲ್. ಬಸವರಾಜು, ಬಸವ ಸಮಿತಿ, ಬೆಂಗಳೂರು, ೧೯೮೯.

೧೫. ಕನಕದಾಸರ ಜನಪ್ರಿಯ ಕೀರ್ತನೆಗಳು – ಸಂ.ಹೊ.ರಾ.ಸತ್ಯನಾರಾಯಣರಾವ್, ಅಂಕಿತ ಪುಸ್ತಕ ಪ್ರಕಾಶಕರು, ಬೆಂಗಳೂರು, ೨೦೦೩.

೧೬. ಶರಣ ಸೌರಭ – ಟಿ.ಆರ್.ಮಹಾದೇವಯ್ಯ, ಭಾಗ್ಯರವಿ ಪ್ರಕಾಶನ, ಬೆಂಗಳೂರು, ೧೯೮೮.

೧೭. ಪುರಂದರ ಸಾಹಿತ್ಯದರ್ಶನ – ಸಂಪುಟ – ೧ – ಸಾ.ಕೃ.ರಾಮಚಂದ್ರರಾವ್, ಶ್ರೀಪುರಂದರ ೫ನೇ ಶತಮಾನೋತ್ಸವ ಸಂದರ್ಭ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೧೮. ಬಸವಣ್ಣನವರ ವಚನ ಸಂಪುಟ–೧ – ಸಂ.ಡಾ॥ ಎಂ.ಎಂ.ಕಲಬುರ್ಗಿ, ಬೆಂಗಳೂರು, ೧೯೯೩.

೧೯. ಚೆನ್ನಬಸವಣ್ಣನವರ ವಚನ ಸಂಪುಟ–೨ – ಸಂ.ಬಿ.ವಿ. ಮಲ್ಲಾಪುರ, ಈಸ್ಟರ್ನ್ ಪ್ರೆಸ್, ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ೧೯೯೩.

೨೦. ಸಮಗ್ರ ದಾಸ ಸಾಹಿತ್ಯ ಸಂಪುಟ–೫, ಭಾಗ–೨ (ಕನಕದಾಸರ ಕೀರ್ತನೆಗಳು ಭಾಗ–೨) – ಪ್ರೊ ॥ ಸುಧಾಕರ, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್.

೨೧. ಭಕ್ತಿ ಭಂಡಾರಿ ಬಸವಣ್ಣನವರು – ಎಂ.ಆರ್.ಶ್ರೀನಿವಾಸಮೂರ್ತಿ, ಸತ್ಯಶೋಧನ ಪ್ರಕಟಣಾ ಮಂದಿರ ಕೋಟೆ, ಬೆಂಗಳೂರು, ೧೯೬೨.

೨೨. ವಚನ ಸಾಹಿತ್ಯ ಸಂಗ್ರಹ – ಎಸ್.ಎಸ್.ಭೂಸನೂರ ಮಠ, ಬೆಳಗಾವಿ, ೧೯೬೪.

೨೩. ವಚನ ಧರ್ಮಸಾರ – ಎಂ.ಆರ್.ಶ್ರೀನಿವಾಸಮೂರ್ತಿ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೫.

೨೪. ಬಸವ ಪುರಾಣ – ಡಾ॥ ಆರ್.ಸಿ.ಹಿರೇಮಠ – ಪ್ರಕಾಶಕರು, ಶ್ರೀ ಮುರುಘಾಮಠ ಶ್ರೀ ಗುರುಮೃತ್ಯುಂಜಯ ಮಹಾಸ್ವಾಮಿ, ಧಾರವಾಡ, ೧೯೭೧.

೨೫. ಮಹಾತ್ಮ ಕನಕದಾಸ ಪ್ರಶಸ್ತಿ – ರಾಜ್ಯ ಸಮಿತಿ, ಕನಕದಾಸ ೪ನೆಯ ಶತಮಾನೋತ್ಸವ, ಬೆಂಗಳೂರು ೧೯೬೫.

****